ಅಖಿಲ ಭಾರತ ಪತ್ರಿಕೆ

ಮಾರ್ಚ್ 2023

# ಸಾಧನೆ, ಯೋಗ ಮತ್ತು ರೂಪಾಂತರಣ



ಬೆಲೆ : 15/-



ಫೋಟೋ: ಇಮೇಜಿಂಗ್ ಸಾವಿತ್ರಿ

‘ರೂಪಾಂತರಣ ಮತ್ತು ಅತಿಮಾನಸ ಪ್ರಜ್ಞಾ ಪಥ’

**– ಪುಟ್ಟು ಕುಲಕರ್ಣಿ**

**(ಪುಟ ಸಂಖ್ಯೆ 42)**

**ಅಖಿಲ ಭಾರತ ಪತ್ರಿಕೆ**
**ಮಾರ್ಚ್ 2023**

ಸಂಪುಟ: 33 ಸಂಚಿಕೆ: 03

## ಪರಿವಿಡಿ

# ಸಾಧನೆ, ಯೋಗ ಮತ್ತು ರೂಪಾಂತರಣ

(ಪೂರ್ಣ ಯೋಗದ ಪಕ್ಷಿನೋಟ)

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಸಾಧನೆ** 3
ಅನು: ನಾಗಜ್ಯೋತಿ ಮಾನವಿ

**ಯೋಗದ ಪ್ರಧಾನ ಕಾರ್ಯವಿಧಾನ** 8
ಅನು: ಡಾ. ಮಹಾದೇವ ಸಕ್ರಿ

**ಧ್ಯಾನಗಳು** 21
ಅನು: ನಾಗಜ್ಯೋತಿ ಮಾನವಿ

**ರೂಪಾಂತರಣ** 26
ಅನು: ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ ಕಾವ್ಯ "ಈಲಿಯನ್"** 38
ಅನು: ಡಾ॥ ಬಿ.ಆರ್. ಭೀಡ್

**ಶ್ರೀ ಅರವಿಂದರ**
**'ರೂಪಾಂತರಣ ಮತ್ತು ಅತಿಮಾನಸ ಪ್ರಜ್ಞಾ ಪಥ'** 41
ಅನು: ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ ಪ್ರಬಂಧಗಳು:**
**'ದಿವ್ಯತ್ವ ಮತ್ತು ಮಾನವ'** 51
ಅನು: ಶ್ರೀ ಪುಟ್ಟು ಕುಲಕರ್ಣಿ

**ವಾರ್ತಾಪತ್ರ** 56

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

# ಸಂಪಾದಕರ ಟಿಪ್ಪಣಿ

ಪೂರ್ಣ ಯೋಗವು ಅನುಷ್ಠಾನಗೊಳ್ಳುವಲ್ಲಿ ಅಪಾರವಾದ ಸುವ್ಯಾಪ್ತತೆಯನ್ನು ಮತ್ತು ಆಯಾಮಗಳನ್ನು ಒಳಗೊಂಡಿದೆ ಎನ್ನುವದನ್ನು ಅರಿತುಕೊಳ್ಳಲಾಗಿದೆ. ಇಲ್ಲಿ ರೂಪಿತವಾಗಿರುವ 'ಪೂರ್ಣ ಯೋಗದ ಒಂದು ಪಕ್ಷಿನೋಟ'ವು, ಈ ಯೋಗದ ಮಹತಿಯನ್ನು, ಅದು ಹೊಂದಿರುವ ವ್ಯಾಪ್ತವನ್ನು, ಮತ್ತೆ ಮೇಲಾಗಿ ಇದನ್ನು ದೈನಂದಿನ ಜೀವನದಲ್ಲಿ ಹೇಗೆ ಅನ್ವಯಿಸಿಕೊಳ್ಳಬಹುದು, ಅದರಲ್ಲೂ ಅದರ ಸಾಧಕನೋರ್ವನ ಆಧ್ಯಾತ್ಮಿಕ ಪಥದ ಪ್ರಯತ್ನಗಳಲ್ಲಿ ಅದರ ಪ್ರಾಯೋಗಿಕತೆಯಲ್ಲಿ ಅನುಷ್ಠಾನಗೊಳಿಸಬಹುದು ಎನ್ನುವದನ್ನು ಅರಿಯಲು ಇರುವ ಪ್ರಯತ್ನವಾಗಿದೆ. ಈ ಪೂರ್ಣ ಯೋಗವನ್ನು ಸಂಪೂರ್ಣವಾಗಿ ಶಬ್ದಗಳಲ್ಲಿ ನಿರೂಪಿಸಲು ಸಾಧ್ಯವಿಲ್ಲ, ಆದರೂ, ಅದರ ಪಥದ ಕುರಿತು, ಪ್ರಜ್ಞೆಯ (ಚೇತನದ) ಪ್ರಗತಿಯ ಕುರಿತು, ಆಂತರ್ಯದ ಮತ್ತು ಬಾಹ್ಯದ ಅಭಿವ್ಯಕ್ತಿಗಳಲ್ಲಿ ದಿವ್ಯತ್ವವನ್ನು ಮತ್ತು ಆಧ್ಯಾತ್ಮಿಕತೆಯನ್ನು ಕುರಿತು ಕೆಲವೊಂದು ಸೂತ್ರಗಳನ್ನು ರಚಿಸಿಕೊಳ್ಳಬಹುದಾಗಿದೆ. ಇಲ್ಲಿ ರೂಪಿತಗೊಂಡಿರುವ ಅಂಶಗಳು ಸಾಧನೆಯ, ಯೋಗದ ಮತ್ತು ರೂಪಾಂತರಣದ ವಿಷಯಗಳ ಕುರಿತು ಸ್ಪಂದಿಸುತ್ತಿವೆ. (ಎಐಎಮ್)



**ಯೋಗದ ನಾಲ್ಕು ಶಕ್ತಿಗಳು ಮತ್ತು ಉದ್ದೇಶಗಳು**

ಯೋಗವು ನಾಲ್ಕು ಶಕ್ತಿಗಳನ್ನು ಮತ್ತು ಉದ್ದೇಶಗಳನ್ನು, – ಪಾವಿತ್ರ್ಯ, ಮುಕ್ತತ್ವ, ಪರಮಾನಂದ (ದಿವ್ಯಾನಂದ) ಮತ್ತು ಪರಿಪೂರ್ಣತೆಯನ್ನು – ಒಳಗೊಂಡಿದೆ. ಯಾರೇ ಆಗಲಿ, ಈ ಪಾರಲೌಕಿಕದ, ವೈಶ್ವಿಕ, ಲೀಲಾಮಯ ಮತ್ತು ವ್ಯಕ್ತಿಗತ ಅಸ್ಮಿತೆಯಲ್ಲಿ ದೇವನ ಜೊತೆಗೆ ಈ ನಾಲ್ಕು ಸ್ವರೂಪಗಳನ್ನು ಪೂರ್ಣದಲ್ಲಿ ಅನುಸಂಧಾನಿಸಿದ್ದಾರೆಯೋ ಅವನು ಈ 'ಪೂರ್ಣ ಯೋಗಿ'ಯಾಗಿರುತ್ತಾನೆ.

ದೇವನ ಸರ್ವಾತಿಸರ್ವ ಅಭಿವ್ಯಕ್ತಗಳೆಲ್ಲವೂ ಆ ಪರಾತ್ಪರ ಪರಬ್ರಹ್ಮನ ಅಭಿವ್ಯಕ್ತಿಗಳೇ ಆಗಿವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/93 – ಶ್ರೀ ಅರವಿಂದರು**

## ಸಾಧನೆ

**– ಅನು: ನಾಗಜ್ಯೋತಿ ಮಾನವಿ**

**ಸಾಧನ, ತಪಸ್ಯ, ಆರಾಧನ, ಧ್ಯಾನ**

ಯೋಗದ ಅಭ್ಯಾಸವೇ ಸಾಧನ. ಸಾಧನದ ಫಲಿತಾಂಶವನ್ನು ಪಡೆಯಲು ಮತ್ತು ಕೆಳ ಪ್ರಕೃತಿಯನ್ನು ಜಯಿಸಲು ಸಂಕಲ್ಪವನ್ನು ಕೇಂದ್ರೀಕರಿಸುವುದೇ ತಪಸ್ಯ. ದೈವವನ್ನು ಪೂಜಿಸುವುದು, ಪ್ರೀತಿಸುವುದು, ಸ್ವ–ಸಮರ್ಪಿಸಿಕೊಳ್ಳುವುದು, ದಿವ್ಯತ್ವಕ್ಕಾಗಿ ಅಭೀಪ್ಸಿಸುವುದು, ನಾಮಸ್ಮರಣೆ ಮಾಡುವುದು, ಪ್ರಾರ್ಥಿಸುವುದು ಇವೆಲ್ಲವೂ ಆರಾಧನೆಯಾಗಿದೆ. ಪ್ರಜ್ಞೆಯನ್ನು ಅಂತರಂಗದಲ್ಲಿ ಕೇಂದ್ರೀಕರಿಸುವುದು, ಧ್ಯಾನಿಸುವುದು, ಸಮಾಧಿ ಸ್ಥಿತಿಯನ್ನು ತಲಪುವುದು ಧ್ಯಾನವಾಗಿದೆ. ಧ್ಯಾನ, ತಪಸ್ಯ ಮತ್ತು ಆರಾಧನೆ ಇವೆಲ್ಲವೂ ಸಾಧನದ ಭಾಗಗಳಾಗಿವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/215**

**ಸಾಧನವು ಸಮಯ ತೆಗೆದುಕೊಳ್ಳುತ್ತದೆ ಮತ್ತು ಇದಕ್ಕಾಗಿ ತಾಳ್ಮೆಯ ಅವಶ್ಯಕತೆ ಇದೆ**

ಸಾಧನವು ಸಮಯ ತೆಗೆದುಕೊಳ್ಳುತ್ತದೆ ಮತ್ತು ತಾಳ್ಮೆಯ ಅವಶ್ಯಕತೆಯಿದೆ. ಮನಕ್ಕೆ ಅರಿವಿಲ್ಲದೆ ಆಗಾಗ್ಗೆ ಶಾಂತತೆಯ ಅವಧಿಯಲ್ಲಿ ಒಂದು ಕೆಲಸ ನಡೆಯುತ್ತಿರುತ್ತದೆ – ಎಲ್ಲವೂ ಜಡ ಮತ್ತು ಮಂದವಾಗಿ ಕಾಣುತ್ತಿರುತ್ತದೆ; ಆದರೆ ಒಂದು ವೇಳೆ ನಿಮಗೆ ತಾಳ್ಮೆ ಮತ್ತು ಆತ್ಮವಿಶ್ವಾಸವಿದ್ದರೆ, ಪ್ರಜ್ಞೆಯು ಈ ನಿಶ್ಚಲತೆಯ ಅವಧಿಯ ಮೂಲಕ ಹಾದು ಹೊಸ ಅರುಳುವಿಕೆಗಳು ಮತ್ತು ವಿಷಯಗಳೆಡೆಗೆ ಸಾಗುತ್ತದೆ, ಆ ಸಮಯದಲ್ಲಿ ಅದು ಅಸಾಧ್ಯವೆನಿಸಿದವೆಲ್ಲವೂ ಸಾಧ್ಯವಾಗುತ್ತವೆ. ಈ ಸ್ಥಿತಿಯಿಂದ ಹೊರಬರಬೇಕೆಂಬ ತುಡಿತವು ಯಾವಾಗಲೂ ಒಂದು ದೋಷವಾಗಿದೆ – ಈ ಮಾರ್ಗದಲ್ಲಿ ನಾವು ಸತತ ಪ್ರಯತ್ನ ಮಾಡುವ ನಿಯಮಕ್ಕೆ ಅಂಟಿಕೊಳ್ಳಬೇಕಾಗಿದೆ. ಮತ್ತು ಇದರಿಂದ ಎಲ್ಲಾ ಅಡೆತಡೆಗಳಿಂದ ಹೊರಬರಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/111**

**ನಿಜವಾದ ಸಾಧನವು ದಿವ್ಯತ್ವಕ್ಕಾಗಿಯೇ ಇದೆ**

ದಿವ್ಯತ್ವಕ್ಕಾಗಿ ಅಭೀಪ್ಸಿಸುವುದು, ಇದು ನಿಮ್ಮ ಜೀವನದ ಮುಖ್ಯ ಗುರಿ, ನಿಮ್ಮ ಅಂತರಂಗದ ಅವಶ್ಯಕತೆ ಆಗಿದೆಯೋ ಇಲ್ಲವೋ ಎಂಬುದೇ ಇಲ್ಲಿ ಮುಖ್ಯ ಪ್ರಶ್ನೆಯಾಗಿದೆ. ತಮಗೋಸ್ಕರ ಸಾಧನ ಮಾಡುವುದು ಇನ್ನೊಂದು ವಿಷಯವಾಗಿದೆ. ಇದನ್ನು ನೀವು ಮಾಡಬಹುದು ಅಥವಾ ಬಿಡಬಹುದು. ನಿಜವಾದ ಸಾಧನವು ದೈವತ್ವಕ್ಕಾಗಿಯೇ ಇರುತ್ತದೆ – ಇದು ಆತ್ಮನ ಅವಶ್ಯಕತೆ ಮತ್ತು ಒಂದು ವೇಳೆ ಕೆಲವು ಹತಾಶೆಯ ಘಳಿಗೆಯಲ್ಲಿ ಸಾಧನವನ್ನು ಬಿಟ್ಟುಬಿಡುವುದು ಸಾಧ್ಯವಿದೆ ಎಂದು ಯೋಚಿಸಿದರೂ ಅದನ್ನು ಬಿಡಲು ಸಾಧ್ಯವಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/240**

**ಹೃದಯದಲ್ಲಿ ಮತ್ತು ಶಿರದಲ್ಲಿ ಕೇಂದ್ರಿಕರಣಗೊಳಿಸುವುದು**

ಹೃದಯದಲ್ಲಿ ಮತ್ತು ಶಿರದಲ್ಲಿ ಕೇಂದ್ರೀಕರಣಗೊಳಿಸುವ ಎರಡೂ ಕ್ರಿಯೆಯನ್ನು ಉಪಯೋಗಿಸಬಹುದು. ಪ್ರತಿಯೊಂದಕ್ಕೂ ಅದರದೇ ಆದ ಪ್ರಾಮುಖ್ಯತೆಯಿದೆ. ಹೃದಯದ ಮೇಲಿನ ಕೇಂದ್ರೀಕರಣವು ಚೈತನ್ಯ ಪುರುಷನನ್ನು ತೆರೆಯುತ್ತದೆ ಮತ್ತು ಭಕ್ತಿ, ಪ್ರೀತಿ ಮತ್ತು ಶ್ರೀಮಾತೆಯೊಂದಿಗಿನ ಐಕ್ಯತೆ. ಹೃದಯದಲ್ಲಿ

ಆಕೆಯ ಸಾನಿಧ್ಯ ಮತ್ತು ನಮ್ಮ ಪ್ರಕೃತಿಯಲ್ಲಿ ಆಕೆಯ 'ಶಕ್ತಿ'ಯ ಪ್ರಭಾವವನ್ನು ತರುತ್ತದೆ. ತಲೆಯ ಮೇಲಿನ ಕೇಂದ್ರೀಕರಣವು ಆತ್ಮ ಸಾಕ್ಷಾತ್ಕರಕ್ಕೆ, ಮನದ ಆಚೆಗಿನ ಪ್ರಜ್ಞೆಗೆ, ದೇಹದ ಆಚೆಗೆ ಪ್ರಜ್ಞೆಯು ಆರೋಹಣಕ್ಕೆ ಮತ್ತು ಉನ್ನತ ಪ್ರಜ್ಞೆಯು ದೇಹದೊಳಗೆ ಅವರೋಹಿಸುವುದಕ್ಕೆ ಮನವನ್ನು ತೆರೆದಿಡುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/326**

### ಸಾಧನದ ಅವಶ್ಯಕತೆಯಿದೆ

ಸಾಮಾನ್ಯ ಪ್ರಕೃತಿಯ ರೂಢಿಗಳು ಅವರೋಹಣಕ್ಕೆ ಯಾವುದೇ ಅಡೆತಡೆ ಅಲ್ಲ ಎಂದಿದ್ದರೆ, ಸಾಧನದ ಅವಶ್ಯಕತೆಯಾದರೂ ಏನಿದೆ? ಇಡೀ ಉನ್ನತ ಪ್ರಜ್ಞೆಯು ಇಳಿದು ಬಂದು ಮತ್ತು ಒಂದೇ ನಿಮಿಷದಲ್ಲಿ ನಿಮ್ಮನ್ನು ಅತಿಮಾನವನ್ನಾಗಿ ಬದಲಾಯಿಸುವುದನ್ನು ಯಾವುದು ತಾನೇ ತಡೆಯಬಲ್ಲದು? ಕೆಳಪ್ರಕೃತಿಯ ವಿಷಯಗಳು ಹಠಮಾರಿ ಪ್ರತಿರೋಧವನ್ನು ಒಡ್ಡುತ್ತವೆ ಎಂಬ ಕಾರಣದಿಂದ ಬಹುಸಮಯದ ಸಾಧನವು ಅವಶ್ಯಕವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/487**

### ಸಾಧನಕ್ಕೆ ಬೇಕಾದ ಅತ್ಯುತ್ತಮ ಮನೋಧೋರಣೆ

ಸಾಧನಕ್ಕಾಗಿ ನೀವು ಶ್ರೀಮಾತೆಯ ಮೇಲೆ ಅವಲಂಬನೆಯಾಗುವುದು ಅತ್ಯುತ್ತಮವಾದ ಮನೋದೋರಣೆಯಾಗಿದೆ. ಅತ್ಯವಶ್ಯಕವಾಗಿ ಆಕೆಯ 'ಶಕ್ತಿ'ಯೇ ನಿಮ್ಮೊಳಗೆ ಸಾಧನವನ್ನು ಮಾಡುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/276**

### ಪ್ರತಿಯೊಬ್ಬ ಸಾಧಕನಿಗೆ ತನ್ನದೇ ಆದ ಪ್ರತ್ಯೇಕ ಸಾಧನವಿದೆ

ಪ್ರತಿಯೊಬ್ಬ ಸಾಧಕನಿಗೆ ತನ್ನದೇ ಆದ ಪ್ರತ್ಯೇಕ ಸಾಧನ, ಆತನಿಗೆ ತನ್ನದೇ ಆದ ತೊಂದರೆಗಳು, ಅನುಸರಿಸಬೇಕಾದ ತನ್ನದೆ ಆದ ಮಾರ್ಗವಿದೆ. ಸಾಧನವು ತನ್ನ ಮತ್ತು ದೈವನ ನಡುವೆ ಇರುತ್ತದೆಯೋ ಹೊರತು ಬೇರೆ ಯಾರು ಅದರಲ್ಲಿನ ಭಾಗೀದಾರರಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/630**

## ನಿಶ್ಚಲತೆಯ ಬುನಾದಿ ಮತ್ತು ದೈವೀ ಶಕ್ತಿಯು ಕಾರ್ಯ ನಿರ್ವಹಿಸಲು ಅನುಮತಿ ನೀಡುವುದು

ಸಾಧನವು, ಉನ್ನತ ಪ್ರಜ್ಞೆ ಮತ್ತು ಪ್ರಕೃತಿಯ ಹಳೆಯ ಶಕ್ತಿಗಳ ನಡುವಿನ ಹೋರಾಟವಾಗಿದ್ದು, ದುಃಖ ಮತ್ತು ಆಂತರಿಕ ಕ್ಲೇಶ ತರುವಂತಿದ್ದರೆ, ನೀವು ಅಂತಹ ಸಾಧನ ಮಾಡುವುದು ನಮಗೆ ಬೇಕಿಲ್ಲ. ನಮ್ಮ ಯೋಗದ ಭಾವ ಅದಲ್ಲ. ನೀವೇನು ಮಾಡಬೇಕೆಂದು ನಾವು ಬಯಸುತ್ತೇವೆ ಎಂದರೆ ನಿಮ್ಮ ನಿಶ್ಚಲತೆಯನ್ನು ಮರಳಿ ಪಡೆಯುವುದು ಮತ್ತು ಅದರಲ್ಲಿ ಮುಂದುವರೆಯುವುದು. ನಿಶ್ಚಲತೆಯ ತಳಹದಿಯ ಮೇಲೆ ದೈವೀ ಶಕ್ತಿಯು ನಿಮ್ಮಲ್ಲಿ ದೃಢವಾಗಿ ಮತ್ತು ಸಂಪೂರ್ಣವಾಗಿ ಕೆಲಸ ಮಾಡಲು ಅವಕಾಶ ನೀಡುವುದು. ಯಾವಾಗಲೂ ಅತ್ಯುತ್ತಮ ವಿಧಾನವಾಗಿದೆ – ಒಂದು ದೊಡ್ಡ ವೈಯಕ್ತಿಕ ಪ್ರಯತ್ನ ಗಲಭೆ ಮತ್ತು ಹೋರಾಟಗಳಿಂದ ಮುಂದುವರೆಯುವ ಅವಶ್ಯಕತೆಯಿಲ್ಲ. ಮರಳಿ ನಿಶ್ಚಲ ಸ್ಥಿತಿಗೆ ಬನ್ನಿ. ನೀವು ಮೊದಲು ಮಾಡಿದಂತೆ ಮತ್ತೊಮ್ಮೆ ನಿಮ್ಮನ್ನು ನೀವು ತೆರೆದಿಟ್ಟುಕೊಳ್ಳಿ, ಆಗ ಒಂದು ಅಥವಾ ಎರಡು ದಿನಗಳಲ್ಲಿ ನಿಮ್ಮ ನಿದ್ರೆ ಅಥವಾ ಆರೋಗ್ಯವನ್ನು ಮರಳಿ ಪಡೆಯಬಹುದು. ಮತ್ತು ಹೆಚ್ಚೆಚ್ಚು ತೊಂದರೆಗಲಿಲ್ಲದ ಆಂತರಿಕವಾಗಿ ಬೆಳೆಯುತ್ತಿರುತ್ತೀರಿ. ಮತ್ತು ಶ್ರೀಮಾತೆಯ 'ಶಕ್ತಿ ಮತ್ತು ಕೃಪೆ'ಯು ನಿಮ್ಮನ್ನು ನೆಡಸಲಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/746**

## ಯೋಗ, ಸಾಧನ, ಧ್ಯಾನ

ಯೋಗವೆಂದರೆ ದೈವದೊಂದಿಗಿನ ಐಕ್ಯತೆಯಾಗಿದೆ. ದೈವದೊಂದಿಗೆ ಐಕ್ಯವಾಗಲು ನೀವು ಏನೆಲ್ಲಾ ಮಾಡುತ್ತೀರೋ ಅದು ಸಾಧನವಾಗಿದೆ. ನೀವು ಸಾಮಾನ್ಯ ಮಾನವ ಪ್ರಜ್ಞೆಯಿಂದ ಹೊರಬಂದು ಮತ್ತು ದೈವೀ ಪ್ರಜ್ಞೆಯೊಡನೆ ಸಂಪರ್ಕಕ್ಕೆ ಬರಬೇಕಾಗುತ್ತದೆ.

ಅದಕ್ಕಾಗಿ ಯಾವಾಗಲೂ ಶ್ರೀಮಾತೆಯನ್ನು ಕರೆಯಿರಿ, ಆಕೆಗೆ ನಿಮ್ಮನ್ನು ನೀವು ತೆರೆದುಕೊಳ್ಳಿರಿ, ನಿಮ್ಮ ಮನದ, ಮತ್ತು ಪ್ರಾಣದ ಆಸೆ, ಚಡಪಡಿಕೆ, ಗಲಭೆಗಳನ್ನು ತಿರಸ್ಕರಿಸಲು ಯೋಗ್ಯರಾಗಲು ಆಕೆಯ 'ಶಕ್ತಿ' ನಿಮ್ಮಲ್ಲಿ ಕೆಲಸ ಮಾಡಲು ಅಭೀಪ್ಸಿಸಿ ಮತ್ತು ಪ್ರಾರ್ಥಿಸಿ ಮನ ಮತ್ತು ಪ್ರಾಣವನ್ನು ನಿಶ್ಚಲಗೊಳಿಸಿ ಮತ್ತು ಶ್ರೀಮಾತೆಯ ಶಾಂತಿ, ಶ್ರೀಮಾತೆಯ ಸಾನಿಧ್ಯ, ಆಕೆಯ ಬೆಳಕು, ಶಕ್ತಿ ಮತ್ತು ಅದಕ್ಕಾಗಿ ಅಭೀಪ್ಸೆಯನ್ನು ಕೇಂದ್ರೀಕರಿಸುವುದೇ ಧ್ಯಾನವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/135**

## ಶೂನ್ಯದಲ್ಲಿ ದೈವೀ ಶಕ್ತಿಯು ಏನನ್ನೂ ಮಾಡುವುದಿಲ್ಲ

ಸಾಧನವು ಅವಶ್ಯವಾಗಿದೆ ಮತ್ತು ದೈವೀ 'ಶಕ್ತಿ'ಯ ಶೂನ್ಯದಲ್ಲಿ ಏನನ್ನೂ ಮಾಡಲಾರದು. ಆದರೆ ಪ್ರತಿಯೊಬ್ಬರನ್ನು ಅವರವರ ಪ್ರಕೃತಿಯ ಪ್ರಕಾರ ನಡೆಸುತ್ತದೆ, ಮತ್ತು ಶ್ರೀಮಾತೆಯ ಕಾರ್ಯ ತನ್ನೊಳಗೆ ಕೆಲಸ ಮಾಡುತ್ತದೆ ಮತ್ತು ತನಗಾಗಿ ಎಲ್ಲವನ್ನೂ ಮಾಡುತ್ತಿದ್ದಾಳೆ ಎಂದು ಭಾವಿಸಿದಾಗ ದೈವೀ ಕಾರ್ಯ ಆರಂಭವಾಗುತ್ತದೆ. ಅಲ್ಲಿಯವರೆಗೆ ಸಾಧಕನ ಅಭೀಪ್ಸೆ, ಸ್ವ–ಅರ್ಪಣೆ, ಆರೋಹಣ ಮತ್ತು ಶ್ರೀಮಾತೆಯ ಕಾರ್ಯಕ್ಕೆ ಬೆಂಬಲಿಸುವುದು, ಮಾರ್ಗದಲ್ಲಿ ಅಡ್ಡಿಬರುವ ಎಲ್ಲವನ್ನೂ ತಿರಸ್ಕರಿಸುವುದು. ಇವು ಅತ್ಯವಶ್ಯ ಮತ್ತು ಅನಿವಾರ್ಯವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/137**

## ಸಾಧನದ ಗುರಿ

ಪ್ರತಿಯೊಂದು ಸತ್ತೆಯು ವಿಶ್ವಾತ್ಮಕ 'ಶಕ್ತಿ'ಯ ಅಂದರೆ, ಶ್ರೀಮಾತೆಯ ಉಪಕರಣವಾಗಿದೆ ಎಂಬುದು ಸತ್ಯವಾಗಿದೆ. ಆದರೆ ಸಾಧನದ ಗುರಿಯು ಅಪ್ರಜ್ಞಾಪೂರ್ವಕ ಮತ್ತು ಅಪರಿಪೂರ್ಣವಾಗುವ ಬದಲಾಗಿ ಪ್ರಜ್ಞಾಪೂರ್ವಕ ಮತ್ತು ಪರಿಪೂರ್ಣ ಉಪಕರಣವಾಗುವುದಾಗಿದೆ. ಯಾವಾಗ ನೀವು ಕೆಳಪ್ರಕೃತಿಯ ಅಜ್ಞಾನದ ಅಳ್ಳುವಿಕೆಗೆ ವಿಧೇಯರಾಗಿರುವುದಿಲ್ಲವೋ ಆದರೆ ಶ್ರೀಮಾತೆಗೆ ಶರಣಾಗತಿಯಾಗಿ ಮತ್ತು ಜಾಗೃತರಾಗುತ್ತೀರೋ ಆಗ ನೀವು ಪ್ರಜ್ಞಾಪೂರ್ವಕ ಮತ್ತು ಪರಿಪೂರ್ಣ ಉಪಕರಣರಾಗುತ್ತೀರಿ. ಹಾಗಾಗಿ ಇಲ್ಲಿಯೂ ನಿಮ್ಮ ಅಂತಃಪ್ರಜ್ಞೆಯು ಪರಿಪೂರ್ಣವಾಗಿ ಸತ್ಯವಾಗಿತ್ತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/243**

## ದೈವೀ ಶಕ್ತಿಗೆ ನಿಮ್ಮನ್ನು ನೀವು ತೆರೆದಿಟ್ಟುಕೊಳ್ಳಿ

ಈ ಸಾಧನದಲ್ಲಿ ಕೇವಲವಾದ ಅವಶ್ಯಕತೆ ಎಂದರೆ 'ದೈವೀ ಶಕ್ತಿ'ಗೆ ನಿಮ್ಮನ್ನು ನೀವು ತೆರೆದಿಟ್ಟುಕೊಳ್ಳುವುದು; ನೀವು ನಿಮ್ಮನ್ನು ತೆರೆದಿಟ್ಟುಕೊಂಡರೆ ಆಧ್ಯಾತ್ಮಿಕ ಅನುಭಾವದ ಮೂಲಕ ಅವಶ್ಯವಾದ ತಿಳುವಳಿಕೆ ಅಥವಾ ಜ್ಞಾನವು ತನ್ನಿಷ್ಟಕ್ಕೆ ತಾನೇ ಬರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/448 – ಶ್ರೀ ಅರವಿಂದರು**

# ಯೋಗದ ಪ್ರಧಾನ ಕಾರ್ಯವಿಧಾನ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

## ಯೋಗ–ಸಿದ್ಧಿಯ ಎರಡು ಸರ್ವೋತ್ತಮ ಪಥಗಳು

ಶಾಂತಿ ಅಥವಾ ನಿಶ್ಯಬ್ದತೆ ಬರುವ ಅತ್ಯಂತ ನಿಖರವಾದ ಮಾರ್ಗವು ಅವರೋಹಣವಾಗಿದೆ (ಮೇಲಿನಿಂದ ಕೆಳಗೆ ಇಳಿಕೆ) ಎಂದು ನಾನು ಹೇಳಿದ್ದೆ. ತೋರಿಕೆಯಲ್ಲಿ ಅಲ್ಲದಿದ್ದರೂ, ವಾಸ್ತವದಲ್ಲಿ ಅವುಗಳು (ಶಾಂತಿ ಅಥವಾ ಮೌನ) ಬರುವುದು ಹಾಗೆಯೆ; – ತೋರಿಕೆಯಲ್ಲಿ ಅಲ್ಲದಿದ್ದರೂ ಎಂದು ಹೇಳಿದೆ, ಅದು ಯಾಕೆಂದರೆ ಸಾಧಕನಿಗೆ ಆ ಪ್ರಕ್ರಿಯೆಯ ಅರಿವು ಯಾವಾಗಲೂ ಇರುವುದಿಲ್ಲ; ಶಾಂತಿಯು ಅವನಲ್ಲಿ ನೆಲೆಗೊಳ್ಳುವುದನ್ನು ಅಥವಾ ಕನಿಷ್ಠ ಪಕ್ಷ ಅದು ಅಭಿವ್ಯಕ್ತಗೊಳ್ಳುವುದನ್ನಾದರೂ ಅವನು ಅನುಭವಿಸುತ್ತಾನೆ, ಆದರೆ ಅದು ಹೇಗೆ ಬಂತು ಮತ್ತು ಎಲ್ಲಿಂದ ಬಂತು ಎನ್ನುವ ಅರಿವು ಅವನಿಗಿಲ್ಲ. ಉನ್ನತ ಪ್ರಜ್ಞೆಗೆ (ಉನ್ನತ ಅರಿವಿಗೆ) ಸೇರಿದ ಆಧ್ಯಾತ್ಮಿಕ ಶಾಂತಿ ಮತ್ತು ಮೌನ ಮಾತ್ರವಲ್ಲದೆ ಬೆಳಕು, ಶಕ್ತಿ, ಜ್ಞಾನ, ಉನ್ನತ ದೃಶ್ಯ ಗ್ರಹಿಕೆ ಹಾಗೂ ಯೋಚನೆ, ಆನಂದ ಎಲ್ಲವೂ ಮೇಲಿನಿಂದ ಬರುತ್ತವೆ ಎನ್ನವುದು ಸತ್ಯವಾದ ಸಂಗತಿಯಾಗಿದೆ. ಒಂದು ನಿರ್ದಿಷ್ಟ ಮಿತಿಯವರೆಗೆ ಅವುಗಳು ಒಳಗಡೆಯಿಂದ ಬರುವ ಸಾಧ್ಯತೆಯೂ ಇದೆ, ಯಾಕೆಂದರೆ ಚೈತ್ಯ ಪುರುಷನು ಅವುಗಳಿಗೆ ನೇರವಾಗಿ ಮುಕ್ತನಾಗಿರುವುದರಿಂದ (ತೆರೆದುಕೊಂಡಿರುವುದರಿಂದ) ಅವುಗಳು ಮೊದಲು ಅಲ್ಲಿ ಬರುತ್ತವೆ, ನಂತರ ಅವುಗಳು ಚೈತ್ಯನಿಂದ ಅಥವಾ ಅದು ಮುನ್ನೆಲೆಗೆ ಬರುವುದರಿಂದ ಪುರುಷನ ಉಳಿದ ಭಾಗಗಳಲ್ಲಿ ಪ್ರಕಟಗೊಳ್ಳುತ್ತವೆ. ಒಳಗಡೆಯಿಂದ ಪ್ರಕಟಗೊಳ್ಳುವಿಕೆ ಅಥವಾ ಮೇಲಿನಿಂದ ಅವರೋಹಣ ಇವೆರಡೂ ಮಾರ್ಗಗಳು ಯೋಗ–ಸಿದ್ಧಿಯ ಸರ್ವೋತ್ತಮ ಪಥಗಳಾಗಿವೆ. ಬಾಹ್ಯ ಮೇಲ್ಮೈ ಮನಸ್ಸಿನ ಅಥವಾ ಭಾವನೆಗಳ ಪ್ರಯತ್ನ, ಯಾವುದೊ ಒಂದು ತೆರನಾದ ತಪಸ್ಸು, ಈ ಸಂಗತಿಗಳನ್ನು ನಿರ್ಮಿಸಿವೆ ಅಥವಾ ಬಲಪಡಿಸಿವೆ ಎಂದು ತೋರಬಹುದು. ಆದರೆ ಮೂಲ ಸ್ವರೂಪದ ಎರಡು ಮಾರ್ಗಗಳ ಫಲಿತಾಂಶಕ್ಕೆ ಹೋಲಿಸಿದಾಗ ಇವುಗಳ ಫಲಿತಾಂಶವು ಸಾಮಾನ್ಯವಾಗಿ ಅನಿಶ್ಚಿತವಾಗಿರುತ್ತದೆ ಮತ್ತು ಪೂರ್ಣವಾಗಿರುವುದಿಲ್ಲ. ಆದ್ದರಿಂದ, ಈ ಯೋಗದಲ್ಲಿ ನಾವು ಯಾವಾಗಲೂ "ತೆರೆದಿರುವಿಕೆಯ ಅಥವಾ ಮುಕ್ತತೆಯ" – ನಮ್ಮ ಅತ್ಯಂತ ಒಳಗಿನ ಭಾಗಗಳ ಕಡೆಗೆ, ಚೈತ್ಯನ ಕಡೆಗೆ, ಆಂತರಿಕ ಮನಸ್ಸಿನ,

ಪ್ರಾಣದ, ದೈಹಿಕದ ಒಳ–ತೆರೆದುಕೊಳ್ಳುವಿಕೆಯ ಮೇಲೆ ಮತ್ತು ಮನಸ್ಸಿನ ಮೇಲೆನಿದೆಯೊ ಅದರ ಮೇಲ್ಮುಖ ತೆರೆದುಕೊಳ್ಳುವಿಕೆಯ ಕಡೆಗೆ ಹೆಚ್ಚು ಒತ್ತು ನೀಡುತ್ತೇವೆ – ಇದು ಸಾಧನೆಯ ಫಲಗಳಿಗಾಗಿ ಅನಿವಾರ್ಯ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/323–324**

## ಅತ್ಯುನ್ನತ ಅಲೌಕಿಕ ಪುರುಷ

ಅತ್ಯುನ್ನತ ಅಲೌಕಿಕ ಪುರುಷನು ನಮ್ಮ ವ್ಯಕ್ತಿತ್ವದ ಮತ್ತು ದೈಹಿಕ ಇರುವಿಕೆಯ ಹಿಂದುಗಡೆ ಇಲ್ಲ, ಅವನು ಅದರ ಮೇಲ್ಗಡೆ ಇದ್ದಾನೆ ಮತ್ತು ಅದರಾಚೆಗೆ ಇರುವವನಾಗಿದ್ದಾನೆ. ಆಂತರಿಕ ಕೇಂದ್ರಗಳಲ್ಲಿ ಅತ್ಯಂತ ಆಳವಾದ ಕೇಂದ್ರವು ಹೃದಯಲ್ಲಿರುವಂತೆ, ಅತ್ಯಂತ ಉನ್ನತ ಕೇಂದ್ರವು ತಲೆಯಲ್ಲಿದೆ; ಆದರೆ ಆತ್ಮನಿಗೆ ನೇರವಾಗಿ ತೆರೆದುಕೊಳ್ಳುವ ಕೇಂದ್ರವು ತಲೆಯ ಮೇಲಿದೆ, ಭೌತಿಕ ದೇಹದ ಹೊರಗಿದೆ, – ಸೂಕ್ಷ್ಮ ಶರೀರದಲ್ಲಿದೆ. ಈ ಅಂತಃಪುರುಷನು (ಆತ್ಮನು) ಎರಡು ಅಂಶಗಳನ್ನು ಹೊಂದಿದ್ದಾನೆ ಮತ್ತು ಅದನ್ನು ಅರಿತುಕೊಳ್ಳುವ ಪರಿಣಾಮಗಳು ಈ ಎರಡೂ ಅಂಶಗಳ ಅನುಗುಣವಾಗಿವೆ. ಮೊದಲನೆಯ ಅಂಶ ಸ್ಥಿರ ಅಥವಾ ಅಚಲವಾಗಿರುವ ಅಂಶ – ಅದು ವ್ಯಾಪಕವಾದ ಶಾಂತಿಯ, ಸ್ವತಂತ್ರದ, ಮೌನದ ಸ್ಥಿತಿ: ಈ ಮೌನ ಪುರುಷನು ಯಾವುದೇ ಕ್ರಿಯೆಯ ಅಥವಾ ಅನುಭವದ ಪ್ರಭಾವಕ್ಕೊಳಪಡುವುದಿಲ್ಲ; ಅದು ಪಕ್ಷಪಾತವಿಲ್ಲದೆ ಅವುಗಳನ್ನು ಬೆಂಬಲಿಸುತ್ತದೆ, ಆದರೆ ಅವುಗಳ ಉತ್ಪತ್ತಿಗೆ ಅಥವಾ ಹುಟ್ಟಿಗೆ ಕಾರಣವೆಂದು ತೋರುವುದಿಲ್ಲ. ಉದಾಸೀನವೆಂಬಂತೆ, ಅವುಗಳ ಹಿಂದೆ ಪ್ರತ್ಯೇಕವಾಗಿ ಅಥವಾ ನಿರಾಸಕ್ತವಾಗಿ ನಿಂತಂತೆ ತೋರುತ್ತದೆ. ಎರಡನೆಯ ಅಂಶವು ಚಲನಶೀಲವಾಗಿದೆ. ಅದು ಬ್ರಹ್ಮಾಂಡ ಪುರುಷನಂತೆ ಅನುಭವಿಸಲ್ಪಡುತ್ತದೆ ಅಥವಾ ಸಂಪೂರ್ಣ ಬ್ರಹ್ಮಾಂಡ ಕ್ರಿಯೆಯನ್ನು ಹೊಂದಿದ, ಅದನ್ನು ಬೆಂಬಲಿಸುವ ಮಾತ್ರವಲ್ಲದೆ ಅದನ್ನು ಉತ್ಪತ್ತಿ ಮಾಡುವ /ಹುಟ್ಟುಹಾಕುವ ಪುರುಷ(ಆತ್ಮ)ವಾಗಿದೆ, – ಬ್ರಹ್ಮಾಂಡ ಕ್ರಿಯೆ ಎಂದರೆ ನಮ್ಮ ಭೌತಿಕ ಪುರುಷನಿಗೆ ಸಂಬಂಧಿಸಿದ್ದು ಮಾತ್ರವಲ್ಲದೆ ಅದರಾಚೆ ಇರುವ ಜಗತ್ತು ಮತ್ತು ಮಿಕ್ಕೆಲ್ಲ ಜಗತ್ತುಗಳು, ಆದಿಭೌತಿಕದ ಮೇಲಿನ ಹಾಗೂ ವಿಶ್ವದ ಎಲ್ಲ ಭೌತಿಕ ಶ್ರೇಣಿಗಳಾಚೆ ಇರುವ ಪುರುಷನಿಗೆ ಸಂಬಂಧಿಸಿದ್ದು. ಇದೆಲ್ಲಕ್ಕಿಂತ ಹೆಚ್ಚಾಗಿ ನಾವು ಆತ್ಮನನ್ನು ಎಲ್ಲವುಗಳಲ್ಲಿರುವ, ಎಲ್ಲ ವೈಯಕ್ತಿಕ ಹುಟ್ಟುಗಳನ್ನು ಅಥವಾ ಬ್ರಹ್ಮಾಂಡದ ಇರುವಿಕೆಯನ್ನು ಮೀರಿದ ಏಕ ಎಂದು ಭಾವಿಸುತ್ತೇವೆ. ವಿಶ್ವಾತ್ಮನಲ್ಲಿ

ಒಂದಾಗಬೇಕಾದರೆ, ನಾನು ಎನ್ನುವ (ಪ್ರತಿಷ್ಠೆಯಿಂದ) ಮುಕ್ತಿ ಹೊಂದಬೇಕು; ಆಗ ಈ ತನ್ನತನವು ಪ್ರಜ್ಞೆಯಲ್ಲಿನ ಒಂದು ಚಿಕ್ಕ ಸಾಂದರ್ಭಿಕ ಸಾಧನವಾಗುತ್ತದೆ ಅಥವಾ ನಮ್ಮ ಪ್ರಜ್ಞೆಯಿಂದ ಪೂರ್ತಿಯಾಗಿ ಮಾಯವಾಗುತ್ತದೆ. ಅದು ತನ್ನತನದ/ಪ್ರತಿಷ್ಠೆಯ ಅಳಿವು ಅಥವಾ ಅದರ ಮುಕ್ತಿ ಎಂದು ಹೇಳಬಹುದು. ಎಲ್ಲಕ್ಕಿಂತ ಮೀರಿದ ಅತೀತವಾದುದರೊಳಗೆ ಪ್ರವೇಶಿಸುವ ಕ್ರಿಯೆಯು ನಮ್ಮನ್ನು ಸಂಪೂರ್ಣವಾಗಿ ವಿಶ್ವ ಪ್ರಜ್ಞೆಯನ್ನು ಮತ್ತು ಅದರ ಕ್ರಿಯೆಯನ್ನೂ ಸಹ ಮೀರಿಸುವ ಸಾಮರ್ಥ್ಯವುಳ್ಳವರನ್ನಾಗಿ ಮಾಡುತ್ತದೆ. ಇದು ವಿಶ್ವ–ಅಸ್ತಿತ್ವದ ಅಳಿವು, ಲಯ, ಮೋಕ್ಷ, ನಿರ್ವಾಣ ಎಂದು ಕರೆಯಲ್ಪಡುವ ಆ ಸಂಪೂರ್ಣ ವಿಮೋಚನೆಗೆ ದಾರಿಯಾಗಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/325–326**

**ಮೇಲ್ಮುಖವಾಗಿ ತೆರೆದುಕೊಳ್ಳುವ ಅನುಭವಗಳು**

ಮೇಲ್ಮುಖವಾಗಿ ತೆರೆದುಕೊಳ್ಳುವ ಅಂಶವು ನಮ್ಮನ್ನು ಶಾಂತಿಯ ಕಡೆಗೆ, ಮೌನದ ಕಡೆಗೆ ಮತ್ತು ನಿರ್ವಾಣದ ಕಡೆಗೆ ಮಾತ್ರ ಮುನ್ನೆಡಸಲಾರದು ಎಂಬುದನ್ನು ಗಮನಿಸಬೇಕು. ಸಾಧಕನು ಒಂದು ಶ್ರೇಷ್ಠವಾದ, ಅಂತಿಮವಾಗಿ ಅನಂತ ಶಾಂತಿಯ, ಮೌನದ ಎಲ್ಲ ಭೌತಿಕ ಮತ್ತು ಅದಿ–ಭೌತಿಕ ಅನಂತದಲ್ಲಿ ವಿಸ್ತರಿಸಿರುವ ಹಾಗೆ ನಮ್ಮ ತಲೆಯ ಮೇಲಿನ ವಿಶಾಲತ್ವದ ಅರಿವನ್ನು ಮಾತ್ರ ಹೊಂದುವುದಲ್ಲದೆ ಅವನಿಗೆ ಬೇರೆ ಸಂಗತಿಗಳಾದ ಅಗಾಧ ಶಕ್ತಿಯಲ್ಲಿರುವ ಎಲ್ಲ ಪ್ರಭಾವದ, ಅಗಾಧ ಬೆಳಕಿನಲ್ಲಿರುವ ಜ್ಞಾನದ, ಅಗಾಧ ಆನಂದದಲ್ಲಿರುವ ಅತ್ಯಾನಂದದ ಬಗ್ಗೆ ಅರಿವನ್ನೂ ಕೂಡ ಹೊಂದುತ್ತಾನೆ. ಮೊದಲಿಗೆ ಅವುಗಳು ಅನಿವಾರ್ಯವೆಂದು, ಅನಿರ್ದಿಷ್ಟವೆಂದು, ಪರಿಪೂರ್ಣವೆಂದು, ಸರಳ, ಕೇವಲವೆಂದು ತೋರುತ್ತವೆ; ಇವುಗಳ ಯಾವುದಾದರೊಂದರಲ್ಲಿ ನಿರ್ವಾಣವು ಸಾಧ್ಯವೆಂದು ತೋರುತ್ತದೆ. ಈ ಬಲವು ಎಲ್ಲ ಬಲಗಳನ್ನು, ಈ ಬೆಳಕು ಎಲ್ಲ ಬೆಳಕುಗಳನ್ನು, ಈ ಆನಂದ ಎಲ್ಲ ಅತ್ಯಾನಂದವನ್ನು ಒಳಗೊಂಡಿರುವುದನ್ನು ಕೂಡ ನಾವು ಕಾಣುತ್ತೇವೆ. ಇದೆಲ್ಲವೂ ನಮ್ಮಲ್ಲಿ ಇಳಿದು ಬರಬಹುದು (ಪ್ರವೇಶಿಸಬಹುದು). ಅವುಗಳಲ್ಲಿ ಯಾವುದಾದರೊಂದು ಅಥವಾ ಅವೆಲ್ಲವುಗಳೂ ಸಹ ಕೆಳಗೆ ಬರಬಹುದು (ಶಾಂತಿಯೊಂದು ಮಾತ್ರವಲ್ಲ); ಸುರಕ್ಷೆ ಇರುವಂಥದ್ದು ಮಾತ್ರ ಪರಿಪೂರ್ಣ ಸ್ಥಬ್ದತೆಯನ್ನು ಮತ್ತು ಶಾಂತಿಯನ್ನು ಮೊದಲು ಕೆಳ ತರುತ್ತದೆ,

ಯಾಕೆಂದರೆ ಅದು ಉಳಿದವುಗಳ ಅವರೋಹಣವನ್ನು ಹೆಚ್ಚು ನಿರ್ಭೀತವನ್ನಾಗಿ ಮಾಡುತ್ತದೆ; ಇಲ್ಲದಿದ್ದರೆ ಬಾಹ್ಯ ಪ್ರಕೃತಿಗೆ ಬಹಳಷ್ಟು ಶಕ್ತಿಯನ್ನು, ಬೆಳಕನ್ನು, ಜ್ಞಾನವನ್ನು ಅಥವಾ ಅನಂದವನ್ನು ಒಳಗೊಳ್ಳುವುದು ಅಥವಾ ತಾಳಿಕೊಳ್ಳುವುದು ಕಷ್ಟವಾಗಬಹುದು. ಈ ಎಲ್ಲ ಸಂಗತಿಗಳನ್ನು ಸೇರಿ ರಚಿಸುವುದನ್ನು ನಾವು ಉನ್ನತ, ಆಧ್ಯಾತ್ಮಿಕ ಅಥವಾ ದಿವ್ಯ ಪ್ರಜ್ಞೆಯೆಂದು ಕರೆಯುತ್ತೇವೆ. ಚೈತ್ಯ ಮಾರ್ಗವು ಹೃದಯದ ಮುಖಾಂತರ ಪ್ರಾಥಮಿಕವಾಗಿ ನಮ್ಮನ್ನು ವೈಯಕ್ತಿಕ ದೈವಿಕದ ಸಂಪರ್ಕದಲ್ಲಿರಿಸುತ್ತದೆ; ವಿಶೇಷವಾಗಿ ಅದು ಪ್ರೇಮದ ಮತ್ತು ಭಕ್ತಿಯ ಮೂಲವಾಗಿದೆ. ಈ ಮೇಲ್ಮುಖ ತೆರೆಯುವಿಕೆಯು ನಮ್ಮನ್ನು ಪೂರ್ಣ ದೈವಿಕದೊಡನೆ ನೇರ ಬಾಂಧವ್ಯದಲ್ಲಿರಿಸುತ್ತದೆ. ಈ ಪೂರ್ಣ ದೈವಿಕವು ನಮ್ಮಲ್ಲಿ ದಿವ್ಯ ಪ್ರಜ್ಞೆಯನ್ನು ಸೃಷ್ಟಿಸುತ್ತದೆ ಮತ್ತು ಚೈತನ್ಯದ ಒಂದು ಹೊಸ ಉಗಮಕ್ಕೆ ಕಾರಣವಾಗುತ್ತದೆ.

*

**ದಿವ್ಯಶಕ್ತಿಯು ಮೇಲಿನಿಂದ ಕೆಳಗಿಳಿಯಬಹುದು**

ಶಾಂತಿಯು ಸ್ಥಾಪನೆಗೊಂಡಾಗ, ಉನ್ನತ ಅಥವಾ ದಿವ್ಯಶಕ್ತಿಯು ಮೇಲಿನಿಂದ ಇಳಿದು ನಮ್ಮಲ್ಲಿ ಕಾರ್ಯವನ್ನು ಮಾಡಬಹುದು. ಅದು ಮೊದಲಿಗೆ ತಲೆಯಲ್ಲಿ ಇಳಿದು ಮನಸ್ಸಿನ ಕೇಂದ್ರಗಳನ್ನು ಮುಕ್ತಗೊಳಿಸುತ್ತದೆ, ನಂತರ ಅದು ಹೃದಯ ಕೇಂದ್ರದಲ್ಲಿ ಇಳಿದು ಚೈತ್ಯ ಮತ್ತು ಭಾವನಾತ್ಮಕ ಪುರುಷನನ್ನು ವಿಮೋಚನೆ–ಗೊಳಿಸುತ್ತದೆ. ತದನಂತರ ಅದು ನಾಭಿ ಭಾಗದಲ್ಲಿ ಮತ್ತು ಉಳಿದ ಪ್ರಾಣಿಕ ಕೇಂದ್ರಗಳಲ್ಲಿ ಇಳಿದು ಆಂತರಿಕ ಪ್ರಾಣವನ್ನು ಮುಕ್ತಗೊಳಿಸುತ್ತದೆ. ಅದಾದ ಮೇಲೆ ಅದು ಮೂಲಾಧಾರ ಮತ್ತು ಅದರ ಕೆಳಗಿಳಿದು ಆಂತರಿಕ ಭೌತಿಕ ಪುರುಷನನ್ನು ಸ್ವತಂತ್ರಗೊಳಿಸುತ್ತದೆ. ಅದು (ದಿವ್ಯಶಕ್ತಿ) ಏಕಕಾಲದಲ್ಲಿ, ಪರಿಪೂರ್ಣತೆಗಾಗಿ ಹಾಗೂ ವಿಮೋಚನೆಗಾಗಿ ಕಾರ್ಯ ಮಾಡುತ್ತದೆ; ಅದು ಸಂಪೂರ್ಣ ಪ್ರಕೃತಿಯನ್ನು ಖಂಡ–ಖಂಡವಾಗಿ ತೆಗೆದುಕೊಂಡು ತಿರಸ್ಕರಿಬೇಕಾದುದನ್ನು ತಿರಸ್ಕರಿಸುತ್ತ, ಶುದ್ಧೀಕರಿಸುವುದನ್ನು ಶುದ್ದೀಕರಿಸುತ್ತ, ರಚಿಸಬೇಕಾದುದನ್ನು ರಚಿಸುತ್ತ ಅದರ ಜೊತೆ ಕಾರ್ಯ ನಿರ್ವಹಿಸುತ್ತದೆ. ಅದು ಒಂದಾಗಿಸುತ್ತದೆ, ಸೌಹಾರ್ದಗೊಳಿಸುತ್ತದೆ, ಪ್ರಕೃತಿಯಲ್ಲಿ ಒಂದು ಹೊಸ ಲಯವನ್ನು ಹುಟ್ಟು ಹಾಕುತ್ತದೆ. ಅದು ಉನ್ನತವಾದ, ಅತ್ಯಂತ ಉನ್ನತವಾದ ಶಕ್ತಿಯನ್ನು, ಉನ್ನತ ಪ್ರಕೃತಿಯ ಶ್ರೇಣಿಗಳನ್ನು ಸಹ ಕೆಳತರಬಹುದು (ಅದು ಸಾಧನೆಯ ಉದ್ದೇಶವಾಗಿದ್ದರೆ), ಅಧಿಮಾನಸ ಶಕ್ತಿಯನ್ನೂ ಮತ್ತು ಇರುವಿಕೆಯನ್ನೂ ಕೆಳಗೆ

ತರಲು ಸಾಧ್ಯವಾಗುತ್ತದೆ. ಇದೆಲ್ಲವನ್ನೂ ಹೃದಯ ಮೂಲದಲ್ಲಿ ಚೈತ್ಯ ಪುರುಷನಿಂದ ಸಿದ್ಧಗೊಳಿಸಲ್ಪಡುತ್ತದೆ, ಸಹಾಯ ಮಾಡಲ್ಪಡುತ್ತದೆ ಮತ್ತು ಮುಂದುವರೆಸಲ್ಪಡುತ್ತದೆ; ಅದು ಹೆಚ್ಚು ಮುಕ್ತವಿದ್ದಷ್ಟು, ಕ್ರಿಯಾಶೀಲವಿದ್ದಷ್ಟು, ಸುರಕ್ಷಿತವಿದ್ದಷ್ಟು ಆ ಶಕ್ತಿಯು ಕಾರ್ಯ ಮಾಡಲು ಸುಲಭವಾಗಬಹುದು. ಹೃದಯದಲ್ಲಿ ಹೆಚ್ಚು ಪ್ರೇಮ, ಭಕ್ತಿ ಮತ್ತು ಸಮರ್ಪಣೆ ಬೆಳೆಯುತ್ತವೆ ಮತ್ತು ಸಾಧನೆಯ ಬೆಳವಣಿಗೆಯು ಹೆಚ್ಚು ಕ್ಷಿಪ್ರ ಮತ್ತು ಪರಿಪೂರ್ಣವಾಗುತ್ತದೆ. ಏಕಕಾಲದಲ್ಲಿಯ ಅವತರಣ ಮತ್ತು ರೂಪಾಂತರಣಗಳು ದಿವ್ಯದ ಜೊತೆಗಿನ ಹೆಚ್ಚುತ್ತಿರುವ ಸಂಪರ್ಕವನ್ನು ಮತ್ತು ಒಂದಾಗುವಿಕೆಯನ್ನು ಸೂಚಿಸುತ್ತವೆ.

*

**ಸಾಧನೆಯ ಮೂಲಭೂತ ತತ್ವಾಧಾರ**

ಹೃದಯ ಮೂಲ ಮತ್ತು ಮನಸ್ಸಿನ ಮೂಲಗಳ ಹಿಂದಿರುವ ಮತ್ತು ಅವುಗಳ ಮೇಲಿರುವ ಎಲ್ಲದಕ್ಕೆ ತೆರೆದುಕೊಳ್ಳುವ ಎರಡು ಸಂಗತಿಗಳು ಮಹತ್ವದ್ದಾಗಿವೆ. ಹೃದಯವು ಚೈತ್ಯ ಪುರುಷನಿಗೆ ತೆರೆದುಕೊಳ್ಳುತ್ತದೆ. ಚೈತ್ಯ ಪುರುಷನ ಹಾಗೂ ಉನ್ನತ ಪ್ರಜ್ಞೆಯ ನಡುವಿನ ಸಂಪರ್ಕವು ಯೋಗ ಸಿದ್ಧಿಗೆ ಪ್ರಮುಖ ಸಾಧನವಾಗಿದೆ. ಹೃದಯದಲ್ಲಿನ ಏಕಾಗ್ರತೆಯಿಂದ ನಮ್ಮೊಳಗಡೆ ದಿವ್ಯವನ್ನು ಅಭಿವ್ಯಕ್ತಗೊಳಿಸುವ ಮತ್ತು ಚೈತ್ಯನದ ಮುಖಾಂತರ ಸಂಪೂರ್ಣ ಪ್ರಕೃತಿಯನ್ನು ಮುನ್ನಡೆಸುವ ಕರೆಯಿಂದ ಮೊದಲ ತೆರೆಯುವಿಕೆಯು ಫಲಪ್ರದವಾಗುತ್ತದೆ. ಮಹತ್ವಾಕಾಂಕ್ಷೆ, ಪ್ರಾರ್ಥನೆ, ಭಕ್ತಿ, ಪ್ರೇಮ, ಸಮರ್ಪಣೆಗಳು – ಇವೆಲ್ಲವುಗಳ ಜೊತೆಗೆ, ನಮ್ಮ ಆಕಾಂಕ್ಷೆಯ ಪಥದಲ್ಲಿ ಬರುವ ಎಲ್ಲವನ್ನೂ ನಿರಾಕರಿಸುತ್ತ ಇರುವುದು ಈ ಭಾಗದ ಸಾಧನೆಯ ಮುಖ್ಯ ಆಧಾರವಾಗಿದೆ. ಎರಡನೆಯ ತೆರೆದುಕೊಳ್ಳುವಿಕೆಯು ತಲೆಯಲ್ಲಿ (ನಂತರ ಅದರ ಮೇಲೆ), ಪ್ರಜ್ಞೆಯ ಏಕಾಗ್ರತೆ ಮತ್ತು ದಿವ್ಯಶಾಂತಿ, ಸಾಮರ್ಥ್ಯ, ಬೆಳಕು, ಜ್ಞಾನ, ಆನಂದ ಇವುಗಳ ಅವತರಣಿಕೆಗಾಗಿ ಒಂದು ಕರೆಯ ಮತ್ತು ನಿರಂತರ ಸಂಕಲ್ಪದ ಫಲಶೃತಿಯಾಗಿದೆ. ಇದರ ಪರಿಣಾಮವಾಗಿ ಮೊದಲು ಶಾಂತಿ ಅಥವಾ ಶಾಂತಿ ಹಾಗೂ ಶಕ್ತಿ ಎರಡೂ ಒಟ್ಟಿಗೆ ಅವತರಣವಾಗುತ್ತವೆ/ಕೆಳಗಿಳಿದು ಬರುತ್ತವೆ. ಕೆಲವರು ಮೊದಲು ಬೆಳಕನ್ನು ಪಡೆದುಕೊಳ್ಳುತ್ತಾರೆ ಅಥವಾ ಆನಂದವನ್ನು ಪಡೆದುಕೊಳ್ಳುತ್ತಾರೆ ಅಥವಾ ಜ್ಞಾನದ ಹಠಾತ್ ಸುರಿಸುವಿಕೆಯನ್ನು ಅನುಭವಿಸುತ್ತಾರೆ. ಕೆಲವರೊಂದಿಗೆ, ಮೊದಲಿಗೆ ಅವರ ಮೇಲಿರುವ ಅನಂತ

ಮೌನದ, ಶಕ್ತಿಯ, ಬೆಳಕಿನ ಅಥವಾ ಅತ್ಯಾನಂದದ ಅರಿವನ್ನು ಮೂಡಿಸುವ ಒಂದು ತೆರೆಯುವಿಕೆ ಇದೆ. ನಂತರ ಇವುಗಳು ನಿಮ್ಮ ಪ್ರಕೃತಿಯಲ್ಲಿ ಇಳಿಯಲು ಪ್ರಾರಂಭಿಸುತ್ತವೆ. ಇನ್ನುಳಿದವರೊಂದಿಗೆ, ಮೊದಲು ತಲೆಯಲ್ಲಿ ನಂತರ ಹೃದಯದವರೆಗೆ ಇಳಿಯುವ, ನಂತರ ನಾಭಿ ಮತ್ತು ಪೂರ್ಣ ದೇಹದ ಮುಖಾಂತರ ಕೆಳಗಡೆ ಇಳಿಯುವ ಇಲ್ಲವೆ ಶಾಂತಿಯ, ಬೆಳಕಿನ, ವೈಶಾಲ್ಯದ, ಪ್ರಭಾವದ ಯಾವುದೇ ಅರಿವಿರದ ಇಳಿಯುವಿಕೆಯ–ವಿವರಿಸಲಾಗದ ಒಂದು ತೆರೆಯುವಿಕೆಯ, ಅಥವಾ ಬ್ರಹ್ಮಾಂಡ ಪ್ರಜ್ಞೆಯಲ್ಲಿ ಸಮತಲವಾಗಿ ಇಳಿಯುವ ಅಥವಾ ಇದ್ದಕ್ಕಿದ್ದಂತೆ ವಿಸ್ತರಿಸಿದ ಮನಸ್ಸು, ಜ್ಞಾನದ ಒಂದು ಆಸ್ಫೋಟದ ರೂಪದಲ್ಲಿ ಇಳಿದ ಅನುಭವವಾಗುತ್ತದೆ. ಒಂದೊಮ್ಮೆ ಶಾಂತಿಯು ಮೊದಲಿಗೆ ಬರದಿದ್ದರೆ (ಇಳಿದು ಬರದಿದ್ದರೆ) ಹರ್ಷದಲ್ಲಿ ಉಬ್ಬಿ ಹೋಗದಂತೆ ಎಚ್ಚರವಹಿಸಬೇಕು, ಇಲ್ಲದಿದ್ದರೆ ಸಮತೋಲನವನ್ನು ಕಳೆದುಕೊಳ್ಳುವಿರಿ. ಶ್ರೀಮಾತೆಯವರ ದಿವ್ಯ ಶಕ್ತಿ ಅಥವಾ ಪ್ರಭಾವವು ಕೆಳಗಿಳಿದು ಬಂದು ನಮ್ಮನ್ನು ಹಿಡಿದುಕೊಂಡಾಗ ಮೂಲ ಕ್ರಿಯೆಯು ಆರಂಭವಾಗುತ್ತದೆ, ಆಗ ಪ್ರಜ್ಞೆಯ ಸಂಘಟನೆ ಮತ್ತು ಯೋಗದ ಅಡಿಪಾಯ ಹಾಕುವ ಕ್ರಿಯೆ ಆರಂಭವಾಗುತ್ತದೆ.

*

**ಪುರುಷ ಮತ್ತು ಪ್ರಕೃತಿಯ ಪ್ರತ್ಯೇಕಿಸುವಿಕೆ**

ಏಕಾಗ್ರತೆಯ ಫಲಿತಾಂಶವು ಸಾಮಾನ್ಯವಾಗಿ ತಕ್ಷಣವೇ ಗೋಚರಿಸುವುದಿಲ್ಲ – ಆದಾಗ್ಯೂ ಕೆಲವರಿಗೆ ಏಕಾಗ್ರತೆಯ ಫಲಿತಾಂಶವು ತ್ವರಿತ ಹಾಗೂ ಆಕಸ್ಮಿಕ ಅರಳುವಿಕೆಯಾಗಿ ಬರಬಹುದು; ಆದರೆ ಹೆಚ್ಚಿನ ಜನರಲ್ಲಿ ಹೊಂದಾಣಿಕೆಯ ಅಥವಾ ಪೂರ್ವ ಸಿದ್ಧತೆಯ ಸಮಯವಿದೆ (ಹೆಚ್ಚು ಅಥವಾ ಕಡಿಮೆ ಸಮಯ), ವಿಶೇಷವಾಗಿ ಈಗಾಗಲೆ ಸ್ವಲ್ಪ ಮಟ್ಟಿಗೆ ಪ್ರಕೃತಿಯನ್ನು ಆಕಾಂಕ್ಷೆ ಮತ್ತು ತಪಸ್ಸಿನಿಂದ ಸಿದ್ಧಗೊಳಿಸದಿದ್ದಾಗ, ಈ ಫಲಿತಾಂಶವನ್ನು ಕೆಲವೊಮ್ಮೆ ಹಳೆಯ ಯೋಗಗಳ ಪ್ರಕ್ರಿಯೆಗಳಲ್ಲಿ ಒಂದಾದ ಏಕಾಗ್ರತೆಯೊಂದಿಗೆ ಜೊತೆಗೂಡಿಸುವ ಮೂಲಕ ನೆರವಾಗಬಹುದು. ನಾನು ಮನಸ್ಸಲ್ಲ, ನಾನು ಪ್ರಾಣವಲ್ಲ, ನಾನು ದೇಹವಲ್ಲ ಎಂದು ನಿರಂತರವಾಗಿ ಹೇಳಿಕೊಳ್ಳುತ್ತ ನಮ್ಮ ಮನಸ್ಸಿನೊಂದಿಗೆ, ಪ್ರಾಣದೊಂದಿಗೆ, ದೇಹದೊಂದಿಗೆ ನಮ್ಮ ಅಸ್ಮಿತೆಯನ್ನು ಅಲ್ಲಗಳೆಯುತ್ತ ಈ ಸಂಗತಿಗಳು ನಮ್ಮ ಆತ್ಮದಿಂದ ಬೇರೆಯಾದವುಗಳು ಎನ್ನುವ ಜ್ಞಾನವನ್ನು ಹೊಂದುವುದು ಅದ್ವೈತ ಪ್ರಕ್ರಿಯೆಯಾಗಿದೆ. ಕೆಲ ಸಮಯದ ನಂತರ ಎಲ್ಲ ಮಾನಸಿಕ, ಪ್ರಾಣಿಕ, ಭೌತಿಕ

ಪ್ರಕ್ರಿಯೆಗಳು ಮತ್ತು ಮನಸ್ಸು, ಪ್ರಾಣ, ದೇಹ ಇವುಗಳ ಪ್ರಜ್ಞೆಯು ಬಾಹ್ಯವಾಗುತ್ತ ಬರುತ್ತದೆ (ಒಂದು ಬಾಹ್ಯ ಕ್ರಿಯೆ). ಹಾಗೆಯೇ ಆಂತರಿಕದಲ್ಲಿ ಅವುಗಳಿಂದ ಪ್ರತ್ಯೇಕಿಸಲ್ಪಟ್ಟ ಸ್ವಯಂಭುವಿನ (ಸ್ವತಂತ್ರವಾಗಿ ಅಸ್ಥಿತ್ವದಲ್ಲಿರುವ ಪುರುಷನ) ಭಾವನೆಯು ಬೆಳೆಯುತ್ತದೆ. ಈ ಪುರುಷನು ಬ್ರಹ್ಮಾಂಡದ ಮತ್ತು ಅತೀಂದ್ರಿಯ ಚೇತನದಲ್ಲಿ ತೆರೆದುಕೊಳ್ಳುತ್ತಾನೆ. ಸಾಂಖ್ಯದಲ್ಲಿ ಒಂದು ಅತ್ಯಂತ ಪ್ರಭಾವಿ ವಿಧಾನವಿದೆ – ಅದು ಪುರುಷ ಮತ್ತು ಪ್ರಕೃತಿಯ ಪ್ರತ್ಯೇಕಿಸುವಿಕೆಯ ವಿಧಾನ. ನಾವು ಮನಸ್ಸಿನ ಮೇಲೆ ಪ್ರೇಕ್ಷಕನ ಸ್ಥಾನವನ್ನು ಹೇರುತ್ತೇವೆ – ಮನಸ್ಸಿನ, ಪ್ರಾಣದ, ದೇಹದ ಎಲ್ಲ ಕ್ರಿಯೆಗಳು ನಾನಲ್ಲದ ಆದರೆ ಪ್ರಕೃತಿಗೆ ಸಂಬಂಧಿಸಿದ ಮತ್ತು ನನ್ನ ಬಾಹ್ಯದ ಮೇಲೆ ಹೇರಲ್ಪಟ್ಟ ಒಂದು ಲೀಲೆಯಾಗುತ್ತದೆ. ನಾನು ಮೌನವಾಗಿರುವ, ಪ್ರತ್ಯೇಕವಾದ ಪ್ರಾಪಂಚಿಕ ವಿಷಯಗಳಿಂದ ಬಂಧನವಾಗದ ಪ್ರೇಕ್ಷಕ ಪುರುಷನಾಗಿದ್ದೇನೆ. ತತ್ಪರಿಣಾಮವಾಗಿ ಪುರುಷನಲ್ಲಿ ವಿಭಜನೆಯ ಭಾವ ಹುಟ್ಟಿಕೊಳ್ಳುತ್ತದೆ; ಸಾಧಕನು ತನ್ನೊಳಗಡೆ ಒಂದು ಸ್ಥಿರವಾದ, ಶಾಂತವಾದ ಮನಸ್ಸಿನ, ಪ್ರಾಣದ ಮತ್ತು ಭೌತಿಕ ಸ್ವಭಾವದ ಮೇಲ್ಮೈ ಆಟದಿಂದ ಬೇರೆಯದೇ ಆದ ವಿಭಿನ್ನ ಪ್ರಜ್ಞೆಯ ಬೆಳವಣಿಗೆಯನ್ನು ಅನುಭವಿಸುತ್ತಾನೆ. ಇದು ಸಂಭವಿಸಿದಾಗ, ಉನ್ನತ ಪ್ರಜ್ಞೆಯ ಶಾಂತತೆಯನ್ನು, ಉನ್ನತ ಶಕ್ತಿಯ ಕ್ರಿಯೆಯನ್ನು ಮತ್ತು ಯೋಗದ ಪ್ರಕ್ರಿಯೆಯನ್ನು ಕ್ಷಿಪ್ರವಾಗಿ ಕೆಳತರಲು ಸಾಧ್ಯವಾಗುತ್ತದೆ. ಸಾಮಾನ್ಯವಾಗಿ, ಏಕಾಗ್ರತೆಯ ಪ್ರತಿಕ್ರಿಯೆಯಾಗಿ ಶಕ್ತಿಯು ಮೊದಲು ಕೆಳಗಿಳಿದು ಬರುತ್ತದೆ.

*

**ಈ ಯೋಗದಲ್ಲಿ ನಾವು ಶರಣಾಗತಿಯ ಮೇಲೆ ಹೆಚ್ಚು ಒತ್ತು ಕೊಡುತ್ತೇವೆ**

ಮೇಲಿನಿಂದ ಅವರೋಹಣ ಮತ್ತು ಅದರ ಕಾರ್ಯಶೀಲತೆಯ ಪ್ರಕ್ರಿಯೆಯಲ್ಲಿ ನಮ್ಮ ಮೇಲೆಯೇ ನಾವು ಸಂಪೂರ್ಣವಾಗಿ ಅವಲಂಬಿಸದೇ ಇರುವುದು ಅತ್ಯಂತ ಮಹತ್ವದ ಸಂಗತಿಯಾಗಿದೆ. ಆದರೆ ಗುರುವಿನ ಮಾರ್ಗದರ್ಶನದ ಮೇಲೆ ಮತ್ತು ಅವರ ತೀರ್ಪಿಗೆ, ಮಧ್ಯಸ್ಥಿಕೆಗೆ ಹಾಗೂ ನಿರ್ಣಯಕ್ಕೆ ಸಂಭವಿಸುವ ಎಲ್ಲವನ್ನೂ ನಿರ್ದೇಶಿಸುವುದರ ಮೇಲೆ ನಂಬಿಕೆ ಇಡಬೇಕು. ಅವರೋಹಣದಿಂದ ನಿಮ್ಮ ಪ್ರಕೃತಿಯ ಶಕ್ತಿಗಳು ಪ್ರಚೋದಿಸಲ್ಪಡುವುದು ಮತ್ತು ಉತ್ತೇಜಿಸಲ್ಪಡುವುದು ಮತ್ತು ಅದರೊಡನೆ ಸೇರಲು ಬಯಸುವುದು ಹಾಗೂ ತಮಗೆ ಲಾಭವಾಗುವಂತೆ ಬಳಸಿಕೊಳ್ಳುವುದು ಅಗಾಗ ಸಂಭವಿಸುತ್ತದೆ. ದೈವಿಕವಲ್ಲದ ಕೆಲವು ಪ್ರಭಾವಗಳು ಆಗಾಗ ತಮ್ಮನ್ನು ತಾವು (ತಮ್ಮ ಪ್ರಕೃತಿಯಲ್ಲಿ) ಶ್ರೇಷ್ಠ ಪ್ರಭುವೆಂದು ಅಥವಾ

ದಿವ್ಯಮಾತೆ ಎಂದು ತೋರಿಸಿಕೊಳ್ಳುವುದು ಮತ್ತು ಪುರುಷನ ಸೇವೆಯನ್ನು ಹಾಗೂ ಶರಣಾಗತಿಯನ್ನು ಕೇಳುವುದು ಅಗಾಗ ಸಂಭವಿಸುತ್ತದೆ. ಒಂದು ಪಕ್ಷ ಈ ಸಂಗತಿಗಳು ಸ್ವೀಕೃತವಾದರೆ ಇದರ ಪರಿಣಾಮವು ಅತ್ಯಂತ ಘೋರವಾಗಿರುತ್ತದೆ. ಒಂದು ಪಕ್ಷ ಸಾಧಕನ ಅರೋಹಣವು ನಿಜವಾಗಿಯೂ ದಿವ್ಯ ಕಾರ್ಯಕ್ಕೆ ಮಾತ್ರ ಇದ್ದರೆ ಮತ್ತು ಸಮರ್ಪಣೆ ಅಥವಾ ವಿಧೇಯತೆಯು ಆ ಮಾರ್ಗದರ್ಶನಕ್ಕೆ ಮಾತ್ರ ಇದ್ದರೆ ಎಲ್ಲವೂ ಸುಗಮವಾಗಿ ಸಾಗಬಹುದು. ಈ ಆರೋಹಣ ಮತ್ತು ಎಲ್ಲ ಅಹಂಕಾರಿಕ ಅಥವಾ ಅಹಂಕಾರಕ್ಕೆ ಮೊರೆಯಿಡುವ ಶಕ್ತಿಗಳ ನಿರಾಕರಣೆಯು ಸಾಧನೆಯುದ್ದಕ್ಕೂ ಸಾಧಕನನ್ನು ಕಾಪಾಡುವುದು. ಆದರೆ ಪ್ರಕೃತಿಯ ಮಾರ್ಗಗಳು ಪ್ರಲೋಭನೆಗಳಿಂದ ತುಂಬಿವೆ, ಅಹಂಕಾರದ ಸೋಗುಗಳು ಅಸಂಖ್ಯ, ಅಂಧಕಾರದ ಪ್ರಭಾವಗಳ, ರಾಕ್ಷಸೀ ಮಾಯೆಯ ಭ್ರಾಂತಿಗಳು ಅಸಾಧಾರಣವಾದ ಕುಶಲತೆ ಹೊಂದಿದಂಥವುಗಳಾಗಿವೆ; ಇದಕ್ಕೆ ಕಾರಣ ಮಾರ್ಗದರ್ಶನದ ಕೊರತೆ ಮತ್ತು ಅದು ಅಗಾಗ ವಂಚಕನಾಗಿ ಬದಲಾವಣೆಯಗುವುದು; ಯಾವುದೇ ಆಕರ್ಷಣೆಯ ಕರೆಗಳನ್ನು ಹಿಂಬಾಲಿಸುವಂತೆ ಪ್ರಲೋಭನೆಗೊಳಿಸುವ ಪ್ರಾಣಿಕ ಹಂಬಲವು ನಮ್ಮ ಜೊತೆ ಯಾವಾಗಲೂ ಇರುವುದು. ಈ ಕಾರಣದಿಂದಾಗಿಯೇ, ಈ ಯೋಗದಲ್ಲಿ ನಾವು ಸಮರ್ಪಣೆಯ ಮೇಲೆಯೇ ಹೆಚ್ಚು ಒತ್ತು ಕೊಡುತ್ತೇವೆ. ಒಂದು ಪಕ್ಷ ಹೃದಯ ಕೇಂದ್ರವು ಪೂರ್ಣವಾಗಿ ತೆರೆದುಕೊಂಡರೆ ಹಾಗೂ ಚೈತ್ಯನು ನಿಯಂತ್ರಣದಲ್ಲಿ ಇದ್ದರೆ ಆಗ ಎಲ್ಲವೂ ಸುರಕ್ಷಿತ. ಆದರೆ ನಿಮ್ನ (ಕೆಳಗಿನ) ಒತ್ತಡದಿಂದ ಚೈತ್ಯನು ಯಾವುದೇ ಕ್ಷಣದಲ್ಲಿ ತೆರೆಯ ಹಿಂದೆ ಸರಿದು ಬಿಡಬಹುದು. ಈ ಗಂಡಾಂತರಗಳಿಂದ ವಿನಾಯಿತಿ ಪಡೆದವರು ಕೆಲವರು ಮಾತ್ರ, ನಿಖರವಾಗಿ ಹೇಳಬೇಕೆಂದರೆ, ಯಾರಿಗೆ ಸಮರ್ಪಣೆಯು ಸುಲಭ ಸಾಧ್ಯವಾಗುವುದೊ ಅವರು ಮಾತ್ರ ವಿನಾಯಿತಿ ಪಡೆದವರಾಗುತ್ತಾರೆ. ದಿವ್ಯ ಶಕ್ತಿಯನ್ನು ಪ್ರತಿನಿಧಿಸುವವನ ಮಾರ್ಗದರ್ಶನವು ಅತ್ಯಗತ್ಯವಾದ ಮತ್ತು ಅನಿವಾರ್ಯವಾದ ಈ ಕಠಿಣ ಪ್ರಯತ್ನದಲ್ಲಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/326–330**

**ಅಧಿಮಾನಸವು ನನಗಾಗಿ ಅಲ್ಲ, ಪೃಥ್ವಿಗಾಗಿ**

ದೈವೀ ಸಾಕ್ಷಾತ್ಕಾರವೆಂದರೆ ಆಧ್ಯಾತ್ಮಿಕ ಸಾಕ್ಷಾತ್ಕಾರವೆಂದು ಅರ್ಥ – ಮಾನಸಿಕ–ಆಧ್ಯಾತ್ಮಿಕ ಸ್ತರದಲ್ಲಿ ಇಲ್ಲವೆ ಅತಿಮಾನಸ ಸ್ತರದಲ್ಲಿ ಆತ್ಮ, ಭಗವಾನ್

ಅಥವಾ ಬ್ರಹ್ಮ ಸಾಕ್ಷಾತ್ಕಾರವೆಂದು ಅರ್ಥ. ಈ ಮಾನಸಿಕ–ಆಧ್ಯಾತ್ಮಿಕ ಸ್ತರದಲ್ಲಿ ಸಾಕ್ಷಾತ್ಕಾರ ಮಾಡಿಕೊಂಡವರು ಸಾವಿರಾರು ಜನ. ಆದುದರಿಂದ, ಸಹಜವಾಗಿಯೇ ಇದನ್ನು ಮಾಡುವುದು ಅಧಿಮಾನಸಕ್ಕಿಂತ ಸುಲಭವಾಗಿದೆ. ಹಾಗೆಯೆ, ಆಧ್ಯಾತ್ಮಿಕ ಸಾಕ್ಷಾತ್ಕಾರವನ್ನು ಹೊಂದದವರು ಅಧಿಮಾನಸ ಸಾಕ್ಷಾತ್ಕಾರವನ್ನು ಹೊಂದಲಾರರು.

ನಮ್ಮ ಸಂಪೂರ್ಣ ಅಸ್ತಿತ್ವವನ್ನು ದಿವ್ಯತೆಯ ಕಡೆಗೆ ತಿರುಗಸದ ಹೊರತು, ನಿಜವಾದ ಹಾಗೂ ತೀವ್ರತರವಾದ ಚೈತನ್ಯ ಇರದ ಹೊರತು ಮತ್ತು ಸಾಧನೆಯ ಕ್ರಿಯಾಶೀಲ ವಾಸ್ತವಿಕತೆಯ ಹೊರತು ಅತಿಮಾನಸ ಸಾಕ್ಷಾತ್ಕಾರವನ್ನಾಗಲಿ ಅಥವಾ ಅಧಿಮಾನಸ ಸಾಕ್ಷಾತ್ಕಾರವನ್ನಾಗಲಿ ಪರಿಣಾಮಕಾರಿಯಾಗಿ ಹೊಂದಲಾಗುವುದಿಲ್ಲ–ವೆನ್ನವುದು ಸತ್ಯವಾಗಿದೆ.

ನಾನು ಅಧಿಮಾನಸವನ್ನು ನನಗಾಗಿ ಬೇಡುತ್ತಿಲ್ಲ, ಆದರೆ ಪೃಥ್ವಿಗಾಗಿ, ಪೃಥ್ವಿಯ ಮೇಲಿರುವ ಚೇತನಗಳಿಗಾಗಿ ಬೇಕೆನ್ನುವುದು ಸತ್ಯವಾದ ಸಂಗತಿ. ಆದುದರಿಂದ ಯಾರಾದರು ಅಧಿಮಾನಸ ಬೇಕೆಂದರೆ ನಾನು ನಿಶ್ಚಿತವಾಗಿಯೂ ಅಡ್ಡಿಮಾಡುವುದಿಲ್ಲ. ಆದರೆ ಅದಕ್ಕೆ ಕೆಲವು ಷರತ್ತುಗಳಿವೆ. ಅವನು ಈ ಪಥದಲ್ಲಿ ಮೊದಲು ದೈವೀ ಸಂಕಲ್ಪವನ್ನು, ನಂತರ ಚೈತನ್ಯದ ಶರಣಾಗತಿ ಮತ್ತು ಆಧ್ಯಾತ್ಮಿಕ ಸಾಕ್ಷಾತ್ಕಾರವನ್ನು ಕೋರಲೇಬೇಕು (ತನ್ನ ಕಾರ್ಯಗಳ, ಭಕ್ತಿಯ, ಜ್ಞಾನದ ಸ್ವ–ಪರಿಪೂರ್ಣತೆಯ ಮೂಲಕ).

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/413–414**

## ದ್ವಿಗುಣ ಪ್ರಗತಿಯ ಆವಶ್ಯಕತೆ

ನಾವು ಮಾಡಬೇಕಾದ ಮೊದಲ ಕಾರ್ಯವೇನೆಂದರೆ, ನಿಮ್ಮ ಪ್ರಕೃತಿಯನ್ನು ಜಯಿಸುವುದು, ನಂತರ ನಿಮ್ಮ ಕ್ರಿಯೆಯಲ್ಲಿ ಅಡಕವಾದ ಆತ್ಮನನ್ನು ದೈವೀ ಸ್ವರೂಪದಲ್ಲಿ ಉದಯವಾಗುವಂಥ ಉನ್ನತಾತ್ಮನ ಮುಖಾಂತರ ವಿಮೋಚನೆ–ಗೊಳಿಸುವುದು; ಅದೇ ಸಮಯದಲ್ಲಿ ನಾವು ನಮ್ಮ ಎಲ್ಲ ಕ್ರಿಯೆಗಳನ್ನು (ಯೋಗದ ಆಂತರಿಕ ಕ್ರಿಯೆಯೂ ಸೇರಿ) ಪುರುಷೋತ್ತಮನಿಗೆ, ಅತೀಂದ್ರಿಯ ಹಾಗೂ ಸರ್ವಾಂತರ್ಯಾಮಿ ಪುರುಷನಿಗೆ (ದಿವ್ಯಕ್ಕೆ) ನಿವೇದನೆಯಾಗಿ ಅರ್ಪಣೆ ಮಾಡಬೇಕು. ನಾವು ಒಮ್ಮೆ ಉನ್ನತಾವಸ್ಥೆಗೆ (ಆತ್ಮನ) ಏರಿದಾಗ, ಜ್ಞಾನವನ್ನು ಪಡೆದುಕೊಂಡು ಮುಕ್ತವಾದಾಗ ಎಲ್ಲ ಧರ್ಮಗಳನ್ನು ವರ್ಜಿಸುತ್ತ, ದಿವ್ಯ

ಪ್ರಜ್ಞೆಯಲ್ಲಿ, ದಿವ್ಯಾಕಾಂಕ್ಷೆಯಲ್ಲಿ, ದಿವ್ಯಶಕ್ತಿಯಲ್ಲಿ ಮತ್ತು ದಿವ್ಯಾನಂದದಲ್ಲಿ ಇರುತ್ತ ನಾವು ಆ ದಿವ್ಯಕ್ಕೆ ಸಂಪೂರ್ಣವಾಗಿ ಸಮರ್ಪಣೆ ಮಾಡಿಕೊಳ್ಳುತ್ತೇವೆ. ಗೀತೆಯ ಯೋಗದಲ್ಲಿ ಅವಶ್ಯವಾಗಿ ಇರಬೇಕಾದ ಎಲ್ಲವನ್ನೂ ನಮ್ಮ ಯೋಗವು ಒಳಗೊಂಡಾಗಲೂ, ನಮ್ಮ ಯೋಗವು ಗೀತೆಯ ಯೋಗಕ್ಕೆ ಸರ್ವಸಮವಲ್ಲ. ನಮ್ಮ ಯೋಗದಲ್ಲಿ ನಾವು ಸಂಪೂರ್ಣ ಸಮರ್ಪಣೆಯನ್ನು ಕಲ್ಪನೆ, ಸಂಕಲ್ಪ, ಆಕಾಂಕ್ಷೆಯೊಂದಿಗೆ ಪ್ರಾರಂಭಿಸುತ್ತೇವೆ; ಅದೇ ಸಮಯದಲ್ಲಿ ನಾವು ನಿಮ್ನ ಪ್ರಕೃತಿಯನ್ನು ತಿರಸ್ಕರಿಸಬೇಕು, ನಮ್ಮ ಪ್ರಜ್ಞೆಯನ್ನು ಅದರಿಂದ ಬಿಡುಗಡೆ–ಗೊಳಿಸಬೇಕು, ನಿಮ್ನ ಪ್ರಕೃತಿಯಲ್ಲಿ ಅಡಕವಾದ ಆತ್ಮನನ್ನು ಆತ್ಮನಿಂದ ಉನ್ನತ ಪ್ರಕೃತಿಯಲ್ಲಿನ ಸಾಮರ್ಥ್ಯಕ್ಕೆ ಏರಿಸುವುದರಿಂದ ಅದನ್ನು ಬಿಡುಗಡೆಗೊಳಿಸಬೇಕು. ನಾವು ಈ ದ್ವಿಗುಣ ಬದಲಾವಣೆಯನ್ನು ಮಾಡದಿದ್ದರೆ, ಪ್ರಯತ್ನವನ್ನು, ತಪಸ್ಸನ್ನು ಮಾಡದಿದ್ದರೆ, ನಾವು ತಾಮಸಿಕ, ವಾಸ್ತವವಲ್ಲದ ಸಮರ್ಪಣೆಯನ್ನು ಮಾಡಿಕೊಳ್ಳುವ ಅಪಾಯದಲ್ಲಿರುತ್ತೇವೆ, ಅದ್ದರಿಂದ ಪ್ರಗತಿಯು ಸಾಧ್ಯವಿಲ್ಲ; ಇಲ್ಲದಿದ್ದರೆ, ನಾವು ರಾಜಸಿಕ ಸಮರ್ಪಣೆಯನ್ನು ದಿವ್ಯಕ್ಕೆ ಮಾಡಿಕೊಳ್ಳದೆ ನಮ್ಮ ರಾಜಸಿಕ ವ್ಯಕ್ತಿತ್ವವನ್ನು ಮರೆಮಾಚುವ ಯಾವುದೋ ಮಿಥ್ಯಾ ಕಲ್ಪನೆಗೆ ಅಥವಾ ಮಿಥ್ಯಾ ದೈವೀ ಆಕೃತಿಗೆ ಮಾಡಿಕೊಳ್ಳಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/442**

## ದೇವರಡೆಗೆ ಆರೋಹಣ, ದಿವ್ಯತೆಯ ಅವರೋಹಣ

ಅಧಿಮಾನಸ ಯೋಗವು ದೇವರೆಡೆಗಿನ ಆರೋಹಣ ಮತ್ತು ಮೂರ್ತಿವೆತ್ತ ಪ್ರಕೃತಿಯಲ್ಲಿ ದಿವ್ಯತೆಯ ಅವರೋಹಣವಾಗಿದೆ.

ಆರೋಹಣವನ್ನು ಚೇತನ ಹಾಗೂ ಮನಸ್ಸಿನ ಮತ್ತು ಜೀವದ ಹಾಗೂ ದೇಹದ ಮೇಲ್ಮುಖ ಆಕಾಂಕ್ಷೆಯ ಒಂದಾಗುವಿಕೆಯಿಂದ ಮಾತ್ರ ಸಾಧ್ಯವಾಗಿಸಬಹುದು; ಆವರೋಹಣವು ಅನಂತವಾದ ಮತ್ತು ಶಾಶ್ವತವಾದ ಭಗವಂತನ ಕಡೆಗಿನ ಸಮಗ್ರ ಪುರುಷನ ಕರೆಯಿಂದ ಮಾತ್ರ ಬರುತ್ತದೆ. ಒಂದು ಪಕ್ಷ ಈ ಕರೆ ಮತ್ತು ಆಕಾಂಕ್ಷೆಗಳು ಇದ್ದರೆ, ಅಥವಾ ಯಾವುದೇ ರೀತಿಯಲ್ಲಿ ಅವುಗಳು ಸಂಭವಿಸಬಹುದಾದರೆ ಹಾಗೂ ನಿರಂತರವಾಗಿ ಪ್ರಗತಿ ಹೊಂದಬಹುದಾದರೆ ಅಧಿಮಾನಸ ರೂಪಾಂತರಣವು ಸಾಧ್ಯವಾಗುತ್ತದೆ.

*

## ಪ್ರಾರ್ಥನೆ ಮತ್ತು ಆಕಾಂಕ್ಷೆ

ಈ ಯೋಗ ಪಥದಲ್ಲಿ ಪ್ರಾರ್ಥನೆ ಮತ್ತು ಆಕಾಂಕ್ಷೆಗಳು ಮೊದಲನೆಯ ಷರತ್ತುಗಳು ಮಾತ್ರ; ಅವುಗಳ ಜೊತೆಗೆ ದಿವ್ಯಕ್ಕೆ ನಮ್ಮ ಸಂಪೂರ್ಣ ಪುರುಷನ ತೆರೆದುಕೊಳ್ಳುವಿಕೆ ಮತ್ತು ಸಮಗ್ರ ಶರಣಾಗತಿ ಅಲ್ಲಿರಲೇಬೇಕು.

ಈ ತೆರೆದುಕೊಳ್ಳುವಿಕೆಯು ಪ್ರಕೃತಿಯನ್ನು ಅದರ ಎಲ್ಲ ಸ್ತರಗಳ ಮೇಲೆ ಮತ್ತು ಅದರ ಎಲ್ಲ ಭಾಗಗಳ ಮೇಲೆ ವ್ಯಾಪಕವಾಗಿ ಹರಡಿ, ಯಾವುದೇ ಮಿತಿಗಳಿಲ್ಲದೆ ತನ್ನಲ್ಲಿ ತಾನು ಮರ್ತ್ಯ ಅರೆ–ಪ್ರಜ್ಞೆಯ ಮೇಲೆ, ಅದರ ಹಿಂದೆ ಅದಾಗಲೆ ಇರುವಂಥ ಮತ್ತು ಅದನ್ನು ಆವರಿಸಿರುವಂಥ ಉನ್ನತವಾದ ದಿವ್ಯ ಪ್ರಜ್ಞೆಯನ್ನು ಪಡೆದುಕೊಳ್ಳುವಂಥದ್ದನ್ನು ಮುಕ್ತಗೊಳಿಸಿಕೊಳ್ಳುವುದಾಗಿದೆ. ಪಡೆದುಕೊಳ್ಳುವ ಕ್ರಿಯೆಯಲ್ಲಿ ಹೊಂದುವ ಅಸಾಮರ್ಥ್ಯವಿರಬಾರದು, ವ್ಯವಸ್ಥೆಯಲ್ಲಿ ರೂಪಾಂತರಣ ಹೊಂದುವ ಒತ್ತಡ ದಡಿಯಲ್ಲಿ ಮನಸ್ಸು, ಜೀವ, ದೇಹ ಯಾವುದೇ ರೀತಿಯಲ್ಲಿ ಕುಸಿಯಬಾರದು. ನಿರಂತರವಾದ ಗ್ರಹಿಸುವಿಕೆ ಇರಬೇಕು, ದಿವ್ಯಶಕ್ತಿಯ ತ್ವರಿತವಾದ ಮತ್ತು ತೀವ್ರತರವಾದ ಕ್ರಿಯೆಯನ್ನು ಸಹಿಸುವ ಸಾಮರ್ಥ್ಯವು ಹೆಚ್ಚಾಗುತ್ತಿರಬೇಕು. ಇಲ್ಲದಿದ್ದರೆ ಮಹತ್ತರವಾದ ಹಾಗೂ ಶಾಶ್ವತವಾದ ಏನನ್ನೂ ಸಾಧಿಸಲಾಗುವುದಿಲ್ಲ; ಯೋಗ ಸಾಧನೆಯು ಕುಸಿದುಬೀಳುವ ಅಥವಾ ನಿಷ್ಕ್ರಿಯತೆಯಲ್ಲಿ, ಅಥವಾ ಉತ್ಸಾಹ ಕಳೆದುಕೊಳ್ಳುವ ಮೂಲಕ ಕೊನೆಯಾಗುತ್ತದೆ. ಅದು ಸಫಲವಾಗಬೇಕಾದರೆ ಕ್ರಿಯೆಯು ಸ್ಪಷ್ಟವಾಗಿರಬೇಕು ಮತ್ತು ಸಮಗ್ರವಾಗಿಬೇಕು.

*

## ದಿವ್ಯಕ್ಕೆ ಪ್ರಗತಿಶೀಲ ಸಮರ್ಪಣೆ

ಯಾವುದೇ ಮಾನವ ವ್ಯವಸ್ಥೆಯು ಅಂತ್ಯವಿಲ್ಲದ ಗ್ರಹಿಕೆಯ ಹಾಗೂ ವಿಫಲತೆಯ ಸಾಮರ್ಥ್ಯವನ್ನು ಹೊಂದಿಲ್ಲದಿರುವುದರಿಂದ ದಿವ್ಯಶಕ್ತಿಯ ಅವರೋಹಣವಾಗುತ್ತಿದ್ದಂತೆ ಅದು ವ್ಯಕ್ತಿಗತ ಪ್ರಭಾವವನ್ನು ಹೆಚ್ಚಿಸಿದರೆ ಮತ್ತು ಶಕ್ತಿಯೊಂದಿಗೆ ಪಡೆದುಕೊಂಡ ಬಲವನ್ನು ಪ್ರಕೃತಿಯಲ್ಲಿ ಕಾರ್ಯ ಮಾಡಲು ಮೇಲಿನಿಂದ ಪ್ರವೇಶಿಸಿದ ಶಕ್ತಿಗೆ ಸಮನಾಗಿ ಸರಿದೂಗಿಸಿದರೆ ಮಾತ್ರ ಅಧಿಮಾನಸ ಯೋಗವು ಯಶಸ್ವಿಯಾಗುವುದು. ನಾವು ನಮ್ಮ ಕಡೆಯಿಂದ ನಮ್ಮ ಜೀವನದ

ಪ್ರಗತಿಶೀಲ ಸಮರ್ಪಣೆಯನ್ನು ದಿವ್ಯ ಕರಗಳಲ್ಲಿ ಮಾಡುತ್ತಲಿದ್ದರೆ ಇದು ಸಾಧ್ಯವಾಗುವುದು (ಅಧಿಮಾನಸ ಯೋಗದ ಯಶಸ್ಸು); ಪೂರ್ಣ ಹಾಗೂ ಎಂದಿಗೂ ವಿಫಲವಾಗದ ಅರೋಹಣವಿರಬೇಕು, ಆ ದಿವ್ಯಶಕ್ತಿಯು ನಮ್ಮೊಂದಿಗೆ ಅವಶ್ಯಕವಾದುದನ್ನು ಮಾಡಲು ಬಿಡುವಂಥ ಒಂದು ಕೆಚ್ಚೆದೆಯ ಬಯಕೆ ಇದ್ದರೆ ಅಧಿಮಾನಸ ಯೋಗವು ಸಾಧ್ಯವಾಗುವುದು.

ಮನುಷ್ಯ ತನ್ನ ಸ್ವ–ಪ್ರಯತ್ನದಿಂದ, ತನ್ನನ್ನು ತಾನು, ಈಗಿನ ಮನುಷ್ಯ ಸ್ತರಕ್ಕಿಂತ ಹೆಚ್ಚಿನ ಸ್ತರಕ್ಕೆ ಹೋಗಲಾರ; ಮನೋಮಯ ಪುರುಷನು ಬೆಂಬಲವಿರದ ತನ್ನ ಬಲದಿಂದ ತನ್ನನ್ನು ತಾನು ಅಧಿಮಾನಸ ಚೇತನವನ್ನಾಗಿ ಬದಲಾಯಿಸಿಕೊಳ್ಳಲಾರ. ಆ ದಿವ್ಯ ಪ್ರಕೃತಿಯ ಅವರೋಹಣವು ಮಾತ್ರ ಮನುಷ್ಯನನ್ನು ದಿವ್ಯಗೊಳಿಸಬಹುದು.

ನಮ್ಮ ಮನಸ್ಸು, ಜೀವ ಮತ್ತು ದೇಹಗಳು ತಮ್ಮದೇ ಆದ ಮಿತಿಗಳಿಂದ ಬದ್ಧವಾಗಿರುವುದರಿಂದ, ಅವುಗಳು ಎಷ್ಟೇ ಎತ್ತರಕ್ಕೆ ಏರಿದರೂ, ಅವುಗಳು ಎಷ್ಟೇ ವ್ಯಾಪಕವಾಗಿ ಹರಡಿದರೂ ತಮ್ಮ ಸಹಜ ಮಿತಿಗಳಿಗಿಂತ ಮೇಲೇರಲಾರವು. ಆದರೂ ಮನೋಮಯ ಪುರುಷನು ತನ್ನಾಚೆಗಿರುವುದಕ್ಕೆ ತೆರೆದುಕೊಳ್ಳಬಹುದು ಮತ್ತು ಅಧಿಮಾನಸ ಬೆಳಕನ್ನು, ಸತ್ಯವನ್ನು ತನ್ನಲ್ಲಿ ಕಾರ್ಯ ಮಾಡುವ ಮತ್ತು ಮನಸ್ಸು ಮಾಡಲಾಗದ್ದನ್ನು ಮಾಡುವ ಸಾಮರ್ಥ್ಯವನ್ನು ಕೆಳತರಬಹುದು. ಒಂದು ಪಕ್ಷ ಮನಸ್ಸು ತನ್ನ ಪ್ರಯತ್ನದಿಂದ ತನ್ನಾಚೆಗಿರುವ ಮನಸ್ಸಾಗದಿದ್ದರೆ (ಮೇಲಿನ ಹಂತಕ್ಕೆ ಏರದಿದ್ದರೆ), ಅತಿಮಾನಸವು ಕೆಳಗಿಳಿದು ಮನಸ್ಸನ್ನು ತನ್ನ ಸಾಧನವನ್ನಾಗಿ ಪರಿವರ್ತಿಸಬಹುದು.

ಒಂದು ಪಕ್ಷ ಅಧಿಮಾನಸ ಶಕ್ತಿಯನ್ನು ಮನುಷ್ಯನ ವಿವೇಚನಾಯುಕ್ತ ಸಮ್ಮತಿಯಿಂದ ಮತ್ತು ಜಾಗೃತ ಶರಣಾಗತಿಯಿಂದ ತನ್ನ ಸ್ವಂತ ಗಹನವಾದ ಹಾಗೂ ಸೂಕ್ಷ್ಮವಾದ ಅಂತರ್ದೃಷ್ಟಿ ಮತ್ತು ಹೊಂದಿಕೊಳ್ಳುವ ಶಕ್ತಿಗನುಗುಣವಾಗಿ ಕಾರ್ಯ ಮಾಡಲು ಅವಕಾಶ ನೀಡಿದರೆ, ಅದು ನಿಧಾನವಾಗಿಯಾಗಲಿ ಅಥವಾ ತೀವ್ರವಾಗಿಯಾಗಲಿ ನಮ್ಮ ಈಗಿನ ಅರೆ–ಪರಿಪೂರ್ಣ ಪ್ರಕೃತಿಯಲ್ಲಿ ದಿವ್ಯ ಪರಿವರ್ತನೆಯನ್ನು ತರುತ್ತದೆ.

*

ಈ ಅವರೋಹಣವು, ಈ ಕಾರ್ಯವು, ಅದರ ಪತನವಾಗುವ ಅಪಾಯದ ಸಾಧ್ಯತೆಯಿಲ್ಲದೆ ಇಲ್ಲ. ಮಾನವ ಮನಸ್ಸು ಅಥವಾ ಪ್ರಾಣಿಕ ಬಯಕೆಯು ಅವರೋಹಣವಾಗುವ ಶಕ್ತಿಯ ಮೇಲಿನ ಹಿಡಿತವನ್ನು ವಶಪಡಿಸಿಕೊಂಡರೆ ಮತ್ತು ಅದನ್ನು ತನ್ನ ಸೀಮಿತ ತಪ್ಪು ಕಲ್ಪನೆಗಳ ಅಥವಾ ದೋಷಪೂರಿತ ಹಾಗೂ ಅಹಂಕಾರಿಕ ಪ್ರಚೋದನೆಗಳ ಅನುಗುಣವಾಗಿ ಬಳಸಲು ಪ್ರಯತ್ನ ಮಾಡಿದರೆ, – ಪರಿಹರಿಸಲಾಗದ ಅಡೆತಡೆಗಳನ್ನು, ವಿಚಲನಗಳನ್ನು, ಬಾಧೆಗಳನ್ನು ಮತ್ತು ಯಾತನೆಗಳನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ, – ಸಾವು ಅಥವಾ ಸಂಪೂರ್ಣ ವೈಫಲ್ಯವೂ ಸಹ ಅಸಾಧ್ಯವಲ್ಲ. ಮನುಷ್ಯ, ಜೀವ ಮತ್ತು ದೇಹಗಳು ದಿವ್ಯತೆಗೆ ಪ್ರಜ್ಞಾಪೂರ್ವಕವಾದ ಸಂಪೂರ್ಣ ಸಮರ್ಪಣೆಯನ್ನು ಮಾಡಿಕೊಳ್ಳಲು ಕಲಿತುಕೊಂಡಾಗ ಮಾತ್ರ ಯೋಗ ಪಥವು ಸುಲಭ, ನೇರ, ತೀವ್ರ ಮತ್ತು ಕ್ಷೇಮವಾಗುವುದು.

*

**ಆತ್ಮವು ತಾಯಿಯ ತೋಳುಗಳಲ್ಲಿರುವ ಶಿಶು**

ನಮ್ಮ ಶರಣಾಗತಿ ಮತ್ತು ಮುಕ್ತತೆಯು ಆ ದಿವ್ಯಕ್ಕೆ ಮಾತ್ರ ಇರಬೇಕು, ಬೇರೆಯದಕ್ಕಲ್ಲ. ನಮ್ಮ ಮನಸ್ಸಿಗೆ ಅಥವಾ ನಮ್ಮಲ್ಲಿರುವ ಅಶುದ್ಧವಾದ ಜೀವಶಕ್ತಿಗೆ ಮತ್ತು ಅಸುರಿ ಹಾಗೂ ಅಹಿತವಾದ ಶಕ್ತಿಗಳಿಗೆ ಶರಣಾಗತವಾಗುವ ಸಾಧ್ಯತೆ ಇದೆ. ಇದಕ್ಕಿಂತ ಹಾನಿಕಾರಕ ಪ್ರಮಾದ ಇನ್ನೊಂದಿರಲಿಕ್ಕಿಲ್ಲ. ಆದುದರಿಂದ ನಮ್ಮ ಸಮರ್ಪಣೆಯು ಎಲ್ಲ ಪ್ರಭಾವಗಳಿಗೆ ಕುರುಡಾಗಬಾರದು ಮತ್ತು ನಿಷ್ಕ್ರಿಯವಾಗಿರಬಾರದು. ನಮ್ಮ ಸಮರ್ಪಣೆಯು ಪ್ರಾಮಾಣಿಕವಾಗಿರಬೇಕು, ಜಾಗರೂಕವಾಗಿರಬೇಕು, ಅತ್ಯುನ್ನತವಾದುದರೆಡೆಗೆ ಕೇಂದ್ರೀಕೃತವಾಗಿರಬೇಕು.

ದಿವ್ಯಕ್ಕೆ ಮತ್ತು ಶ್ರೀಮಾತೆಯವರಿಗೆ ನಮ್ಮ ಸ್ವ–ಸಮರ್ಪಣೆಯು (ಎಷ್ಟೇ ಕಷ್ಟವಾಗಲಿ) ನಮ್ಮ ಪ್ರಭಾವಶಾಲಿಯಾದ ಉದ್ದೇಶವಾಗಿರಬೇಕು ಮತ್ತು ಶಾಶ್ವತವಾದ ಏಕೈಕ ಆಶ್ರಯವಾಗಿರಬೇಕು. ಶ್ರೀಮಾತೆಯವರಿಗೆ ಸ್ವ–ಸಮರ್ಪಣೆ ಎಂದರೆ ನಮ್ಮ ಆತ್ಮವು ಅವರ ಕರಗಳಲ್ಲಿರುವ ಒಂದು ಸಾಧನವಾಗಿರಬೇಕು, – ಆತ್ಮವು ಆ ಶ್ರೀಮಾತೆಯ ತೋಳುಗಳಲ್ಲಿರುವ ಮಗು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/169–171 – ಶ್ರೀ ಅರವಿಂದರು**

# ಧ್ಯಾನಗಳು

**– ಅನು: ನಾಗಜ್ಯೋತಿ ಮಾನವಿ**

**ಎಲ್ಲಾ ರೀತಿಯ ವಿವಿಧ ಧ್ಯಾನಗಳು**

*ಹೌದು ಶ್ರೀಮಾತೆಯವರೆ, ಏಕೆಂದರೆ ಒಬ್ಬರು ಧ್ಯಾನ ಮಾಡುತ್ತಿರುವಾಗ ಅದು ಪ್ರಜ್ಞೆಯ ಕೇಂದ್ರೀಕರಣವಲ್ಲವೇ?*

**ಧ್ಯಾನ!**

ಬಹಳಷ್ಟು ರೀತಿಯ ಧ್ಯಾನಗಳಿವೆ! ಸಾಮಾನ್ಯವಾಗಿ ಯಾವುದನ್ನು ಜನರು ಧ್ಯಾನವೆಂದು ಕರೆಯುತ್ತಾರೆ ಎಂದರೆ, ಉದಾಹರಣೆಗೆ ಒಂದು ವಿಷಯ ಅಥವಾ ವಿಚಾರವನ್ನು ಆಯ್ದುಕೊಂಡು ಮತ್ತು ಅದರ ಅಭಿವೃದ್ಧಿಯನ್ನು ಅನುಸರಿಸುವುದು ಅಥವಾ ಅದರ ಅರ್ಥ ಏನಿರಬಹುದೆಂದು ತಿಳಿಯಲು ಪ್ರಯತ್ನಿಸುವುದು. ಒಂದು ರೀತಿಯ ಕೇಂದ್ರೀಕರಣವಿದೆ ಆದರೆ ಸೂಕ್ತವಾದ ಕೇಂದ್ರೀಕರಣದಂತೆ ಸಂಪೂರ್ಣವಾಗಿರುವುದಿಲ್ಲ, ಅಲ್ಲಿ ಯಾವುದರ ಮೇಲೆ ಕೇಂದ್ರೀಕರಿಸುತ್ತವೆಯೋ ಅದನ್ನು ಬಿಟ್ಟು ಬೇರೆ ಏನೂ ಇರುವುದಿಲ್ಲ. ಧ್ಯಾನವೆಂದರೆ ಅದು ಬಹಳ ವಿಶ್ರಾಂತಿಯುತ ಚಲನೆಯಾಗಿದೆ, ಕೇಂದ್ರೀಕರಿಸುವಿಕೆಗಿಂತಲೂ ಕಡಿಮೆ ಒತ್ತಡಕಾರಿಯಾಗಿದೆ.

ಬಂದಿರುವ ಸಮಸ್ಯೆಯನ್ನು, ಅದು ಮಾನಸಿಕವಾಗಿರಬಹುದು ಅಥವಾ ಪರಿಸರಾತ್ಮಕವಾಗಿರಬಹುದು ಒಬ್ಬರು ಅದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾಗ, ಮತ್ತು ಅವನು ಕೆಳಗೆ ಕುಳಿತುಕೊಂಡು ಎಲ್ಲಾ ಸಾಧ್ಯತೆಗಳೆಡೆಗೆ ನೋಡುತ್ತಾನೆ, ಅವನ್ನು ಹೋಲಿಸುತ್ತಾನೆ, ಅಭ್ಯಾಸಿಸುತ್ತಾನೆ, ಇದು ಒಂದು ರೀತಿಯ ಧ್ಯಾನವಾಗಿದೆ;? ಮತ್ತು ಸಂದರ್ಭಕ್ಕನುಸಾರವಾಗಿ ಸಹಜವಾಗಿ ಮಾಡುತ್ತಾನೆ. ಒಬ್ಬರು ನಿರ್ಧಾರವನ್ನು ತೆಗೆದುಕೊಳ್ಳುವ ಸಂದರ್ಭವನ್ನು ಎದುರಿಸುತ್ತಿರುವಾಗ ಉದಾಹರಣೆಗೆ, ಯಾವ ನಿರ್ಧಾರವನ್ನು ಕೈಗೊಳ್ಳಬೇಕೆಂದು ಗೊತ್ತಿಲ್ಲದಿದ್ದಾಗ, ಸಾಮಾನ್ಯವಾಗಿ ಅದರ ಬಗ್ಗೆ ಯೋಚಿಸುತ್ತಾನೆ, ತನ್ನ ತರ್ಕದೊಂದಿಗೆ ಸಮಲೋಚಿಸುತ್ತಾನೆ, ಎಲ್ಲಾ ಸಾಧ್ಯತೆಗಳನ್ನು ಹೋಲಿಸಿ ಮತ್ತು ಹೆಚ್ಚು ಕಡಿಮೆ ತನ್ನ ಆಯ್ಕೆ ಮಾಡುತ್ತಾನೆ. ಸರಿ, ಇದು ಒಂದು ರೀತಿಯ ಧ್ಯಾನವಾಗಿದೆ.

ಈಗ, ಇಲ್ಲಿ ಒಂದು ರೀತಿಯ ಧ್ಯಾನವಿದೆ ಇದರಲ್ಲಿ ಒಬ್ಬರು ಒಂದು ವಿಚಾರದ ಮೇಲೆ ಕೇಂದ್ರೀಕರಿಸುವುದಾಗಿ ಮತ್ತು ಕೇವಲ ಆ ವಿಚಾರ ಒಂದೇ ಇರುವಷ್ಟರ ಮಟ್ಟಿಗೆ ನಮ್ಮ ಗಮನವನ್ನು ಕೇಂದ್ರೀಕರಿಸುವುದಾಗಿದೆ; ಆಗ ಇದು ಏಕೀಭವಿಸರುವ ಅವಸ್ಥೆಯಾಗಿರದೇ, ಕೇವಲ ಮಾನಸಿಕ ಸ್ಥರದಲ್ಲಿರುವ ಏಕಾಗ್ರತೆಗೆ ಸಮಾನವಾದುದಾಗಿದೆ.

ಸಂಪೂರ್ಣವಾದ ಏಕಾಗ್ರತೆಯೆಂದರೆ ಎಲ್ಲಾ ಪ್ರಾಣಿಕ ಮತ್ತು ದೈಹಿಕ ಚಲನೆಗಳು ಎಂದರ್ಥವಾಗುತದೆ. ಒಂದು ಬಿಂದುವನ್ನೇ ನೋಡುವುದು ನಮಗೆ ಚೆನ್ನಾಗಿ ಗೊತ್ತಿರುವ ವಿಧಾನವಾಗಿದೆ. ಹಾಗಾಗಿ ದೇಹವೂ ಸಹ, ನಿಮಗೆ ಗೊತ್ತೇ ನಿಮ್ಮ ಕಣ್ಣುಗಳು ಒಂದೇ ಬಿಂದುವಿನಲ್ಲಿ ಕೇಂದ್ರೀಕೃತವಾಗಿವೆ ಮತ್ತು ನೀವು ಚಲಿಸುವುದೇ ಇಲ್ಲ.., ನೀವು ಏನನ್ನೂ ನೋಡುವುದಿಲ್ಲ, ಆ ಬಿಂದುವಿನಾಚೆ ನಿಮ್ಮ ದೃಷ್ಟಿಯನ್ನು ಚಲಿಸುವುದಿಲ್ಲ. ಮತ್ತು ಇದರ ಫಲಿತಾಂಶವಾಗಿ ಕೊನೆಗೆ ಆ ಬಿಂದುವೇ ತಾವಾಗುತ್ತಾರೆ. ಮತ್ತು ನನಗೆ ಗೊತ್ತಿದೆ ಕೆಲವೊಬ್ಬರು ಹೇಳುತ್ತಿದ್ದರು ಅದೇನೆಂದರೆ ಆ ಬಿಂದುವಿನ ಆಚೆ ದಾಟಿ ಹೋಗಬೇಕು, ಆ ಬಿಂದುವೇ ತಾವಾಗಿ ಎಷ್ಟು ಸಾಧ್ಯವೋ ಅಷ್ಟು ಇನ್ನೊಂದು ಬದಿಗೆ ಸಾಗಿ, ಆ ಬಿಂದುವನ್ನು ದಾಟಿ ಹೋಗಬೇಕು. ಮತ್ತು ಆಗ ಅವರು ಉನ್ನತ ಸ್ಥರಗಳಿಗೆ ತಮ್ಮನ್ನು ತಾವು ತೆರೆದುಕೊಂಡಿರುತ್ತಾರೆ. ಆದರೆ ನಿಜವಾಗಿಯೂ ನೀವು ಸಂಪೂರ್ಣವಾಗಿ ಆ ಬಿಂದುವಿನಲ್ಲಿ ಕೇಂದ್ರೀಕರಿಸುವಲ್ಲಿ ಯಶಸ್ವಿಯಾದರೆ, ಒಂದು ಸ್ಥಿತಿಯಿದೆ, ಯಾವಾಗ ತಾದಾತ್ಮ್ಯವು ಸಂಪೂರ್ಣವಾಗಿರುತ್ತದೆಯೋ ಮತ್ತು ಆಗ ಕೇಂದ್ರೀಕರಿಸುವ ವ್ಯಕ್ತಿ ಮತ್ತು ಆತ ಯಾವುದರ ಮೇಲೆ ಕೇಂದ್ರೀಕರಿಸುತ್ತಾನೋ ಆ ವಸ್ತುವಿನ ಮಧ್ಯೆ ಯಾವುದೇ ಅಂತರವಿರುವುದಿಲ್ಲ. ಅಲ್ಲಿ ಸಂಪೂರ್ಣವಾದ ತಾದಾತ್ಮ್ಯವಿರುತ್ತದೆ. ಆ ಬಿಂದು ಮತ್ತು ನಿಮ್ಮ ನಡುವೆ ಯಾವುದೇ ವ್ಯತ್ಯಾಸವಿರುವುದಿಲ್ಲ. ಇದು ಸಂಪೂರ್ಣವಾದ ಕೇಂದ್ರೀಕರಿಸುವಿಕೆಯಾಗಿದೆ, ಅದೇ ಸಮಯದಲ್ಲಿ, ಧ್ಯಾನದ ವಿಚಾರದ ಮೇಲೆ ಕೇಂದ್ರೀಕರಿಸುವ ವಿಧಾನವು ಅದರ ಒಂದು ಭಾಗವಾಗಿದೆ.

ಆದರೆ ನೀವು ಕೇವಲ ವೈಯಕ್ತಿಕ ಧ್ಯಾನದಲ್ಲಿ ಮುಳುಗಿಬಿಟ್ಟರೆ, ನೀವು ಒಂದು ಸಂಪೂರ್ಣ ಭ್ರಮೆಯಲ್ಲಿ ಪ್ರವೇಶಿಸಿ ಅದರಿಂದ ಎಂದೂ ಹೊರಬರಲಾರದೆ ಉಳಿಯಬಹುದು ಮತ್ತು ನೀವು ಅದ್ಭುತ ವಿಷಯಗಳನ್ನು ಸಾಕ್ಷಾತ್ಕಾರ ಮಾಡಿಕೊಂಡಿದ್ದೇನೆ ಎಂದು ನಂಬಿಬಿಡಬಹುದು. ಆದರೆ

ನಿಜವಾಗಿಯೂ ನೀವು ಅದರ ಗುರುತನ್ನು ನೋಡಿ ನಾನು ಅದನ್ನು ಸಾಕ್ಷಾತ್ಕರಿಸಿಕೊಂಡಿದ್ದೇನೆ ಎಂಬ ಭ್ರಮೆಗೊಳಗಾಗಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/272–273**

**ಇಡೀ ಜೀವನವೇ ಅನುಭವದ ಕ್ಷೇತ್ರವಾಗಿದೆ**

*"ಎಲ್ಲಾ ಕಾರ್ಯ"ವು "ಅನುಭವದ ಶಾಲೆಯಾಗಿದೆಯೇ"?*

ಹೌದು, ನಿಜವಾಗಿಯೂ, ನಿಮಗೆ ಅರ್ಥವಾಗಿಲ್ಲವೇ?

*ಇಲ್ಲ, ಶ್ರೀಮಾತೆಯವರೆ.*

ನೀವು ಏನೂ ಮಾಡದಿದ್ದರೆ, ನಿಮಗೆ ಯಾವ ಅನುಭವವೂ ಆಗುವುದಿಲ್ಲ. ಇಡೀ ಜೀವನವೇ ಅನುಭವ ಕ್ಷೇತ್ರವಾಗಿದೆ. ನಿಮ್ಮ ಪ್ರತಿಯೊಂದು ಚಲನವಲನವು, ಪ್ರತಿಯೊಂದು ವಿಚಾರವು ಪ್ರತಿಯೊಂದು ಕಾರ್ಯವು ಅನುಭವವಾಗಬಹುದು, ಅದು "ಅನುಭವ"ವಾಗಲೇಬೇಕು; ಸಹಜವಾಗಿ ಅಂತರಂಗದಲ್ಲಿ ನೀವು ಮಾಡಬೇಕಾದ ಪ್ರಗತಿಯ ಪ್ರಯತ್ನವನ್ನು ಕೆಲಸವೆಂಬ ಕಾರ್ಯಕ್ಷೇತ್ರದಲ್ಲಿ ಅಳವಡಿಸಬೇಕಾಗಿದೆ. ನೀವು ಕೇವಲ ಧ್ಯಾನ ಮತ್ತು ಏಕಾಗ್ರತೆಯಲ್ಲಿ ಮುಳುಗಿ ಕಾರ್ಯದಲ್ಲಿ ತೊಡಗದಿದ್ದರೆ, ನೀವು ಪ್ರಗತಿಯಾಗಿದ್ದೀರೋ, ಇಲ್ಲವೋ ಎಂಬುದು ನಿಮಗೆ ತಿಳಿಯುವುದಿಲ್ಲ. ನೀವು ಭ್ರಮೆಯಲ್ಲಿ, ಪ್ರಗತಿಯಾಗಿದ್ದೇನೆ ಎಂಬ ಭ್ರಮೆಯಲ್ಲಿ ಇರುತ್ತೀರಿ. ಯಾವಾಗ ನೀವು ಕೆಲಸ ಮಾಡಲು ಪ್ರಾರಂಭಿಸುತ್ತೀರೋ ನಿಮ್ಮ ಕಾರ್ಯದ ಸುತ್ತಮುತ್ತಲಿನ ಪರಿಸರಗಳು ಬೇರೆಯವರೊಂದಿಗಿನ ಸಂಪರ್ಕ, ಭೌತಿಕ ವೃತ್ತಿ – ಈ ಎಲ್ಲಾ ಅನುಭವದ ಕ್ಷೇತ್ರದ ಮೂಲಕ ಎಷ್ಟು ಪ್ರಗತಿಯಾಗಿದ್ದೇನೆ ಮತ್ತು ಇನ್ನೆಷ್ಟು ಪ್ರಗತಿ ಮಾಡಬೇಕಾಗಿದೆ ಎಂಬುದರ ಅರಿವು ಬರುತ್ತದೆ. ಒಂದು ವೇಳೆ ನೀವು ಯಾವುದೇ ಕ್ರಿಯೆಯಿಲ್ಲದೆ, ನಿಮ್ಮೊಳಗೆ ಬದುಕಿದರೆ, ನೀವು ಸಂಪೂರ್ಣವಾಗಿ ವ್ಯಕ್ತಿಗತ ಭ್ರಮೆಯಲ್ಲಿ ಬದುಕಬಹುದು; ಯಾವ ಕ್ಷಣ ಬಹಿರಂಗದಲ್ಲಿ ಕಾರ್ಯನಿರತರಾಗುತ್ತೀರೋ ಮತ್ತು ಜೀವನದ ವಸ್ತುಗಳ ಮತ್ತು ಸಂದರ್ಭಗಳ, ಬೇರೆಯವರೊಡನೆ ಸಂಪರ್ಕಕ್ಕೆ ಬರುತ್ತೀರೋ, ಆಗ ವಸ್ತುನಿಷ್ಠವಾಗಿ ನಿಮಗೆ ನಿಮ್ಮ ಪ್ರಗತಿ ಆಗಿದೆಯೋ, ನೀವು ಹೆಚ್ಚು ಶಾಂತ, ಪ್ರಜ್ಞೆಯುತ, ಬಲಿಶಾಲಿ, ನಿಸ್ವಾರ್ಥ, ಆಸೆಗಳಿಂದ ಮುಕ್ತ, ಯಾವುದೇ ಪ್ರಾಧಾನ್ಯತೆ, ನೂನ್ಯತೆ, ಯಾವುದೇ ತರಹದ

ಅವಿಧೇಯತೆ ಇದೆಯೋ ಇಲ್ಲವೋ ಅದಕ್ಕಾಗಿ ಪ್ರಯತ್ನ ಮಾಡಿದ್ದೀರೋ ಇಲ್ಲವೋ ಎಂಬುದರ ಅರಿವಾಗುತ್ತದೆ. ಇದೆಲ್ಲವೂ ನೀವು ಕೆಲಸ ಮಾಡುವುದರಿಂದ ಮಾತ್ರ ಅರಿವಾಗುತ್ತದೆ. ಒಂದು ವೇಳೆ ತೀರ ವ್ಯಕ್ತಿಗತವಾಗಿಯೇ ಇರುವ ಧ್ಯಾನದಲ್ಲಿ ತೊಡಗಿಕೊಂಡಿದ್ದಲ್ಲಿ, ಅದೂ ವೈಯಕ್ತಿಕ ಮಟ್ಟದಲ್ಲಿಯೇ ಇದ್ದಲ್ಲಿ, ಆಗ ನೀವು ಖಚಿತವಾಗಿ ಒಂದು ಭ್ರಮೆಯಲ್ಲಿ ಉಳಿಯುತ್ತೀರಿ. ಅದರಿಂದ ಎಂದಿಗೂ ಹೊರಬರಲು ಸಾಧ್ಯವಾಗುವದಿಲ್ಲ. ಮತ್ತೆ ಮೇಲಾಗಿ ಕೆಲವೊಂದು ಅಸಾಮಾನ್ಯವಾದ ಸಂಗತಿಗಳು ನಿಮಗೆ ಅರಿವಿಗೆ ಬಂದಿವೆ ಎಂದು ನಂಬಿಕೊಳ್ಳುತ್ತೀರಿ, ಆದರೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ, ಕೇವಲ ಅದರ 'ಪ್ರಭಾವ'ವನ್ನು ಮಾತ್ರ ಕಾಣುತ್ತೀದ್ದೀರಿ, ಅದೂ ತಾನೇ ಇದನ್ನು ಸಾಧಿಸಿಕೊಂಡಿದ್ದು ಎನ್ನುವ ಭ್ರಮೆಯಲ್ಲಿ ಇರುತ್ತೀರಿ.

ಇದೇ ಶ್ರೀ ಅರವಿಂದರ ಅಭಿಪ್ರಾಯವಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/287–288**

## "ನಮ್ಮ ಯೋಗವು ಪ್ರಾರಂಭಗೊಳ್ಳುವದು ಉಳಿದ ಯೋಗಗಳ ಮುಕ್ತಾಯದ ಹಂತದಲ್ಲಿ"

ಶ್ರೀ ಅರವಿಂದರು ಒಂದೆಡೆಗೆ ಬರೆದಿರುವದೇನೆಂದರೆ, 'ನಮ್ಮ ಯೋಗವು (ಪೂರ್ಣ ಯೋಗವು) ಪ್ರಾರಂಭಗೊಳ್ಳುವದು ಉಳಿದ ಯೋಗಗಳ ಮುಕ್ತಾಯದ ನಂತರ.' ಸಾಮಾನ್ಯವಾಗಿ ಯೋಗವು ಈ ರೀತಿಯ ವಿಧಿಪೂರ್ವಕವಾಗಿರುವ ತಾದಾತ್ಮ್ಯತೆಯೊಂದಿಗೇ, ಆ ದಿವ್ಯತ್ವದೊಂದಿಗೆ ಏಕವಾಗುವ ಮುಂಚೂಣಿಯಲ್ಲಿ ಇರುತ್ತದೆ.' ಇದಕ್ಕಾಗಿಯೇ 'ಯೋಗ'ವೆಂದು ಕರೆಯಲಾಗಿದೆ. ಯಾವಾಗ ಜನ ಸಮುದಾಯವು ಈ ಹಂತವನ್ನು ತಲುಪುವದೋ, ಆಗ ಅವರು ಅವರ ಪಥದ ಅಂತಿಮ ಬಿಂದುವಿಗೆ ಸಮೀಪಿಸಿರುವದಷ್ಟೇ ಅಲ್ಲದೇ ತೃಪ್ತ ಭಾವವನ್ನೂ ಹೊಂದಿರುತ್ತಾರೆ. ಆದರೆ ಶ್ರೀ ಅರವಿಂದರು ಬರೆದಿರುವದೇನೆಂದರೆ, "ಅವರು ಯಾವಾಗ ಮುಕ್ತಾಯದ ಹಂತ ತಲುಪಿದ್ದಾರೋ ಅಲ್ಲಿಂದ ನಾವು ಪ್ರಾರಂಭ ಮಾಡುತ್ತೇವೆ; ನೀವು ಈಗಾಗಲೇ ಆ ದಿವ್ಯತ್ವವನ್ನು ಕಂಡುಕೊಂಡಿರಬಹುದು, ಆದರೆ ಅದರ ಅಡಿಯಲ್ಲಿಯೇ ಚಿಂತನ–ಮನನ–ಧ್ಯಾನ ಮಾಡುತ್ತಲೇ, ಆ ದಿವ್ಯತ್ವವು ನಿಮ್ಮನ್ನು ನಿಮ್ಮ ದೇಹ ಭಾವದಿಂದ ಮುಕ್ತಗೊಳಿಸಲಿ ಎಂದು ಕಾಯುತ್ತ

ಕುಳಿತುಕೊಳ್ಳುವದು ವ್ಯರ್ಥ ಕ್ರಿಯೆಯಾಗುತ್ತದೆ. ಇದಕ್ಕೆ ಪ್ರತಿಯಾಗಿ, ಈ ಪ್ರಜ್ಞೆಯಿಂದ ನೀವು ನಿಮ್ಮ ಶರೀರದ ಕುರಿತು ಮತ್ತು ಜೀವನದ ಕುರಿತು ಮತ್ತು ರೂಪಾಂತರಣದ ಕಾರ್ಯದ ಪ್ರಾರಂಭದ ಕುರಿತು ನಿಮ್ಮನ್ನು ತೊಡಗಿಸಿಕೊಳ್ಳಿ – ಈ ಕ್ರಿಯೆಯು ಕಠಿಣ ಶ್ರಮವನ್ನು ಅಪೇಕ್ಷಿಸುತ್ತದೆ.” ಇದನ್ನು ಒಂದು ಘೋರವಾದ, ಇನ್ನೂ ಯಾರೂ ಪ್ರವೇಶಿಸದ ದಟ್ಟ ಕಾಡಿನ ಮೂಲಕ ಪಥವನ್ನು ರಚಿಸಿಕೊಂಡು ಸಾಗುವದಕ್ಕೆ ಅವರು ಹೋಲಿಸುತ್ತಾರೆ. ಏಕೆಂದರೆ ಇಲ್ಲಿಯವರೆಗೂ ಯಾರೂ ಇದನ್ನು ಅನುಷ್ಠಾನಿಸಿಲ್ಲ, ಯಾರೇ ಆಗಲಿ ತನ್ನ ಸಲುವಾಗಿ ತಾನೇ ತನ್ನದೇ ಆದ ಪಥವನ್ನು – ಅದೂ ಅಲ್ಲಿ ಯಾರೂ ರಚಿಸಿರದ ಪಥವನ್ನು ರಚಿಸಿಕೊಳ್ಳಬೇಕಾಗುತ್ತದೆ. ಈ ದಿವ್ಯತ್ವದ ಜೊತೆಗಿನ ಸಂಯೋಗದ ಜೊತೆಗಿನ ಅಪರಿಹಾರ್ಯವಾಗಿರುವ ನಿರ್ದೇಶಗಳನ್ನು ಹೊಂದದೇ, ಅದೂ ತನ್ನದೇ ಆತ್ಮದ ಮೂಲಕ ಮಾತ್ರ ಪ್ರಯತ್ನಿಸುವದು ಎಂದರೆ ಇಲ್ಲಿ ಅದು ಕೇವಲ ಬಾಲಿಶತನವಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/350–351**

## ಸ್ವಯಂ–ಗತಿಶೀಲತೆಯ ಧ್ಯಾನ

*ಓ ಶ್ರೀಮಾತೆಯೇ, ‘ಸ್ವಯಂ–ಗತಿಶೀಲತೆಯ ಧ್ಯಾನ’ದ ಕುರಿತು ಶ್ರೀ ಅರವಿಂದರ ಅಭಿಪ್ರಾಯವೇನು?*

– ಇದು ನಿಮ್ಮದೇ ಅಸ್ತಿತ್ವವನ್ನು ರೂಪಾಂತರಣಗೊಳಿಸುವ ಶಕ್ತಿಯ ಕುರಿತ ಧ್ಯಾನವಾಗಿದೆ. ಈ ಧ್ಯಾನವು ನಿಮ್ಮನ್ನು ಸದಾ ಪ್ರಗತಿಯಲ್ಲಿ ಸಾಗುವಂತೆ ಇರುತ್ತದೆ, ಇದು ಸ್ಥಿರ–ಸ್ವರೂಪದ ಧ್ಯಾನದ ವಿರೋಧವಾಗಿದೆ, ಏಕೆಂದರೆ ಈ ರೀತಿಯ ಸ್ಥಿರ–ಸ್ವರೂಪದ ಧ್ಯಾನದಲ್ಲಿ ಗತಿಹೀನತೆ ಅಷ್ಟೇ ಅಲ್ಲದೇ ನಿಷ್ಕ್ರಿಯತ್ವಕ್ಕೆ ಸಹಸಂಬಂಧಿಯಾಗಿರುತ್ತದೆ, ಅದೂ ಅಲ್ಲದೇ ಇದು ಪ್ರಜ್ಞೆಯನ್ನೂ ಸಹಿತ ಯಾವುದೇ ಪರಿವರ್ತನೆಗೆ ತರುವದಿಲ್ಲ ಅಥವಾ ನಿಮ್ಮ ಅಸ್ತಿತ್ವದ ಪಥದಲ್ಲಿ ಬದಲಾವಣೆಯನ್ನು ರೂಪಿಸುವದಿಲ್ಲ. ಗತಿಶೀಲ ಧ್ಯಾನವೆಂದರೆ ರೂಪಾಂತರಣದ ಧ್ಯಾನವಾಗಿದೆ. ಸಾಮಾನ್ಯವಾಗಿ ಜನರು ಈ ರೀತಿಯ ಗತಿಶೀಲ–ಧ್ಯಾನವನ್ನು ಇನ್ನೂ ಅರಿತುಕೊಂಡಿಲ್ಲ. ಯಾವಾಗ ಅವರು ಧ್ಯಾನಕ್ಕೆ ತೊಡಗಿಕೊಳ್ಳುತ್ತಾರೋ – ಅಥವಾ ಯಾವುದನ್ನು ಅವರು ಧ್ಯಾನವೆಂದು ಪರಿಭಾವಿಸಿಕೊಂಡಿದ್ದಾರೋ – ಆಗ ಅವರು

ಒಂದು ರೀತಿಯ ಸ್ಥಗಿತತೆಗೆ ಪ್ರವೇಶ ಪಡೆದಿರುತ್ತಾರೆ. ಅಲ್ಲಿ ಯಾವುದೇ ರೀತಿಯ ಸ್ಪಂದನವೂ ಇರುವದಿಲ್ಲ. ಮತ್ತೆ ಮೇಲಾಗಿ ಆ ಹಂತದಲ್ಲಿಯೇ ಅಂದರೆ ಅವರು ಯಾವ ಹಂತದಲ್ಲಿ ಪ್ರವೇಶ ಪಡೆದಿದ್ದರೋ ಅದೇ ಹಂತದಲ್ಲಿಯೇ ಅವರು ಧ್ಯಾನದಿಂದ ವಿಮುಖರಾಗುತ್ತಾರೆ. ಇಲ್ಲಿ ಅವರ ಪ್ರಜ್ಞೆಯಾಗಲೀ ಅಥವಾ ಅವರ ಅಸ್ತಿತ್ವವಾಗಲೀ ಏನೂ ಪರಿವರ್ತನೆಗೊಂಡಿರುವದಿಲ್ಲ. ಅದಕ್ಕಿಂತ ಮುಖ್ಯವಾಗಿ ಇದು ಹೆಚ್ಚಿನ ಪ್ರಮಾಣದಲ್ಲಿ ಸ್ಥಗಿತದ ಸ್ವರೂಪದಲ್ಲಿ ಇದೆ. ಆದಾಗ್ಯೂ ಅವರು ಇಲ್ಲಿಯೇ ಸಂತೊಷ ಭಾವವನ್ನು ಹೊಂದುತ್ತಾರೆ. ಈ ಭಾವದಲ್ಲಿ ಅವರು ಶಾಶ್ವತತೆಯ ಸಲುವಾಗಿ ಧ್ಯಾನ ಮಾಡುತ್ತಿದ್ದಲ್ಲಿ, ಇದು ಯಾವುದೇ ರೀತಿಯಲ್ಲಿಯೂ, ಯಾವ ಹಂತದಲ್ಲಿಯೂ – ವಿಶ್ವದಲ್ಲಾಗಲೀ ಅಥವಾ ಅವರಲ್ಲಿ ಆಗಲೀ ಪರಿವರ್ತನೆಯನ್ನು ತರಲು ಸಾಧ್ಯವಿಲ್ಲ. ಅದಕ್ಕಾಗಿಯೇ ಶ್ರೀ ಅರವಿಂದರು ಈ 'ಗತಿಶೀಲ–ಧ್ಯಾನ'ದ ಕುರಿತು ನಿಖರವಾಗಿಯೇ – ಅದೂ ಸಂಪೂರ್ಣವಾಗಿ ವಿಲೋಮವಾಗಿರುವದರ ಕುರಿತೇ ಇಲ್ಲಿ ಉಲ್ಲೇಖಿಸಿದ್ದಾರೆ, 'ಇದೇ ಗತಿಶೀಲ–ಧ್ಯಾನ'ವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/88** **–ಶ್ರೀಮಾತೆ**

## ರೂಪಾಂತರಣ

**– ಅನು: ಪುಟ್ಟು ಕುಲಕರ್ಣಿ**

**ರೂಪಾಂತರಣ ಎಂದರೇನು**?

'ಪೂರ್ಣ ಯೋಗ'ದ ಕೆಲವೊಂದು ಆಧ್ಯಾತ್ಮಿಕ ಪರಿಕಲ್ಪನೆಗಳನ್ನು ಮತ್ತು ಆಧ್ಯಾತ್ಮಿಕ ಸಂಗತಿಗಳನ್ನು ಅಭಿವ್ಯಕ್ತಗೊಳಿಸುವದರ (ಅದನ್ನು ಅತಿಮಾನಸದ ಸ್ವರೂಪದಂತೆ) ಸಲುವಾಗಿ ನಾನೇ **'ರೂಪಾಂತರಣ'** ಎನ್ನುವ ಶಬ್ದವನ್ನು, ಟಂಕಿಸಿದ್ದೇನೆ. ಜನ ಸಮುದಾಯವು ಈಗ ಅವುಗಳನ್ನು ಸ್ವೀಕರಿಸುವ ಮೂಲಕ ಮತ್ತು ಅವುಗಳನ್ನು ತಮ್ಮ ಬದುಕಿನಲ್ಲಿ ಉಪಯೋಗಗೊಳಿಸಿಕೊಳ್ಳುವಲ್ಲಿ ಮಾತ್ರ, ನಾನು ಯಾವ ರೀತಿಯಲ್ಲಿ ಅವುಗಳನ್ನು ಸಾದರಪಡಿಸಿದ್ದೇನೆಯೋ, ಆ ಮಹತ್ವವು ತಮಗೆ ಏನೂ ಸಂಬಂಧಿಸಿದ್ದಲ್ಲ ಎನ್ನುವಂತಹ ಸಂವೇದನೆಗಳಲ್ಲಿ ಕಾಣುತ್ತಿದ್ದಾರೆ. ಆತ್ಮದ 'ಪ್ರಭಾವದಲ್ಲಿ' ಈ ಸ್ವಭಾವವನ್ನು ಪರಿಶುದ್ಧಗೊಳಿಸಿಕೊಳ್ಳುವದು ರೂಪಾಂತರಣ ಎಂದು ನಾನು ಹೇಳುತ್ತಿಲ್ಲ; ಪರಿಶುದ್ಧಗೊಳಿಸುವದು ಕೇವಲ

ಒಂದು ಚೈತ್ಯದ ಪರಿವರ್ತನೆಯ ಒಂದು ಅಂಶವಾಗಿದೆ ಅಥವಾ ಮನೋವೈಜ್ಞಾನಿಕ–ಆಧ್ಯಾತ್ಮಿಕ (ಆತ್ಮ ಸಂಬಂಧಿ ಆಧ್ಯಾತ್ಮಿಕ) ಪರಿವರ್ತನೆ ಆಗಿದ್ದು, ಇಲ್ಲಿರುವ ಈ ಶಬ್ದವು ಹಲವಾರು ಅನುಭಾವಾರ್ಥಗಳನ್ನು ಹೊಂದಿದ್ದು, ಮತ್ತೆ ಇದು ಪದೇ ಪದೇ ಒಂದು ಸದಾಚಾರಪೂರ್ಣವಾಗಿರುವ ಅಥವಾ ನೈತಿಕ ಅರ್ಥವನ್ನು ಒಳಗೊಂಡಿದ್ದು, ಆದರೆ ಇದು ನನ್ನ ಉದ್ದೇಶಕ್ಕೆ ಸಂಪೂರ್ಣವಾಗಿ ಅಪರಿಚಿತವೇ ಆಗಿದೆ. ಈ ಆಧ್ಯಾತ್ಮಿಕ ರೂಪಾಂತರಣವು ಕೆಲವೊಮ್ಮೆ ಗತ್ಯಾತ್ಮಕ ಅಂಶವಾಗಿದೆ ಎನ್ನುವದು ನನ್ನ ಅಭಿಪ್ರಾಯವಾಗಿದೆ (ಇದು ಕೇವಲ 'ಸ್ವ'ತ್ವವನ್ನು ಮುಕ್ತಗೊಳಿಸುವದಷ್ಟೇ ಅಲ್ಲ, ಅಥವಾ ಯಾವುದೇ ಅವತರಣದ ಸಹಕಾರವಿಲ್ಲದೇ ಅತ್ಯಂತ ಪರಿಣಾಮಕಾರಿಯಾಗಿ 'ಏಕತ್ವ'ವನ್ನು ಅರಿತುಕೊಳ್ಳುವದು ಅಥವಾ ಸಾಕ್ಷಾತ್ಕರಿಸಿಕೊಳ್ಳುವದು ಎಂತಲ್ಲ). ಇದು ಈ ಆಧ್ಯಾತ್ಮಿಕ ಚೇತನಾ ಸ್ಥಿತಿಯ ಅಥವಾ ಪ್ರಜ್ಞೆಯ ಪ್ರಗತಿಶೀಲತೆಯನ್ನು ಆಧರಿಸಿಕೊಂಡಿದೆ, ಜೊತೆಜೊತೆಗೆ ಅಸ್ತಿತ್ವದ ಈ ಅವಚೇತನದವರೆಗೂ ಈ ಎಲ್ಲ ಅಂಶಗಳಲ್ಲಿಯೂ ಸ್ಥಿರವಾಗಿರುತ್ತದೆ (ಅಚಲವಾಗಿರುತ್ತದೆ). ಹೀಗಾಗಿ ಇದು ಆತ್ಮದ ಪ್ರಭಾವದಲ್ಲಿ ಮಾತ್ರ ಘಟಿತಗೊಳ್ಳುತ್ತದೆ ಎನ್ನುವಂತಿಲ್ಲ, ಏಕೆಂದರೆ, ಇದು ಚೇತನದ ಮೂಲಕ ಸ್ವರೂಪದ ಶುದ್ಧೀಕರಣದಲ್ಲಿ, ಮನಸ್ಸು ಮತ್ತು ಹೃದಯಗಳಲ್ಲಿ ಜ್ಞಾನೋದಯದಿಂದ ತೇಜಗೊಳ್ಳುವಲ್ಲಿ ಮತ್ತು ಪ್ರಾಣಿಕದ ಪ್ರಶಾಂತತೆಯ ಜೊತೆಯಲ್ಲಿ ಪ್ರವೃತ್ತವಾಗಿರುತ್ತದೆ. ಅಂದರೆ ಇದು ದಿವ್ಯ ಚೇತನವನ್ನು ಅವತರಣಗೊಳಿಸುವ ಮೂಲಕ ಸ್ಥಿರಗೊಳಿಸುವ ಮತ್ತು ಪ್ರಗತಿಶೀಲತೆಯಿಂದ ಎಲ್ಲ ಅಂಶಗಳಲ್ಲಿಯೂ ಪ್ರವೇಶಿಸುವ ಮೂಲಕ, ಹಾಗೂ ಪ್ರಚಲಿತದಲ್ಲಿರುವ ಚೇತನವನ್ನು–ಪ್ರಜ್ಞೆಯನ್ನು – ಸಂಪೂರ್ಣವಾಗಿ ಪ್ರತಿಸ್ಥಾಪನೆಗೊಳಿಸುವದಾಗಿದೆ. ಹೀಗಾಗಿ ಇದು ಮನಸ್ಸಿನ ಮೇಲೆ, ಜೀವನದ ಮೇಲೆ ಮತ್ತು ಶರೀರಕ್ಕೂ ಊರ್ಧ್ವದಲ್ಲಿ ಪ್ರಕಾಶನಗೊಳ್ಳುತ್ತಿದ್ದು, ಯಾವುದರ ಸಂಗಡವೂ ಮಿಶ್ರಿತವಾಗಿರುವದಿಲ್ಲ ಎನ್ನುವದನ್ನು ಕಾಣುತ್ತೇವೆ. ಮುಖ್ಯವಾಗಿ ಇದು ಮನಸ್ಸಿನ ಒಳಗೆ ಅಥವಾ ಜೀವನದ ಒಳಗೆ ಇಲ್ಲವೇ ಶರೀರದ ಒಳಗೆ ಘಟಿಸುವದಿಲ್ಲ. ಇದು ಯಾವುದೇ ರೀತಿಯಿಂದಲೂ ನಿರಾಕರಿಸಲು ಸಾಧ್ಯವಾಗದ ಹಲವು ಅನುಭವವಾಗಿದ್ದು, ಇದು ಅವತರಣಗೊಳ್ಳುತ್ತದೆ ಮತ್ತು ಇದರ ಪೂರ್ಣ ಅವತರಣವು ಸಂಪೂರ್ಣವಾಗಿಯೇ ಈ ಆವರಣವನ್ನು ನಿವಾರಿಸುತ್ತದೆ ಮತ್ತು ಈ ಮಿಶ್ರಿತ ಸ್ವರೂಪವನ್ನು ನಿವಾರಿಸುತ್ತದೆ, ಜೊತೆಗೆ ಈ ಆಧ್ಯಾತ್ಮಿಕ–ರೂಪಾಂತರಣದ ಪೂರ್ಣ ಪರಿಣಾಮವನ್ನು ರೂಪಿಸುತ್ತದೆ. ಇದೇ

ನನ್ನ ಅನುಭಾವವೂ ಆಗಿದೆ. ಇಲ್ಲಿ ಯಾವುದೇ ಪರಾಭೌತಿಕದ ಅಥವಾ ತರ್ಕಬದ್ಧತೆಯ ಕಾರ್ಯ–ಕಾರಣದ ಸಂಗತಿಗಳನ್ನು ಆ ಶೂನ್ಯದಲ್ಲಿ (ರಿಕ್ತತೆಯಲ್ಲಿ) ಆತ್ಮವು 'ಕಡ್ಡಾಯವಾಗಿ' ಮಾಡಲೇಬೇಕಾದ ಅಥವಾ ಮಾಡಬಹುದಾದ ಇಲ್ಲವೇ ಬಯಸುವ ಅಥವಾ ಬಯಸದೇ ಇರುವ ಯಾವುದೂ ಇಲ್ಲಿ ಸೂಕ್ತವಾಗಿರುವ ಯಾವುದೇ ಮೌಲ್ಯವನ್ನೂ ಹೊಂದಿರುವದಿಲ್ಲ. ನಾನು ಇಲ್ಲಿ ಮತ್ತೊಂದು ವಿಷಯವನ್ನು ಜೋಡಿಸಬಹುದಾಗಿದೆ, ಈ **ರೂಪಾಂತರಣವು** ಯೋಗದ ವಿಷಯದಲ್ಲಿ ಇರುವಂತೆ, ಕೇವಲ ಹೆಚ್ಚಿನ ಪರಿಶುದ್ಧತೆಯನ್ನು ಹೊಂದುವದು ಮತ್ತು ಪರಿವರ್ತನಗೊಳ್ಳುವದನ್ನೇ ಅತ್ಯಗತ್ಯವೆಂದು ಎಲ್ಲರಿಂದಲೂ ತಿಳಿಯುವ ಮತ್ತು ಈ ಮೂಲಕ ಮುಕ್ತತ್ವದ ಪಥದಲ್ಲಿ ಮುಂದೆ ಸಾಗಿ ಮತ್ತು ಜೀವನದ ಆಚೆಗೂ ಸಾಗುವ ಪಥದಲ್ಲಿ ಸಾಗಲು ರೂಪಿತದ ಈ ಯೋಗದ ಇತರೇ ಪಥಗಳಾಗಿರುವದಿಲ್ಲ. ಕೇವಲ ಅದರ ಪ್ರಮುಖ ಕೇಂದ್ರದ ವಿಷಯವೂ ಆಗಿರುವದಿಲ್ಲ. ಈ ಆತ್ಮದ ಆ ಪ್ರಭಾವವು ಈ ನವೀನ ಚೇತನದ (ಪ್ರಜ್ಞೆಯ) ಅವತರಣವು ಸಂಪೂರ್ಣವಾಗಿಯೇ ಆ ಊರ್ಧ್ವದಿಂದ ಇಲ್ಲಿ ಸ್ವಭಾವದಲ್ಲಿ ಕೆಳಗೆ ಅವತರಣಗೊಂಡು ಈ ಜೀವನವನ್ನು ರೂಪಾಂತರಗೊಳಿಸಿಕೊಳ್ಳುವಲ್ಲಿ, ಜೀವನದ ಈ ಆಧ್ಯಾತ್ಮಿಕ **'ಪೂರ್ಣತ್ವದ ಅವತರಣದ'** ಕುರಿತು ಯಾವುದೇ ರೀತಿಯ ಸಂಶಯಗಳನ್ನು ಹೊಂದಿರುವದಿಲ್ಲ. ಅದಕ್ಕಾಗಿ ಈ ಜೀವನದಲ್ಲಿ ಆಧ್ಯಾತ್ಮಿಕತೆಯಿಂದ ಪಲಾಯನ ಮಾಡುವದೂ ಬೇಕಾಗಿರುವದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/403–404**

**ರೂಪಾಂತರಣದ ಆಂತರ್ಯ**

ಈ **ರೂಪಾಂತರಣದ** ಮೂಲಕ ಸ್ವಭಾವದಲ್ಲಿ ಕೆಲವು ಪರಿವರ್ತನೆಗಳಿಗೆ ಅವಕಾಶವಾಗುತ್ತದೆ ಎಂದು ನನ್ನ ಅಭಿಪ್ರಾಯವಲ್ಲ. ಉದಾಹರಣೆಗೆ, ಸಂತ–ಹಂತವಾಗಲಿ ಅಥವಾ ನೈತಿಕತೆಯ ಪರಿಪಕ್ವತೆಯಾಗಲಿ ಅಥವಾ ಯೋಗದ ಸಿದ್ಧಿ(ತಾಂತ್ರಿಕ ಸಿದ್ಧಿ)ಗಳಾಗಲಿ ಅಥವಾ ಚಿನ್ಮಯ ಸ್ವರೂಪದ ಶರೀರವನ್ನು ಪಡೆಯುವದಾಗಲಿ ಎಂದು ನಾನು ಅರ್ಥೈಸುತ್ತಿಲ್ಲ. ನಾನು ಇಲ್ಲಿ ಈ ರೂಪಾಂತರಣವನ್ನು ಒಂದು ವಿಶೇಷ ಅರ್ಥದಲ್ಲಿ ಕಾಣುತ್ತಿದ್ದೇನೆ, ಇದು ಚೇತನ ಅಥವಾ ಪ್ರಜ್ಞೆಯಲ್ಲಿ ಒಂದು ಮೌಲ್ಯಯುತವಾದ ಮೂಲಭೂತ ಮತ್ತು ಸಂಪೂರ್ಣವಾಗಿರುವ, ಜೊತೆಗೆ ಇಲ್ಲಿ ಒಂದು ಸಾಮರ್ಥ್ಯಪೂರ್ಣವಾಗಿರುವ

ಹಾಗೂ ಆ ಮೂಲಕ ಈ ನಮ್ಮ ಜೈವಿಕ ಅಸ್ತಿತ್ವದಲ್ಲಿ ಆಧ್ಯಾತ್ಮಿಕ ವಿಕಾಸವನ್ನು, ಮತ್ತೂ ಮಹತ್ತರವಾದ ಪ್ರಗತಿಯನ್ನು ಹಾಗು ಔನ್ನತ್ಯದ ಮಾದರಿಯಲ್ಲಿಯೇ ಜೊತೆಗೆ ಆ ಸುವಿಶಾಲ ಸುವ್ಯಾಪ್ತಗೊಳ್ಳುವದರ ಬಗೆಗೆ ಹಾಗೂ ಪರಿಪೂರ್ಣ–ಗೊಳ್ಳುವದರ ಬಗೆಗೆ, ಭರವಸೆಯಿಂದ ತುಂಬಿರುವ ಮತ್ತು ಪೂರ್ಣವಾಗಿರುವ ಹೆಜ್ಜೆಯೊಂದನ್ನು ಇಡುವದರ ಕುರಿತ ಆಂತರ್ಯವನ್ನು ಒಳಗೊಂಡಿದೆ. ಇದು ಆ ಭೌತಿಕ ಅಂಶವೇ ಪ್ರಮುಖವಾಗಿರುವ ಪ್ರಾಣಿ–ಪ್ರಪಂಚದಲ್ಲಿ ಮತ್ತು ಈ ಜೈವಿಕ–ಹಂತದ ಪ್ರಾರಂಭದ ಹಂತದಲ್ಲಿ ರೂಪಣೆಗೊಂಡ ಮಾನಸಿಕ ಅಸ್ತಿತ್ವವಿದಾಗಿದ್ದು, ಇಲ್ಲಿ ನಿರ್ಧಾರಿತಗೊಳ್ಳುವ ಸಾಧನೆಗಳ ಮೂಲಕವಾಗಿಯೇ ಲಭ್ಯವಾಗುವ ಕ್ಷೀಣ–ಪ್ರಜ್ಞೆಗಿಂತ ತೀರ ಬೃಹತ್ ಆಗಿರುತ್ತದೆ. ಒಂದು ವೇಳೆ ಇಲ್ಲಿ ಇಂತಹ ಅಲ್ಪವಾದದ್ದು ಏನಾದರೂ ಘಟಿಸಿದಲ್ಲಿ ಅಥವಾ ಮೂಲ ಉದ್ದೇಶಕ್ಕಾಗಿ ಇರುವ ಆಧಾರದ ಆ ಸೂಕ್ತ ಪ್ರಾರಂಭದ ಅಂಶಕ್ಕಿಂತ ಹೊರತಾಗಿ, ಬೇರೆಯಾಗಿ ಪ್ರಾರಂಭಗೊಂಡಿದ್ದಲ್ಲಿ, ಆಗ ಪರಿಪಕ್ವತೆಯನ್ನು ಪಡೆದುಕೊಳ್ಳಲು ಆಮೂಲಾಗ್ರವಾಗಿ ಪ್ರಗತಿಗೊಳ್ಳಲೆಂದು, ನಾನು ಹೊಂದಿರುವ ಉದ್ದೇಶವು ಈಡೇರದೇ ಹೋಗುತ್ತದೆ. ಕೇವಲ ಆಂಶಿಕ ಸಾಕ್ಷಾತ್ಕಾರವು, ಇದು ಕೆಲವು ಅನ್ಯ ವಿಷಯಗಳಿಂದ ಮಿಶ್ರಣಗೊಂಡಿದ್ದು ಜೊತೆಗೆ ಅನಿರ್ಣಿತವಾಗುವಂತೆಯೇ ಇರುತ್ತದೆ. ಹೀಗಾಗಿ ನಾನು ಜೀವನಕ್ಕಾಗಿ ಹಾಗೂ ಯೋಗಕ್ಕಾಗಿ ಏನನ್ನು ಬಯಸುತ್ತಿದ್ದೇನೆಯೋ ಅದನ್ನು ಪಡೆದುಕೊಳ್ಳಲು ಆಗುವದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/398**

## ವೈಯಕ್ತಿಕ ಸಿದ್ಧಿ ಮತ್ತು ರೂಪಾಂತರಣ

ಈ ಎರಡೂ ವಿಷಯಗಳನ್ನು ನೀವು ತಪ್ಪು ಗ್ರಹಿಸಿದ್ದೀರಿ. ಮೊದಲನೇಯದಾಗಿ, ಈ ಸಿದ್ಧಿಯನ್ನು (ಮನಸ್ಸು, ಜೀವ ಮತ್ತು ಶರೀರದ ರೂಪಾಂತರಣವನ್ನು) ಪಡೆದುಕೊಳ್ಳುವ ದಿಸೆಯಲ್ಲಿ ಇರುವ ಅವಿರತವಾದ ಪ್ರಯತ್ನವೇನೂ ಹೊಸ ವಿಷಯವಲ್ಲ, ಏಕೆಂದರೆ ಈಗಾಗಲೇ ಹಲವಾರು ಯೋಗಿಗಲೂ ಇದನ್ನು ಸಿದ್ಧಿಸಿಕೊಂಡಿದ್ದಾರೆ. ಆದರೆ ನನ್ನ ಅನಿಸಿಕೆಯ ಪ್ರಕಾರ, ನಾನು ಅಪೇಕ್ಷಿಸುತ್ತಿರುವಂತಹ ಪಥದಲ್ಲಿ ಅಲ್ಲ. ಅವರೆಲ್ಲರೂ ಅದನ್ನು 'ವೈಯಕ್ತಿಕ ಸಿದ್ಧಿ'ಯ ಹಂತದಲ್ಲಿ ಯೋಗ ಸಿದ್ಧಿಯ ಮೂಲಕ ಪಡೆದುಕೊಂಡಿದ್ದಾರೆಯೇ ವಿನಾ ಅದನ್ನು ಸ್ವಭಾವದ ಧರ್ಮವೆಂದು ಪಡೆದುಕೊಂಡಿಲ್ಲ.

ಎರಡನೇಯದಾಗಿ, ಈ ಅತಿಮಾನಸೀಯ ರೂಪಾಂತರಣವು ಆಧ್ಯಾತ್ಮಿಕ–ಮನೋಮಯ ಹಂತಕ್ಕೆ ಸಮನಾಗಿಲ್ಲ. ಇದು ಮನಸ್ಸಿನ, ಪ್ರಾಣದ ಮತ್ತು ಶರೀರದ ಪರಿವರ್ತನೆಯಾಗಿದೆ ಅಥವಾ ಅಧಿಮಾನಸೀಯ–ಆಧ್ಯಾತ್ಮವನ್ನು ಸಿದ್ಧಿಸಿಕೊಂಡಿರುವದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/414**

**ಪ್ರಾಚೀನ ಯೋಗಗಳು ಮತ್ತು ಈ ಯೋಗದ ವ್ಯತ್ಯಾಸ**

ಪ್ರಾಚೀನ ಪದ್ಧತಿಯಲ್ಲಿರುವ ಯೋಗಳು ಅಸಮರ್ಥವಾಗಿವೆ ಮತ್ತು **"ಈ ಯೋಗ"**ವನ್ನು ಅನುಷ್ಠಾನಿಸಲು ಸಾಧ್ಯವಿಲ್ಲ ಎನ್ನುವ ವ್ಯತ್ಯಾಸ ಇಲ್ಲವೇ ಇಲ್ಲ. ಅವೂ ಸಹಿತ ಅಷ್ಟೇ ಪರಿಪೂರ್ಣವಾಗಿ ಇದನ್ನು ಅನುಷ್ಠಾನಿಸಲು ಶಕ್ತವಿವೆ. ಆದರೆ ಅವುಗಳು ಬಹುತೇಕವಾಗಿ ವೈಯಕ್ತಿಕ–ಸಾಕ್ಷಾತ್ಕಾರದ ದಿಸೆಯಲ್ಲಿಯೇ, ನಿರ್ವಾಣ ಅಥವಾ ಸ್ವರ್ಗ ಪ್ರಾಪ್ತಿ ಮತ್ತು ಈ ಜೀವನದ ಪರಿತ್ಯಾಗದ ಕುರಿತು ಮುಂದುವರೆದಿವೆ. ಆದರೆ **"ಈ ಯೋಗ"**ವು ಜೀವನವನ್ನು ತ್ಯಜಿಸುವ ಹಂತವನ್ನು ಹೊಂದಿಲ್ಲ. ಈ ಭೌತಿಕ–ಜೀವನದಿಂದ ಮತ್ತು ಅಸ್ತಿತ್ವದಿಂದ ರೂಪಾಂತರಣ–ಗೊಳ್ಳಲು ಅತಿಮಾನಸದ ಅತ್ಯಾವಶ್ಯಕತೆ ಇದೆ. ಹೀಗಾಗಿ ಇಲ್ಲಿ 'ವೈಯಕ್ತಿಕ ಸಾಕ್ಷಾತ್ಕಾರ'ದ ಹಂತವನ್ನು ಪಡೆಯುವ ಹಂತವಿದಾಗಿಲ್ಲ. ಆದರೆ ಮೊದಲಿಗೆ 'ಸ್ವ'ತ್ವವನ್ನು ಅರಿತುಕೊಳ್ಳಲೇಬೇಕಾದುದು ನಿಶ್ಚಿತವಿದೆ, ತದನಂತರದಲ್ಲಿ ಮಾತ್ರ 'ಅತಿಮಾನಸ'ವನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/405**

**ಪ್ರತಿ ಅಂಶದ ಮೂಲಕವೂ ಈ ದಿವ್ಯತ್ವದ ತೋಷ**

ಈ ಸಮನ್ವಯಗೊಂಡ ಯೋಗ ಅಥವಾ ಪೂರ್ಣ ಯೋಗದ ಗಮ್ಯವನ್ನು ಪರಿಗಣಿಸುವದಾದರೆ, ಇದು ಜೀವಿಗಳೊಂದಿಗೆ (ಅಸ್ತಿತ್ವಗಳೊಂದಿಗೆ) ಸಂಯೋಗಗೊಂಡ ಒಕ್ಕುಟವಾಗಿದ್ದು, ಚೇತನದ ಹಾಗು ತೋಷದ ದಿವ್ಯತ್ವದ ಮೂಲಕ ಮಾನವನ ಸ್ವಭಾವದ ಪ್ರತಿಯೊಂದು ಅಂಶದಲ್ಲಿಯೂ ಬೇರೆಯಾಗಿಯೋ ಅಥವಾ ಏಕಕಾಲದಲ್ಲಿಯೋ ಸಂಯೋಗವಾಗುತ್ತದೆ. ಆದರೆ ಇಲ್ಲಿ ಸರ್ವಸ್ವವೂ ಸೌಷಮ್ಯಯುಕ್ತವಾಗಿದ್ದು ಮತ್ತು ಸಮ್ಮಿಲಿತಗೊಂಡಿರುತ್ತದೆ. ಈ

ಮೂಲಕ ಸರ್ವವೂ ಅಸ್ತಿತ್ವದ ದಿವ್ಯ–ಸ್ವಭಾವದಲ್ಲಿ ರೂಪಾಂತರಣವನ್ನು ಪಡೆಯುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23–24/587**

**ಪ್ರಕೃತಿಯ ಯೋಗ ವಿಶಾಲತೆ**

ಆದರೆ ಎಲ್ಲ ಜೀವನದಲ್ಲಿಯೂ, ಇದು ಸ್ವರೂಪಗೊಳ್ಳುತ್ತಿರುವದರ ಹಿಂದೆ ನಾವು ಗಮನಿಸಿದರೆ, ಇದು 'ಪ್ರಕೃತಿಯ ಯೋಗ ವೈಶಾಲ್ಯತೆ'ಯಾಗಿದೆ. ಏಕೆಂದರೆ, ಇದು ಪ್ರಜ್ಞಾಪೂರ್ವಕವಾಗಿಯೇ ಇಲ್ಲಿ ಅದನ್ನು ಪ್ರಯತ್ನಿಸುತ್ತಿದ್ದು ಮತ್ತು ಸುಪ್ತ ಪ್ರಜ್ಞೆಯಲ್ಲಿ ಅವಳ (ಪ್ರಕೃತಿಯ) ಪರಿಪೂರ್ಣತೆಯನ್ನು ಅರಿತುಕೊಳ್ಳುತ್ತ, ಅದರಲ್ಲೂ ನಿರಂತರ–ಕ್ರಮಬದ್ಧತೆಯಲ್ಲಿ ಹೆಚ್ಚುತ್ತಿರುವ ಅಭಿವ್ಯಕ್ತಿಗಳಲ್ಲಿ, ಇನ್ನೂವರೆಗೂ ಅರಿವಿಗೆ ಬಾರದೇ ಉಳಿದ ಕ್ಷಮತೆಗಳಲ್ಲಿ ಅವಳ ಈ ಪರಿಪೂರ್ಣತೆಯನ್ನು ಸಾಕ್ಷಾತ್ಕರಿಸಿಕೊಳ್ಳುತ್ತ ಸಾಗಿ, ಮತ್ತೆ ತನ್ನದೇ ದಿವ್ಯತ್ವದ – ಅಥವಾ ವೈಶ್ವಿಕದ ನೈಜ ವಾಸ್ತವದೊಂದಿಗೆ ಸಮ್ಮಿಲನಗೊಳಿಸುವದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23–24/6**

**ಅತಿಮಾನಸೀಯ–ರೂಪಾಂತರಣ; ಒಂದು ನೂತನ ಉಪಕ್ರಮ**

ಸರ್ವಾಂತರ್ಯಾಮಿತ್ವ ಮತ್ತು ರೂಪಾಂತರಣ ಇವೆರಡೂ ಬೇರೆ ಬೇರೆಯದೇ ವಿಷಯವಾಗಿವೆ. ಈ ರೂಪಾಂತರಣದ ಪ್ರಕ್ರಿಯೆಯು ಮೂರು ವಿಧದಲ್ಲಿ ಘಟಿಸುತ್ತದೆ ಅಥವಾ ಇಲ್ಲಿ ಈ ಸಾಧನೆಯಲ್ಲಿ ಇವುಗಳನ್ನು, ಸಾಧನಾ ಪಥದ ಹಂತಗಳೆಂದು ಪರಿಕಲ್ಪಿಸಲಾಗಿದೆ. ಇವುಗಳನ್ನು ಚೈತ್ಯದ ರೂಪಾಂತರಣ, ಆಧ್ಯಾತ್ಮಿಕ ರೂಪಾಂತರಣ ಮತ್ತು ಅತಿಮಾನಸದ ಹಂತವೆಂದು ಕರೆಯಲಾಗುತ್ತದೆ. ಇವುಗಳಲ್ಲಿ ಮೊದಲಿನ ಎರಡು ವಿಧಾನಗಳನ್ನು ಈಗಾಗಲೇ ಪ್ರಚಲಿತದಲ್ಲಿ ಇರುವ ಯೋಗಗಳಲ್ಲಿ, ಅವುಗಳದೇ ಆದ ಪಥದಲ್ಲಿ ಅನುಷ್ಠಾನಿಸಲಾಗುತ್ತಿದೆ. ಆದರೆ ಮೂರನೇಯ ವಿಷಯವು ಮಾತ್ರ ಈ ನೂತನವಾಗಿದೆ. ಆಧ್ಯಾತ್ಮಿಕ ಅರಿವನ್ನು (ಸಾಕ್ಷಾತ್ಕಾರವನ್ನು) ಪಡೆದುಕೊಳ್ಳಲು ಮತ್ತು ರೂಪಾಂತರಣಗೊಳ್ಳಲು ಮೊದಲಿನ ಎರಡು ವಿಧಾನಗಳೇ ಸಾಕಾಗುತ್ತವೆ. ನನ್ನ ದೃಷ್ಟಿಯಲ್ಲಿ, ಮಾನವ ಜೀವನವನ್ನು ದಿವ್ಯತ್ವಗೊಳಿಸುವದರ ಸಲುವಾಗಿ

ಇರುವ ರೂಪಾಂತರಣವು, ಅತಿಮಾನಸವಾಗಿ ಪರಿವರ್ತನೆಯಾಗದೇ ಸಾಧ್ಯವಾಗುವದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/504**

**ರೂಪಾಂತರಣದ ಪಥಗಳು**

ರೂಪಾಂತರಣದ ಪಥಗಳೆಂದರೆ, ಆ ಔನ್ನತ್ಯದಲ್ಲಿರುವ ಸರ್ವೋಚ್ಚವಾಗಿರುವ ಚೇತನದ (ಪ್ರಜ್ಞೆಯ) ಅಥವಾ ಆ ಸ್ವಭಾವವನ್ನು ಮನಸ್ಸಿನಲ್ಲಿ, ಪ್ರಾಣದಲ್ಲಿ ಮತ್ತು ಶರೀರದಲ್ಲಿ ಅವತರಣಗೊಳಿಸುವ ಮೂಲಕ ಈ ಮೂಲದಲ್ಲಿಯೂ (ಆಧಾರದಲ್ಲಿಯೂ) ನೆಲೆಗೊಳಿಸುವ ಹಂತವಾಗಿದೆ. ಅಲ್ಲಿರುವ ಆ "ಸತ್ಯ ಊರ್ಧ್ವ ಪ್ರಜ್ಞೆಯ 'ಸ್ವ'ತ್ವವು" ಯಾವಾಗಲೂ ಆಧ್ಯಾತ್ಮಿಕವಾಗಿಯೇ ಇರುತ್ತದೆ. ಆದರೆ ಇದು ಅಲ್ಲಿ ಆ ಊರ್ಧ್ವದಲ್ಲಿ ಇದೆ. ಒಂದು ವೇಳೆ ಯಾರಾದರೂ ಅದನ್ನು ಪಡೆದುಕೊಳ್ಳಲು ಆ ಔನ್ನತ್ಯಕ್ಕೆ ಆರೋಹಗೊಂಡಲ್ಲಿ, ಎಲ್ಲಿಯವರೆಗೂ ಅವನು ಅಲ್ಲಿ ಸ್ಥಿತಗೊಳ್ಳುತ್ತಾನೆಯೋ ಅಲ್ಲಿಯವರೆಗೂ ಅವನು 'ಮುಕ್ತ'ನಾಗಿಯೇ ಇರುತ್ತಾನೆ. ಒಂದು ವೇಳೆ ಅವತರಣಗೊಳ್ಳಲು ಕೆಳಗೆ ಬಂದಲ್ಲಿ ಅಥವಾ ಮನಸ್ಸನ್ನು, ಪ್ರಾಣವನ್ನು ಅಥವಾ ಶರೀರವನ್ನು ಉಪಯೋಗಿಸಿಕೊಳ್ಳುತ್ತಿದ್ದಲ್ಲಿ, –ಜೊತೆಗೆ ಯಾರು ಜೀವನದ ಜೊತೆಗೇ ಸಂಬಂಧವನ್ನೂ ಸ್ಥಾಪಿಸಿಕೊಳ್ಳುತ್ತಿದ್ದಲ್ಲಿ, ಅವನು ಆ ರೀತಿಯಲ್ಲಿಯೇ ಪ್ರವೃತ್ತನಾಗಲು ಇಚ್ಛಿಸುತ್ತಿದ್ದಲ್ಲಿ ಅವನು ಆ ರೀತಿಯಲ್ಲಿಯೂ ಮುನ್ನಡೆಯಬಹುದು. ಅದಕ್ಕಾಗಿ ಅವನು ಅವತರಣಗೊಂಡು ಇಲ್ಲಿನ ಸಾಮಾನ್ಯ–ಪ್ರಜ್ಞೆಯ (ಲೌಕಿಕ–ಪ್ರಜ್ಞೆಯ) ಪ್ರಕಾರವಾಗಿ ಕ್ರಿಯೆಗಿಳಿಯಬಹುದು, ಅಥವಾ ಈ ಜೀವದಲ್ಲಿಯೇ ಇದ್ದು ಮನಸ್ಸು, ಜೀವ(ನ) ಮತ್ತು ಶರೀರವನ್ನು ಉಪಕರಣಗಳನ್ನಾಗಿಸಿಕೊಂಡು ಇಲ್ಲಿ ಅವುಗಳನ್ನು ಸೂಕ್ತವಾಗಿ ಪರಿವರ್ತಿಸಿಕೊಂಡು ಸಾಗಬಹುದು. ಆದರೆ ಇವೆಲ್ಲವೂ ರೂಪಾಂತರಣದಿಂದ ಮಾತ್ರವೇ ಸೂಕ್ತಗೊಳ್ಳುತ್ತವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/423**

**ನಮ್ಮ ಯೋಗವೆಂದರೆ ರೂಪಾಂತರಣದ ಯೋಗ**

ನಮ್ಮ ಈ ಯೋಗವು ರೂಪಾಂತರಣದ ಯೋಗವಾಗಿರುತ್ತದೆ. ಆದರೆ ಇದು ಪ್ರಜ್ಞೆಯ ಸಂಪೂರ್ಣವಾದ ರೂಪಾಂತರಣವಾಗಿರುತ್ತದೆ. ಅದು ಅಡಗಿಸಿಕೊಂಡಿರುವ

ಅದರ ಬಹುತೇಕ ಬಾಹ್ಯ ಚಲನವಲನಗಳ ಮೂಲಕ ದೃಶ್ಯಗೊಳ್ಳುತ್ತಿದ್ದರೂ, ರಹಸ್ಯವಾಗಿರುವ ಅಂತರಂಗದ–ವಿಭಾಗಗಳೂ ಸಹಿತ, ಮುಡಿಯಿಂದ ಅಡಿಯವರೆಗೂ ಈ ಸ್ವಭಾವವು ಸಂಪೂರ್ಣವಾಗಿ ರೂಪಾಂತರಣಗೊಳ್ಳುತ್ತದೆ. ಮುಖ್ಯವಾಗಿ ಇದೊಂದು ನಾವು ಪರಿಕಲ್ಪಿಸಿಕೊಂಡಿರುವ ಈ ಜೀವನದ ಮತ್ತು ಪ್ರಾಣಿಕ ಸಂಚಲನಗಳ ನೈತಿಕ ಪರಿವರ್ತನೆಯೂ ಅಲ್ಲ ಮತ್ತು ಮತದ (ಪಂಥದ) ಪರಿವರ್ತನೆಯೂ ಅಲ್ಲ; ಯಾವುದೇ ಸಂತ–ಹಂತವೂ ಅಲ್ಲ ತಾಪಸಿಕ–ನಿಯಂತ್ರಣವೂ ಅಲ್ಲ; ಉದಾತ್ತೀಕರಣಗೊಳಿಸುವದೂ ಅಲ್ಲ ಮತ್ತೆ ದಮನಕಾರಕವೂ ಅಲ್ಲ; ಇದು ಇಲ್ಲಿ ಭವ್ಯತ್ವವೆಂದು ಕರೆಯುತ್ತಿಲ್ಲ ಮತ್ತು ಒತ್ತಾಯಪೂರ್ವಕವದ ನಿಯಂತ್ರಣವೂ ಅಲ್ಲ; ಬಾಹ್ಯದ ಅಸ್ತಿತ್ವವನ್ನೂ ನಿರಾಕರಿಸುತ್ತಿಲ್ಲ. ಇಲ್ಲಿ ಪರಿಕಲ್ಪನೆಗೊಳಿಸುತ್ತಿರುವದೇನೆಂದರೆ ಅಲ್ಪದಿಂದ ಕಲ್ಪದವರೆಗೆ ಪರಿವರ್ತನೆ; ಅಧೋಸ್ಥಲದಿಂದ ಊರ್ಧ್ವತಲಕ್ಕೆ ಆರೋಹಣ; ಮೂಲದ ಸಮತಲದಿಂದ ಘನಪ್ರಜ್ಞೆಯವರೆಗೆ – ಅಂದರೆ ಸುವ್ಯಾಪ್ತದ ಪರಮಾವಧಿಗೆ, ಔನ್ನತ್ಯದ ಮೇರುವಿಗೆ, ಸರ್ವೋಚ್ಚ ಹಂತಕ್ಕೆ, ಅಂತರಾಳದಾಳಕ್ಕೆ, ಒಟ್ಟಿನಲ್ಲಿ ಸರ್ವಾತಿ–ಸರ್ವವಾಗಿ ಪರಿವರ್ತನಗೊಂಡು ಮತ್ತೆ, ಇಡೀ ಜೀವ(ನ)ದ ಆಂತರ್ಯವನ್ನು ಮತ್ತು ಅದರ ಘನದ್ರವ್ಯತ್ವವನ್ನು ಜೊತೆಗೆ ಪ್ರತಿಯೊಂದೂ ಸೂಕ್ಷ್ಮಾತಿಸೂಕ್ಷ್ಮ ವಿವರಣೆಯನ್ನು, ಇಲ್ಲಿಯವರೆಗೂ ಅದು ಅರಿವಿಗೆ ಬಾರದೇ ಉಳಿದಿದ್ದನ್ನು ಮತ್ತು ಅದು ಅಸ್ತಿತ್ವದ ಸ್ವಭಾವವಾಗಿ ದಿವ್ಯತ್ವಗೊಳಿಸುವದನ್ನು ಸಾಕ್ಷಾತ್ಕರಿಸಿಕೊಳ್ಳುವದಾಗಿದೆ. ಒಟ್ಟರ್ಥದಲ್ಲಿ, ಇಲ್ಲಿಯವರೆಗೂ ಅದೃಶ್ಯವಾಗಿಯೇ ಮತ್ತು ಸೂಕ್ಷ್ಮವಾಗಿಯೇ ಇದ್ದ ಮನೋಚೇತನದ ಸ್ವರೂಪವನ್ನೂ, ಪ್ರಗತಿಗೊಳ್ಳುತ್ತಿರುವ ಅಭಿಜ್ಞೆಯನ್ನು – ಯಾವುದು ಇಲ್ಲಿಯವರೆಗೂ ನಮಗೆ ಅತಿ ಚೇತನವೆಂದು ಪರಿಗಣಿತವಾಗಿತ್ತೋ, ಸುಪ್ತಪ್ರಜ್ಞೆಗೆ ಮತ್ತು ಉಪ ಭೌತಿಕಗಳಿಗೆ ದ್ಯುಮತ್–ಕಾಂತಿಯನ್ನು ರೂಪಿಸುತ್ತದೆ. ಇದು ಪ್ರಚಲಿತದಲ್ಲಿ ಮನಸ್ಸಿನಿಂದ ನಿಯಂತ್ರಿಸಲ್ಪಡುತ್ತಿರುವ ಪ್ರಾಣದ (ಜೀವದ) ಸ್ವಭಾವವನ್ನು ಬದಲಿಸಲು, ಅಳವಡಿಸಲು ಸೂಕ್ತವಾಗಿರುವ ಒಂದು ಪರ್ಯಾಯವಾಗಿದೆ. ಬಾಹ್ಯದಿಂದ ಪ್ರಭಾವಿತಗೊಳ್ಳುತ್ತಿರುವ ಅದರಲ್ಲೂ ಅರ್ಧಕ್ಕಿಂತಲೂ ಹೆಚ್ಚಿನ ಭಾಗವು ಇನೂ ಅರೆಯರಿವಿನ ಪರದೆಯಲ್ಲಿ ಇರುವ ಅಂತರ್ಮನದ ಸ್ವಭಾವವನ್ನು ಸ್ಥಾನಾಂತರಗೊಳಿಸಿ ಆಂತರಂಗಿಕವಾಗಿ ಪರಿವರ್ತಿಸಿಕೊಳ್ಳುವ ಉಪಕರಣವಾಗಿದೆ. ಬಾಹ್ಯ ಸ್ವರೂಪದ ಪ್ರಾಣಿಕ ಕ್ರಿಯೆಗಳನ್ನು ಮತ್ತು ಜೀವ–ಭಾವವನ್ನು ಅಂತರಂಗಿಕವಾಗಿ ಪರಿವರ್ತಿಸಿಕೊಳ್ಳುವದಾಗಿದೆ.

ಬಾಹ್ಯ ಪ್ರಜ್ಞೆಯ ಹಂತದಿಂದ ಸೂಕ್ಷ್ಮವಾಗಿರುವ ಆಂತರಂಗಿಕವಾದ ಭೌತಿಕ–ಪ್ರಜ್ಞೆಯ ಎಡೆಗೆ ಸ್ಪಂದಿಸುವದಾಗಿದೆ. ಅಪರೋಕ್ಷವಾದ ಮತ್ತು ಅಪ್ರಜ್ಞಾಪೂರ್ವಕವಾಗಿರುವ ಹಂತದಿಂದ ಈ ರೀತಿಯ ನೇರವಾದ ಮತ್ತು ಪ್ರಜ್ಞಾಪೂರ್ವಕವಾದ ಸ್ಥಾನಾಂತರಣವು, ಜೊತೆಗೆ ಆ ರಹಸ್ಯವಾಗಿರುವ ವೈಶ್ವಿಕ–ಶಕ್ತಿಗಳ (ಬಲಗಳ) ಕುರಿತು ಅರೆಬರೆಯ ಪ್ರಜ್ಞೆಯನ್ನು ಹೊಂದುವದರ ಬದಲು ಅವುಗಳನ್ನು ಅರಿತುಕೊಳ್ಳಲು ಅವುಗಳ ಎಡೆಗೆ ನಮ್ಮನ್ನು ನಾವೇ ಸಂಚಲನಗೊಳಿಸಿಕೊಳ್ಳುವದಾಗಿದೆ. ಮಾನಸಿಕ ಮತ್ತು ಆಧ್ಯಾತ್ಮಿಕ ಸ್ವಭಾವದಿಂದ ಆರೋಹಣಗೊಳ್ಳುವದಾಗಿದೆ. ಮನೋಶಕ್ತಿಯಿಂದ ಅಥವಾ ಮನಸ್ಸನ್ನು ಸುವಿಶಾಲಗೊಳಿಸುವ ಮೂಲಕ ಚಿತ್ತವಾಗಿಸುವ ಮೂಲಕ ಅಧಿಮಾನಸ ಶಕ್ತಿಯ ಹಂತಕ್ಕೇ, ಆ ಮೂಲಕ ಮತ್ತೂ ಮತ್ತೂ ಊರ್ಧ್ವದೆಡೆಗೆ ಆರೋಹಣಗೊಂಡು, ಅದನ್ನು ರೂಪಣೆಗೊಳ್ಳುವ ಅಸ್ತಿತ್ವದೊಡನೆ ಸಂಯೋಗಗೊಂಡ ಅಸ್ತಿತ್ವವನ್ನು ಪಡೆಯುವದಾಗಿದೆ. ಇದೆಲ್ಲವನ್ನೂ ಕೇವಲ ಫಲಿತಗೊಳಿಸಿಕೊಳ್ಳುವದಷ್ಟೇ ಅಲ್ಲದೇ ಇವೆಲ್ಲವನ್ನೂ ಈ ರೂಪಾಂತರಣವು ಸಂಪೂರ್ಣವಾಗುವ ಮುನ್ನವೇ ಸಂಯೋಜಿಸಿಕೊಳ್ಳಬೇಕಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/371**

## ಆ ಸತ್ಯದ ಎಡೆಗೆ ಪೂರ್ಣ–ಪಥ

ಯಾವ ಜ್ಞಾನದ ಮೂಲಕ ನಾವು ಯಾವುದನ್ನು ಅರಿತುಕೊಳ್ಳಬೇಕಾಗಿದೆಯೋ ಮತ್ತು ಆ ಮೂಲಕ ನಾವು ಅದೇ ಜ್ಞಾನವಾಗಬೇಕಿದಯೋ, ಅಸ್ತಿತ್ವದ ನೈಜತೆಯ ಸರ್ವಸ್ವವನ್ನೂ ಕುರಿತು "ಚಿಂತನಗಳಿಂದಲೇ ಮಾತ್ರ ಸಾಧ್ಯವೆನ್ನುವಂತಿಲ್ಲ", ಆದರೆ ಪ್ರಜ್ಞೆಯಲ್ಲಿ ಒಂದು ಪರಿವರ್ತನೆಯನ್ನು ರೂಪಿಸಿಕೊಂಡು ಅಜ್ಞಾನದಿಂದ ದೂರವಾಗಿ ಜ್ಞಾನದ ಕಡೆಗೆ ಸಾಗುವದಾಗಿದೆ. ಬಾಹ್ಯದ ಅನುಭವಗಳಿಂದಲೇ ಮುಂದೆ ಸಾಗಿ ನೇರವಾಗಿ ಮತ್ತು ಆತ್ಮಗತವಾಗಿರುವ ಅಂತರಂಗದ ಪ್ರಜ್ಞೆಯತ್ತ ಸಾಗುವದಾಗಿದೆ. ನಮ್ಮ ಅಹಂಗಳಿಂದಲೇ ಮತ್ತು ನಮ್ಮ ಭವದ ಸ್ಥಿತಿಯಿಂದಲೇ (ಶರೀರದಿಂದ) ಸೀಮಿತಗೊಂಡಿರುವ ಸ್ಥಿತಿಯನ್ನು, ನಮ್ಮ ಪ್ರಜ್ಞೆಯ ಮೂಲಕವೇ ವಿಸ್ತಾರಗೊಳಿಸಿಕೊಳ್ಳಬೇಕಾಗಿದೆ. ನಮ್ಮ ಅಂತಃಶಕ್ತಿಯಾಗಿರುವ ಇಚ್ಛೆಯಿಂದ ಮತ್ತು ಅಭೀಪ್ಸೆಯಿಂದ ಮತ್ತು ಆ ಪ್ರಕಾಶದೆಡೆಗೆ ನಮ್ಮನ್ನು ತೆರೆದುಕೊಳ್ಳುತ್ತ ಅದು

ಮನಸ್ಸಿನ ಆಚೆ ಆಚೆ ತದುತ್ತರಕ್ಕೆ ಆರೋಹಣದ ಮೂಲಕವೇ ಸಾಗುವವರೆಗೂ ಮತ್ತು ನಮ್ಮನ್ನು ಈ ಮೂಲಕ ಊರ್ಧ್ವಗೊಳಿಸುತ್ತಾ ಸಾಗುವದಾಗಿದೆ. ನಮ್ಮ 'ಸ್ವ'ತ್ವವನ್ನು ಸಮರ್ಪಿಸುವದರ ಮೂಲಕ ಮತ್ತು ನಮ್ಮನ್ನು ಇಲ್ಲಿ ಫಲಸ್ವರೂಪಿ ಫಲಿತಾಂಶವಾಗಿ ಪರಿಣಾಮಗೊಳ್ಳುವ ಮನಸ್ಸಿನ, ಜೀವದ (ಪ್ರಾಣದ) ಮತ್ತು ದೈಹಿಕ ರೂಪಾಂತರಣಕ್ಕೆ ನಾವು ಶರಣಾಗುವದರ ಮೂಲಕ, ಆ ಅತಿಮಾನಸ ದೈವತ್ವವನ್ನು ಅವತರಣಗೊಳಿಸಿಕೊಳ್ಳುವದಾಗಿದೆ. ಆದರೆ, ಇದನ್ನು ಇಲ್ಲಿ 'ಆ ಸತ್ಯ' (ನಾನು ಈಗಾಗಲೇ ತಿಳಿಸಿರುವಂತೆ, ಈ ಅತಿಮಾನಸದ ವಿಚಾರವು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದೆ. ಭಾರತದಲ್ಲಿ ಇದ್ದ ಮತ್ತು ಬೇರೆ ಪ್ರದೇಶಗಳಲ್ಲಿ ಇದ್ದ ಈ ಹಂತವನ್ನು ತಲುಪಲು ನಡೆದ ಪ್ರಯತ್ನಗಳು ಅಂದರೆ ಈ ಮೂಲಕ ಔನ್ನತ್ಯವನ್ನು ಸಾಧಿಸಲು ನಡೆದ ಪ್ರಯತ್ನಗಳು ಇವೆ. ಆದರೆ ಇಲ್ಲಿ ಕೈತಪ್ಪಿ ಹೋಗಿರುವ ಸಂಗತಿ ಎಂದರೆ ಇದನ್ನು ಜೀವನಕ್ಕಾಗಿ 'ಪೂರ್ಣ ಯೋಗ'ವಾಗಿಸುವ ಮತ್ತು ಅದನ್ನು ಈ ಸ್ವಭಾವದ ಸಂಪೂರ್ಣವಾದ, ಅದರಲ್ಲೂ ಭೌತಿಕ ಸ್ವರೂಪಕ್ಕಾದರೂ ಅನುಷ್ಠಾನಗೊಳಿಸಿಕೊಳ್ಳುವಲ್ಲಿ ಯಶಸ್ಸು ಪಡೆದುಕೊಂಡಿಲ್ಲ) ಹೀಗಾಗಿ ಈ ಅಭೀಪ್ಸಿತ ರೂಪಾಂತರಣಕ್ಕಾಗಿ ಅವತರಣಗೊಳಿಸಿಕೊಳ್ಳುವ ಯೋಗವೆಂದು ಇದನ್ನು ಕರೆಯಲಾಗುತ್ತಿದೆ ಮತ್ತು ಇದೇ 'ನಮ್ಮ ಈ ಯೋಗದ' ಗಮ್ಯವೂ ಆಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/355**

**ರೂಪಾಂತರಣದ ನಿಬಂಧನೆಗಳು**

ಆಧ್ಯಾತ್ಮಿಕ ಚೇತನಾವಸ್ಥೆಯಲ್ಲಿ ಆತ್ಮವನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳುವಲ್ಲಿ ಸ್ಥಿತಗೊಂಡಿರುವ ಓರ್ವನ ಚಿಂತನಾಶೀಲ ಮನಸ್ಸು ಸಂಪೂರ್ಣವಾಗಿ ಸ್ಥಿತಪ್ರಜ್ಞವಾಗಿರಬೇಕು ಎಂದರ್ಥವಿದೆ. ಆದರೆ ಈ ಹಂತವು ಸ್ವಭಾವದ ಉಳಿದ ಅಂಶಗಳನ್ನು ರೂಪಾಂತರಣಗೊಳಿಸುವದಿಲ್ಲ. ಆ ಊರ್ಧ್ವ ಪ್ರಜ್ಞೆಯ ವಿಶ್ವಶಕ್ತಿ ಮತ್ತು ಪ್ರಕಾಶವನ್ನು ಇಲ್ಲಿ ಕೆಳಗೆ ಅವತರಣಗೊಳಿಸಿಕೊಳ್ಳುವಲ್ಲಿ, ಈ ಚೈತ್ಯವು ತನ್ನನ್ನು ತಾನು, ಮತ್ತು, ಮನಸ್ಸಿನ ಉಳಿದ ಕೇಂದ್ರಗಳೂ, ಪ್ರಾಣಿಕ ಮತ್ತು ಭೌತಿಕ ಅಂಶಗಳೂ ಸಹಿತ ತೆರೆದುಕೊಳ್ಳಬೇಕಾಗುತ್ತದೆ. ಈ ಸ್ವಭಾವವು (ಪ್ರಕೃತಿಯು) ಚೈತ್ಯದ ಜೊತೆಯಲ್ಲಿ ಮತ್ತು ಆ ಊರ್ಧ್ವ ಪ್ರಜ್ಞೆಯ ಜೊತೆಗೆ ಸಮಸ್ಪಂದಿಯಾಗಿ ಕಾರ್ಯಪ್ರವೃತ್ತವಾಗುವಲ್ಲಿ ಸಮ್ಮತಿಪೂರ್ವಕವಾಗಿ ಮತ್ತು ಸ್ವೀಕಾರಾರ್ಹವಾಗಿದ್ದಲ್ಲಿ,

ಅಂತಿಮವಾಗಿ ಈ ಅತಿಮಾನಸದ ಎಡೆಗೆ ತೆರೆದುಕೊಳ್ಳುವದೇ ಇಲ್ಲಿರುವ ರೂಪಾಂತರಣದ ನಿಬಂಧನೆಗಳಾಗಿವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/331**

## ಪ್ರಗತಿಶೀಲ ಪರಿಶೋಧನೆ ಮತ್ತು ಗತಿಶೀಲ ನವ–ಸೃಷ್ಟಿ

ನಮ್ಮ ಆಧ್ಯಾತ್ಮಿಕ ಸ್ಥಿತಿಯ ಪ್ರಗತಿಶೀಲ ಪರಿಶೋಧನೆಯೇ ಇಲ್ಲಿ ಈ ಪೂರ್ಣ ಯೋಗದಲ್ಲಿ ಇದೆ; ಈ ಪ್ರಗತಿಯು ನಮ್ಮ ಸ್ವಭಾವದಲ್ಲಿ ಒಂದು ನೂತನವಾದ ಗತಿಶೀಲ ಸೃಷ್ಟಿಗೆ ಕಾರಣವಾಗುತ್ತದೆ. ಇದರ ಪ್ರಕ್ರಿಯೆಗಳು ತ್ರಿಗುಣಾತ್ಮಕವಾಗಿವೆ ಮತ್ತು ಇದರ ರಹಸ್ಯೋದ್ಘಾಟನೆಯೂ ಧ್ವನಿಪೂರ್ಣಗೊಳ್ಳುವದು ಇಲ್ಲಿ ಮಹತ್ವದ್ದಾಗಿದೆ.

ಪ್ರಾರಂಭದಲ್ಲಿನ ಮೊದಲ ಪರಿಶೋಧನೆಯು ಆತ್ಮವು ಹೊಂದಿರುವ ಕವಚವನ್ನು ತೆರೆಯುವದಾಗಿದೆ, ಇದು ಈ ಪರದೆಯನ್ನು ಕರಗಿಸಿ ಬಿಡುತ್ತದೆ. ಈ ಚೈತ್ಯದ ಅಸ್ತಿತ್ವವು ಹೊಂದಿರುವ ಮನಸ್ಸಿನ, ಪ್ರಾಣದ ಮತ್ತು ಶರೀರದ ಹಂತದಲ್ಲಿ ಇರುವ ಅಡೆತಡೆಯ ಗೋಡೆಗಳನ್ನು ಇಲ್ಲವಾಗಿಸುತ್ತದೆ. ಈ ನಮ್ಮ ಸ್ವಭಾವದಲ್ಲಿ ಇರುವ ದಿವ್ಯತ್ವದ ಅಂಶವು, ಅದು ತನ್ನದೇ ದೃಢತೆಯನ್ನು (ಸ್ಥಾಯಿತ್ವವನ್ನು) ಮತ್ತು ಅಮರತ್ವವನ್ನು ಒದಗಿಸುತ್ತದೆ. ಇದು ನಮ್ಮ ಉಪಕರಣಗಳು ಆಧ್ಯಾತ್ಮಿಕವಾಗಿರುವ ಪ್ರಜ್ಞೆಯಲ್ಲಿ ನಮ್ಮ ಉಪಕರಣಗಳು ಅನುಸ್ಪಂದಗೊಳ್ಳುವ ಪ್ರಾರಂಭವನ್ನು ಮಾಡುವ ಅಂಶವಾಗಿದೆ. ಈ ಮೂಲಕ ಯಾವುದೇ ಸಂದರ್ಭದಲ್ಲೂ ಅಜ್ಞಾನದ ಸ್ವಭಾವದ ಪರಿವರ್ತನೆಯು ರೂಪಾಂತರಗೊಳ್ಳುವಲ್ಲಿ ಸುದೀರ್ಘಾವಧಿಯನ್ನು ಬಯಸುವದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/369**

## ಪೂರ್ಣ ಯೋಗದ ಆದಿ ಮತ್ತು ಅಂತಿಮ ಹಂತ – ಸಮರ್ಪಣೆ

ಈ ಅಧಿಮಾನಸ ಯೋಗದ ಪ್ರಥಮ ಶಬ್ದವೆಂದರೆ 'ಸಮರ್ಪಣೆ'. ಇದರ ಅಂತಿಮ ಶಬ್ದವೂ ಸಹಿತ 'ಸಮರ್ಪಣೆ'ಯೇ ಆಗಿದೆ. ಇದು ಸ್ವಯಂ ಇಚ್ಛೆಯಿಂದ ಆತ್ಮಪೂರ್ವಕವಾಗಿ ಆ ಶಾಶ್ವತವಾಗಿರುವ ದೈವತ್ವಕ್ಕೆ ಸಮರ್ಪಣೆಯನ್ನು ಸಲ್ಲಿಸುವದಾಗಿದೆ. ಇದು ದೈವೀ–ಪ್ರಜ್ಞೆಯಲ್ಲಿ ಅಂತರ್ಗತಗೊಳಿಸುವ ಸಲುವಾಗಿ

ಊರ್ಧ್ವಗೊಳಿಸುವ ಸಲುವಾಗಿ, ಪರಿಪಕ್ವತೆಯನ್ನು ಪಡೆದುಕೊಳ್ಳುವದರ ಸಲುವಾಗಿ, ರೂಪಾಂತರಣಗೊಳ್ಳುವದರ ಸಲುವಾಗಿ, ಈ ಯೋಗವನ್ನು ಪ್ರಾರಂಭಿಸುವದರ ಸಲುವಾಗಿ ಸಲ್ಲಿಸುವ ಸಮರ್ಪಣೆಯಾಗಿದೆ. ಪರಿಣಾಮಕಾರಕವಾಗಿಯೇ ಸಂಪನ್ನಗೊಳ್ಳುವ ಸಲುವಾಗಿ ಸರ್ವಸ್ವವನ್ನೂ ಸಮರ್ಪಿಸುವದಾಗಿದೆ. ಈ ರೀತಿಯಲ್ಲಿ 'ಸ್ವತ್ವ'ವನ್ನು ಸಂಪೂರ್ಣವಾಗಿ ಸಮರ್ಪಿಸಿದ ನಂತರದಲ್ಲಿ ಅಂತಿಮ ಸ್ವರೂಪ ಪ್ರಾಪ್ತಿಯಾಗಿ ಇಲ್ಲಿ ಆಗಮಿಸುವದು 'ಈ ಯೋಗ'ವಾಗಿದೆ. ಇಲ್ಲಿ ಸರ್ವಸ್ವವೂ ಆ ಅಧಿಮಾನಸೀಯ ದೈವತ್ವದಿಂದ ಸ್ವೀಕರಿಸಲ್ಪಟ್ಟಿರುತ್ತದೆ, ಆ ಅಸ್ತಿತ್ವದ ಪರಿಪಕ್ವತೆಯಿಂದ, ಈ ಸ್ವಭಾವವನ್ನು ಆ ರೂಪಾಂತರಣಗೊಳಿಸುವದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/367 – ಶ್ರೀ ಅರವಿಂದರು**

## ರೂಪಾಂತರಣ

ಸೂಕ್ಷ್ಮಾತಿಸೂಕ್ಷ್ಮ ಕಣದಿ ನಾದಮಯ ಧಾರೆಯೆನ್ನುಸಿರು ಸತತ;
ಅದು ಭರಣಗೊಳಿಸಿ ನನ್ನ–ಮಂಡಳಿಯ ದಿವ್ಯ–ಬಲ ಮಹಿಮೆ ನಿರತ:
ಆ ಅನಂತ್ಯವನು ಪರಮನಾ–ಮಧುವು ಎಂದೀಗ ಪಾನಗೊಂಡೆ
ಕಾಲವಿದು ನನ್ನ ನಾಟಕದ–ರಂಗ ವಾ ಗರ್ಭಸ್ಥ–ಸ್ವಪ್ನ ಕಂಡೆ.
ಕಾಂತಿಮಯವೆನ್ನ ಕೋಶಗಳು ಈಗ ಹ್ಲಾದದುಜ್ವಲದ ಯುಕ್ತಿ
ಜೊತೆಗಿದೋ ನನ್ನ ರೋಮಾಂಚ ಮತ್ತೆ ಶಾಖೆಗಳ ನಾಡಿ ಶಕ್ತಿ
ಉತ್ಕರ್ಷ–ಪುಲಕದಲಿ ಮತ್ತೆ ಸೂಕ್ಷ್ಮ ಪಾರಿಭಾಸಿಕ–ಸ್ರೋತದಲ್ಲಿ
ಆಜ್ಞಾತ ಮತ್ತೆ ಪರಮದಾಂತರ್ಯ ಅಂತಃ–ಸ್ಪಂದ ವಹನದಲ್ಲಿ

ನಾನಲ್ಲವಿನ್ನು ಮಾಂಸ–ಮಜ್ಜೆಗಳ ವಶವರ್ತಿಯಿದ್ದ ಜೀವ
ದಾಸ ನಾನೋರ್ವ ಪ್ರಕೃತಿಗಿದೊ ಮತ್ತವಳ ನಿಯತ–ಶಾಸನಕೆ;
ಸಂಕುಚಿತಗೊಂಡ ಭಾವಗಳ–ಜಾಲದೊಳಗೀಗ ಸಿಲುಕದಿರುವೆ.
ನನ್ನಾತ್ಮವೀಗ ಕ್ಷಿತಿಜಗಳ ಮೀರಿ ಅಪರಿಮೇಯ ವಲಯ–ತಾಣ
ನನ್ನ ಕರಣವಿದು ಪರಮನಾ ತೋಷಕಿದು ಸಜೀವದುಪಕರಣ,
ನನ್ನ ಚಿತ್ತವಿದು ಸಾವಿರದ–ಬೆಳಗು ಸುವ್ಯಾಪ್ತ ಸೂರ್ಯ–ಕಾಂತಿ.

**(ಶ್ರೀ ಅರವಿಂದರ ಪ್ರಾರಂಭಿಕ ಕವನಗಳು 2:561)**

# ಶ್ರೀ ಅರವಿಂದರ ಕಾವ್ಯ
# "ಈಲಿಯನ್"

**– ಅನುವಾದ: ಡಾ॥ ಬಿ.ಆರ್. ಭೀಡ್, ರಾಯಚೂರು**

**ಮೊದಲ ಹೊತ್ತಿಗೆ: ಆಗಮನದ ಹೊತ್ತಿಗೆ (1/6)**

225–226. ಶಕ್ತಿ ಬೆಳೆಯುವುದು ಶಕ್ತಿಯಿಂದಲೇ, ವೈಭವ ಬೆಳೆಯುವುದು ವೈಭವದಿಂದಲೇ. ಶಕ್ತಿಯ ವೃದ್ಧಿಗೆ ಶಕ್ತಿಯೇ ಆಸರೆ. ಇವೆರಡರ ಜೊತೆಗೆ ಸೌಂದರ್ಯವೂ ಈಲಿಯನ್ ನಗರದ ಮಡಿಲಲ್ಲಿ ಮಲಗಿದೆ.

ಗ್ರೀಕರ ಸಂದೇಶ ವಾಹಕನಾಗಿ ಬಂದ ಟ್ಯಾಲ್ಥಿಬಿಯಸ್ ಆಶ್ಚರ್ಯದಿಂದಲೇ ನಗರದ ಒಳ ಪ್ರವೇಶಿಸಿದ.

226–229. ದೂರದಲ್ಲಿಂದ ದೇವತೆಗಳು ಈಲಿಯನ್ ಸಾಮ್ರಾಜ್ಯವನ್ನೂ ನೋಡುತ್ತಿದ್ದಾರೆ. ಇದುವರೆಗೆ ಎಲ್ಲ ದೇವತೆಗಳೂ ಯುದ್ಧದಲ್ಲಿ ಪರೋಕ್ಷವಾಗಿಯೋ ಅಪರೋಕ್ಷವಾಗಿಯೋ ಭಾಗವಹಿಸಿದ್ದಾರೆ. ಇದೀಗ ಮಾತ್ರ ಯುದ್ಧ ಪರಾಂಕ್ಮುಖರಾಗಿದ್ದಾರೆ; ಈಲಿಯನ್ ನಗರದ ಜನರ ಕೆಲಸ, ಕಾರ್ಯ, ಧೈರ್ಯ, ಕೆಚ್ಚು ಅವರ ಕನಸುಗಳು ಎಲ್ಲದರ ಪರಿಚಯವೂ ಅವರಿಗಿದೆ. ಅವುಗಳ ಬಗೆಗೆ ಅವರಲ್ಲಿ ಅಭಿಮಾನವೂ ಇದೆ. ಆದರೆ ಈಗ ಮಾತ್ರ Argive ಗ್ರೀಕ ವೀರರನ್ನು ನಿರ್ಲಿಪ್ತರಾಗಿ ವೀಕ್ಷಿಸುತ್ತ ನಿಂತಿದ್ದಾರೆ.

ದೇವತೆಗಳನ್ನು ಸಾಮಾನ್ಯ ಜನರಿಗೆ ಹೋಲಿಸುತ್ತ (ಶ್ರೀ ಅರವಿಂದರು) ಹೀಗೆ ಹೇಳುತ್ತಾರೆ:

ತಾವು ಅಸಹಾಯರೆನ್ನುವಂತೆ, ಮೂಕರಂತೆ ಸುಮ್ಮನೆ ಮುಂದೇನಾಗುವುದೋ ಅನ್ನುವುದನ್ನು ನೋಡುತ್ತ ನಿಂತು ಬಿಟ್ಟಿದ್ದಾರೆ. ಕಳೆದ ಗತ ಕಾಲವೇನೋ ಚೆನ್ನಾಗಿ ಪರಿಚಯವಿದೆ, ಆದರೆ ಭವಿಷ್ಯದ ಅರಿವು ತಮಗೂ ಸಹ ಇಲ್ಲವೇನೋ ಎಂಬಂತೆ ಕಣ್ಣು ಪಿಳುಕಿಸುತ್ತ ಡೀಫೋಬಸ್‌ನನ್ನು ವೀಕ್ಷಿಸುತ್ತಿದ್ದಾರೆ; ಅವನ ಸಿಟ್ಟು ದ್ವೇಷಗಳು ತಮಗೆ ಕಾಣದೇನೋ ಅನ್ನುವ ಹಾಗೆ ಸುಮ್ಮನಿದ್ದಾರೆ.

230–231. ಗ್ರೀಕ ವೀರರು ಟ್ರಾಯ್ ಪಟ್ಟಣವನ್ನು ಯಾವಾಗಿನಿಂದಲೂ ಅಚ್ಚರಿ ತುಂಬಿದ ಕಣ್ಣುಗಳಿಂದಲೇ ನೋಡಿದ್ದಾರೆ. ಬಹು ಸುಂದರವಾದ ಪಟ್ಟಣ ಅದು.

• Troya the beautiful ಇಲ್ಲಿ hyperbation ಎಂಬ figure of speech ಕಾಣಬಹುದು. ಶ್ರೀ ಅರವಿಂದರು ಸೌಂದರ್ಯವನ್ನು ಕುರಿತು ಬಹಳ ಆಳವಾಗಿ ಚಿಂತಿಸುತ್ತಾರೆ; ತಮ್ಮ ಅನೇಕ ಲೇಖನಗಳಲ್ಲಿ ಸೌಂದರ್ಯಾರಾಧನೆಯನ್ನು ಕುರಿತು ಕಾವ್ಯಾತ್ಮಕವಾಗಿ ವಿಶದವಾಗಿ ಬರೆದಿದ್ದಾರೆ. ಅವರ ಪ್ರಕಾರ ಸೌಂದರ್ಯವು ದೈವೀ ಅಂಶವೇ ಆಗಿದೆ. Beauty is his foot print showing us where he has passed ಇದು ಅವರ ಧೋರಣೆ, ಧಾರಣೆ ಕೂಡ. ಈಲಿಯಸ್ ಕಾವ್ಯದಲ್ಲಂತೂ ಅವರು ಸೌಂದರ್ಯದ ಅನೇಕ ಪದರುಗಳನ್ನು ಬಿಚ್ಚಿ ತೋರಿಸಿದ್ದಾರೆ.

232–235. ಡೀಫೋಬಸ್ ತುಂಬ ಧೈರ್ಯಶಾಲಿಯೂ ಹೌದು, ಮಹಾ ಯೋಧನೂ ಹೌದು. ಸಿಟ್ಟು ತುಂಬಿದ ಅವನ ನೋಟದಲ್ಲಿ ಟ್ರಾಯ್ ನಗರದ ವಿನಾಶದ ಸೂಚನೆ ಎದ್ದು ಕಾಣುವ ಹಾಗಿದೆ.

ಇಡೀ ಗ್ರೀಕ್ ಸೈನ್ಯವು ಅವನ ಕಣ್ಣೋಟಕ್ಕಾಗಿ ಕಾಯುತ್ತದೆ. ದ್ವೇಷ, ತುಸು ಆರಾಧನಾ ಭಾವ, ತುಸು ಹೆದರಿಕೆಯಿಂದ ಕಾಯುತ್ತದೆ.

236–239. ಈಗ ಗ್ರೀಕ ವೀರರಿಗೆ ಸಂದೇಶ ಮುಟ್ಟಿಸುವ ರೀತಿಯಲ್ಲಿ ಡೀಫೋಬಸ್ ಎತ್ತರದ ಧ್ವನಿಯಲ್ಲಿ ಮಾತನಾಡುತ್ತಾನೆ. ಅವನಿಗೂ ಟ್ರಾಯ್ ಜನರ ರಾಜ್ಯದ ಹಣೆಬರಹ ಗೊತ್ತಾಗದೆ ಏನೂ ಹೋಗಿಲ್ಲ. ಅವನ ಕಂಗಳಲ್ಲಿ ದೇವತೆಗಳ ಭವಿಷ್ಯದ ದೃಷ್ಟಿ ಕೂಡ ಸಮ್ಮಿಳಿತವಾಗಿದೆ.

"ಸಂದೇಶವನ್ನು ಹೊತ್ತು ತಂದಿರುವ ದೂತನೇ, ನೀನು ಆಶಿಯಾ Achiaia ಜನರ ಪ್ರತಿನಿಧಿ, ನಮಗೆ ಸಂದೇಶ ವಾಹಕನು. ಸಂಜೆಗಳೆದು ರಾತ್ರಿಯಾಗುವ ಸಮಯದಲ್ಲಿ ನೀನೇ ಸ್ವಯಂ ರಥ ನಡೆಸಿಕೊಂಡು ಬಂದಿರುವಿ. ನಿನ್ನ ಉದ್ದೇಶವನ್ನು ಮುಕ್ತ ಮನದಿಂದ ತಿಳಿಯಪಡಿಸು."

240–242. "ಇಂಥ ಮಧ್ಯರಾತ್ರಿಯಲ್ಲಿ ನೀನು ಬಂದಿರುವುದನ್ನು ನೋಡಿದರೆ ಏನೋ ಗಹನವಾದ, ಕೆಟ್ಟ ವಿಷಯವೇ ಇರಬೇಕು ಎಂದು ತೋರುತ್ತದೆ. ಏಕೆಂದರೆ ಇಂಥ ಮುದಿ ವಯಸ್ಸಿನಲ್ಲಿ, ಇಂಥ ನಡುಗಿಸುವ ಚಳಿಯಲ್ಲಿ ನೀನು ಬಂದಿರಬೇಕಾದರೆ ವಿಚಾರ, ಆಲೋಚನೆಗಳೇನೋ ನಿಮ್ಮದೇ ಇರಬಹುದು ಆದರೆ, ವಿಧಿ ಅಥವಾ ದೈವ ಸಂಕಲ್ಪವೇ ಅವುಗಳ ಮೂಲ

ಇದ್ದಿರಬೇಕೆನಿಸುತ್ತದೆ. ಏಕೆಂದರೆ, ಮರ್ತ್ಯರಾದ ನಮ್ಮ ಮಾತುಗಳು, ನಮ್ಮ ಕೃತಿಗಳು ಎಲ್ಲವೂ ಆ ದೈವ ಪ್ರೇರಣೆಯಿಂದಲೇ ನಡೆಯುವವು ತಾನೇ?"

243–244. "ನಾವೇನೋ ಇವೆಲ್ಲ ನಮ್ಮವೇ ಎಂದು ಭಾವಿಸುತ್ತೇವೆ: ಆದರೆ ಆಗಾಗ ದಪ್ಪನಾದ ಕಾಲದ ಪರದೆಯನ್ನು ಸರಿಸಿ ಆ ದೈವ ನಿಯಾಮಕರು ಹಣಿಕಿ ಹಾಕುತ್ತಾರೆ, ಕತ್ತಲೆಯಲ್ಲಿ ನಕ್ಷತ್ರಗಳು ತಮ್ಮ ಬೆಳಕಿನಿಂದ ಹೊಳೆದು ಕಾಣ ಬರುವಂತೆ ದೇವತೆಗಳು ತೆರೆಯಿಂದ ಕೆಲಸ ಮಾಡುವುದು ಗೊತ್ತಾಗುತ್ತದೆ.

ನಮ್ಮ ಬೆಳಕು, ನಮ್ಮ ಅರಿವು, ತಿಳುವಳಿಕೆ, ನಮ್ಮ ಸಂಕಲ್ಪ, ಬದುಕು ಎಲ್ಲವೂ ಅವರ ನಿಯಮದಂತೆಯೇ ನಡೆಯುತ್ತವೆ.

ನಮ್ಮ ಮೂಲಕ ಎಲ್ಲ ಕ್ರಿಯೆಗಳೂ ಆ ಮಹಾ ಶಕ್ತಿಯ ಸಂಕಲ್ಪವನ್ನೇ ಕಾರ್ಯಗತಗೊಳಿಸುತ್ತವೆ. ನಮ್ಮದೆನ್ನುವುದು ಏನಿದೆ? ಏನೂ ಇಲ್ಲ. ಎಲ್ಲವನ್ನೂ ರಹಸ್ಯವಾಗಿ ಅವರೇ ನಿಯಂತ್ರಿಸುತ್ತಾರೆ."

245–246 "ಇಷ್ಟು ಬೆಳಿಗ್ಗೆ ಬೆಳಿಗ್ಗೆ ನೀನು ಬಂದ ಕಾರಣವೇನು? ನಮ್ಮ ಈ ಸುಂದರವಾದ, ಸಶಕ್ತವಾದ, ಪುರಾತನ ನಗರವಾದ ಟ್ರಾಯ್ ನಗರಕ್ಕೆ ಇಷ್ಟು ಮುಂಜಾವಿನಲ್ಲಿ ಬಂದ ಕಾರಣವೇನು? ಯುದ್ಧವಂತೂ ಮುಗಿಯುತ್ತ ಬಂದಿದೆ, ನಮಗೆ ನಿಮಗೆ ಸಹಾಯಕರಾಗಿ ನಿಂತು ಯುದ್ಧ ಮಾಡುತ್ತಿದ್ದ ದೇವತೆಗಳಂತೂ ಬೇಸತ್ತು ಹಿಂದೆ ಸರಿದು ಹೋಗಿದ್ದಾರೆ. ಹೀಗಿರುವಾಗ ಇಷ್ಟು ತ್ವರಿತವಾಗಿ ನೀನು ಬಂದಿರುವ ಕಾರಣ ಏನು?"

246–247. "ಈ ಯುದ್ಧದ ಸೇನಾನಾಯಕನಾಗಿ, ಮೈಸಿನಿಯಾದ ದೊರೆಯಾಗಿರುವ ನಿಮ್ಮ ಅಗಾಮೆಮ್ನನ್ ನಮ್ಮ ಮೇಲೆ ದಯೆ ತೋರಿದ್ದಾನೆಯೋ? ಅಥವಾ ಪಂಥಾಹ್ವಾನ ನೀಡಿದ್ದಾನೆಯೋ? ಇದೇನು ಭೀಕರ ಯುದ್ಧದ ಆಹ್ವಾನವೋ challenge ಅಥವಾ ಸಂಧಿ ಪ್ರಸ್ತಾಪವೋ courtesy? ಟ್ರೋಜನರಿಗೆ ಶುಭ ಸುದ್ದಿಯೋ ವಿಕಟ ವಾರ್ತೆಯೋ? ಹೇಳು."

• challenge or courtesy, Greek to the Trojans ? ಇಲ್ಲಿ Pun ಎಂಬ figure of speech ಗುರುತಿಸಬಹುದು.

(ಸಶೇಷ)

## ಶ್ರೀ ಅರವಿಂದರ
## ‘ರೂಪಾಂತರಣ ಮತ್ತು ಅತಿಮಾನಸ ಪ್ರಜ್ಞಾ ಪಥ’

**– ಅನು: ಪುಟ್ಟು ಕುಲಕರ್ಣಿ**

ಪ್ರತಿಯೊಬ್ಬ ವ್ಯಕ್ತಿಯೂ ‘ರೂಪಾಂತರಣ’ದ ಮೂಲಕ ‘ಅತಿಮಾನವ ಹಂತ’ವನ್ನು ಪಡೆದುಕೊಳ್ಳುವ ಪಥವನ್ನು ಶ್ರೀ ಅರವಿಂದರು ತಮ್ಮ ವೈಶ್ವಿಕ ಅಭಿವ್ಯಕ್ತಿಗಳಾಗಿರುವ ‘ಸಾವಿತ್ರಿ’ ಮತ್ತು ‘ದಿವ್ಯ ಜೀವನ’ದಲ್ಲಿ ವಿವರ ವಿವರವಾಗಿ ಒದಗಿಸಿದ್ದಾರೆ. ‘ಪೂರ್ಣ ಯೋಗದ’ದ ಮೂಲಕವಾಗಿಯೇ ಇದನ್ನು ಸಿದ್ಧಿಸಿಕೊಳ್ಳುವಲ್ಲಿ ಆ ಗತಿಯಲ್ಲಿ ಲಭ್ಯವಾಗುವ ಎಲ್ಲ ಆಯಾಮಗಳ ಕುರಿತೂ ವಿವರಿಸಿದ್ದಾರೆ.

ಆಧಾರಭೂತವಾಗಿರುವ ಈ ಬ್ರಹ್ಮ–ಬ್ರಹ್ಮಾಂಡದ ಗರ್ಭದಾಳದಲ್ಲಿ ಶಾಶ್ವತದ ಅಗ್ನಿಕುಂಡ(ಸಾವಿರದ ಅಗ್ನಿಕುಂಡ)ವನ್ನು ಅವಳು ಎರಕ ಹೊಯ್ಯುವ ಮೂಲಕ ಲೋಕ–ಲೋಕಗಳನ್ನು ಸತತವಾಗಿಯೇ ರೂಪಿಸುತ್ತಾಳೆ. ತಮದ ಮಧ್ಯದಲ್ಲಿಯೇ ಹೂತು ಹೋಗಿದ್ದ ತನ್ನದೆ ನೈಜ–ವಾಸ್ತವಕ್ಕೆ ಅವಳು ಮತ್ತೆ ಅದನ್ನು ಸುಸಂಗತಗೊಳಿಸಲೆಂದೇ ಊರ್ಧ್ವದಿಂದ ಅವತರಣಗೊಳ್ಳುತ್ತಾಳೆ. ವಿಸ್ಮರಣೆಗೆ ಸಿಲುಕಿದ್ದ ‘ಸ್ವಾತ್ಮ’ವನ್ನು ಮತ್ತೆ ಸಾಮರ್ಥ್ಯಪೂರ್ಣ ನ್ಯಾಯದಿಂದ (ನಿಯತಿಯಿಂದ), ಮರುಕಳಿಸಿಕೊಂಡಂತೆ ರೂಪಿಸುತ್ತಾಳೆ. ಈ ರೀತಿಯಲ್ಲಿ ಅವತರಣದಲ್ಲಿ ಬರುವದು ಮರ್ತ್ಯಮಾನವನ ವಕ್ಷಸ್ಥಳಕ್ಕೆ ಎನ್ನುವದು ಮುಖ್ಯ ವಿಷಯ. ಈ ಮೂಲಕ ಮಾನವನ ಹೃದಯವು ಪರಿಶುದ್ಧಗೊಂಡಾಗ, ಅಲ್ಲಿ ಮಾನವನು **‘ರೂಪಾಂತರಣ’ದ ಮೂಲಕ ‘ಅತಿಮಾನವ’ನ** ಆಯಾಮವನ್ನು ಪಡೆದುಕೊಳ್ಳಬಲ್ಲ. ಈ ಆಯಾಮದ ಕುರಿತು ಈಗ ಪ್ರಚಲಿತವಿರುವ ಯೋಗ ಶಾಸ್ತ್ರದಲ್ಲೂ ಹಲವಾರು ಪಥ್ಯಗಳಿವೆ. ಇದನ್ನು ಶಾಂಭವ ವಿಶಿಷ್ಟದದ್ವೈತದೊಳಗೆ ಶಾಂಭವಿಯ ‘ಚಿದಚಿದ್ ವಿಕಾರ’ ಎಂದು ಭಾಷ್ಯಗಳಿವೆ. ಆದರೆ ಇದು ಅತ್ಯಂತ ಗೂಢ ಮತ್ತು ಗುಹ್ಯವೂ ಅಗಿದೆ. ಅದನ್ನು ಅರಿತುಕೊಳ್ಳಲು ಸಾಧನಾ ಪಥದಲ್ಲಿ ಅವಿರತ ಪ್ರಯತ್ನವಿರಬೇಕಾಗುತ್ತದೆ. ಇದನ್ನು ಆಧುನಿಕ ವಿಜ್ಞಾನದಲ್ಲಿಯೂ **(ಕ್ವಾಂಟಮ್ ಸಿದ್ಧಾಂತ ಮತ್ತು ನ್ಯಾನೋ ಸಿದ್ಧಾಂತದಲ್ಲಿ)** ಕಾಣಬಹುದಾಗಿದೆ. ಪರಮಾಣುವಿನ ಸಂರಚನೆಯು ಸಹಿತ ಬ್ರಹ್ಮಾಂಡದ ಸಂರಚನೆಯ ಸಮಸಮವಾಗಿಯೇ ಇರುತ್ತದೆ ಎನ್ನುವದನ್ನು ಸ್ಥಿರೀಕರಿಸಲಾಗಿದೆ.

ಹಾಗಾದರೆ ಇಲ್ಲಿ 'ಮರ್ತ್ಯಮಾನವನ ನಶ್ವರದ ವಕ್ಷಸ್ಥಳಕಿಳಿದು ಬಂದ ದೇವಿಯು ಈ ಪೂರ್ಣ ಯೋಗದ ಫಲಿತಕ್ಕಾಗಿ ಗಗನ–ಮಂಡಲವ ನಿಗಮ ಯೋಗದಲಿ ಸಂಯೋಗಗೊಳಿಸುತ್ತಾಳೆ, ಅವನ ಪ್ರತಿ ಬೆಳಗುಗಳಿಗೆ ಅವಳೀಗ ತನ್ನನ್ನೇ ತುಂತುಂಬಿಕೊಳ್ಳುತ್ತ ಇಂಬುಗೊಳ್ಳುತ್ತಾಳೆ. ಅದೂ ಸದಾ ಅಸ್ಥಿರತೆಯಲ್ಲಿಯೇ ಇರುವ ರೂಹುಗಳಲ್ಲಿಯೇ ಅವಳು ತನ್ನ ಜನ್ಮ ತಾಣ ತಾಳುತ್ತಾಳೆ. ಅದಕ್ಕಾಗಿಯೇ ಇಲ್ಲಿಗೆ ನಮಿತಗೊಂಡು ಅವತರಣಗೊಂಡು ಆಗಮಿಸುತ್ತಾಳೆ. ಇಲ್ಲಿರುವ ಜಡದ ಗರ್ಭದಲ್ಲಿ ಅಮೃತತ್ವವನ್ನು ಎರಕ ಹೊಯ್ದು, ಈ ಸುವಿಶಾಲವಾಗಿರುವ, ಸುವ್ಯಾಪ್ತವಾಗಿರುವ ಆದರೆ ಅನುಭೂತಿಯನ್ನು ಇನ್ನೂ ಹೊಂದಿರದ ಅವಕಾಶದಲ್ಲಿ ಸಾಕರಗೊಳ್ಳುತ್ತಾಳೆ. ಇದರ ಸ್ವರೂಪವು ಭರವಸೆಯನ್ನು ತರುವ ಜಾಗರದ ಜ್ಯೋತಿಯಂತೆ ಇರುತ್ತದೆ, ಜೊತೆಗೆ ಚಿಂತನದ ವಿಕಾಸಕ್ಕೂ ಮಾರ್ಗದರ್ಶನ ಮಾಡುತ್ತದೆ. ಹೀಗಾಗಿ ಇಲ್ಲಿ ರೂಪಿತಗೊಂಡಿರುವ ಲೋಕ–ಪಿಂಡಗಳೂ ಸಹಿತ, ಆ ಬ್ರಹ್ಮ–ಬ್ರಹ್ಮಾಂಡ ಗರ್ಭದಾಳದಲ್ಲಿರುವ ಸಾವಿರದ ಅಗ್ನಿಕುಂಡದ ಧಾರೆಯಿಂದಲೇ ಎರಕ ಹೊಯ್ಯಲ್ಪಟ್ಟಿರುತ್ತವೆ.

ಈ ರೀತಿಯಲ್ಲಿ ಸೃಷ್ಟಿಗೊಂಡಿರುವ ಜೀವ–ದೇಹಗಳ, ಪ್ರಾಣನಾಡಿಗಳನ್ನು ನಿತ್ಯವೂ ಕಣಕಣದಿ ಕುಣಿಸುತ್ತ, ಅಂತರಂಗದಲ್ಲಿ ಮಾತ್ರ ಆ ರಮಣೀಯವಾಗಿರುವ ಸತ್ಯವನ್ನು ಅಭಿಭೂತಗೊಳಿಸಿಕೊಂಡೇ ಇರುತ್ತಾಳೆ, ಜೊತೆಜೊತೆಗೆ ಪರಮ ತೋಷವನ್ನೂ ಸಹಿತ ಅದರೊಡನೆ ಸಂಯೋಗಗೊಳಿಸಿರುತ್ತಾಳೆ. ಈ ಮೂಲಕ ಜ್ಞಾನದ ಕುರಿತು ಆಸಕ್ತಿಯನ್ನೇ ಹೊಂದಿರದ ರೂಹಗಳಿಗೆ, ಜ್ಞಾನವನ್ನು ಪಡೆದುಕೊಳ್ಳಲು 'ಪ್ರಕಾಶದ ಸ್ವರೂಪ'ವಾಗುತ್ತಾಳೆ.

ಈ ಆಧಾರದಲ್ಲಿ 'ಪೂರ್ಣ ಯೋಗದ' ಪಥದಲ್ಲಿ ಸಾಗಲು ಮತ್ತು ರೂಪಾಂತರಣವನ್ನು ಪಡೆದುಕೊಳ್ಳಲು, ಅಪಾರ ಪ್ರಮಾಣದ ಕಾರ್ಯವನ್ನು ನಮ್ಮಲ್ಲಿ ನಾವೇ ಕೈಕೊಳ್ಳುವದರ ಅವಶ್ಯಕತೆ ಇದೆ. ನಮ್ಮ ಸಂಪೂರ್ಣ 'ಮಾನವ ಸ್ವಭಾವ'ವನ್ನು 'ದೇವ ಸ್ವಭಾವ'ವನ್ನಾಗಿಸಿ ಪರಿವರ್ತಿಸಿಕೊಳ್ಳಬೇಕಾಗಿದೆ. ಶತಶತಮಾನಗಳ ಕಾಲದಿಂದಲೂ ಘಟಿಸುತ್ತ ಬಂದಿರುವ ವಿಕಸನವನ್ನು, ಇದೀಗ ಕೆಲವೇ ಕೆಲವು ವರ್ಷಗಳಲಿ ಕಾಣಲೇಬೇಕಾಗಿದೆ. ಯಾವ ಕಾರಣಕ್ಕೂ ಸಮಯವನ್ನು (ಕಾಲವನ್ನು) ದೂಷಿಸುವಂತಿಲ್ಲ. ಅದರೆ ಮೇಲೆ ದ್ವೇಷವನ್ನು ಸಾಧಿಸುವಂತಿಲ್ಲ. ಶೀಘ್ರದಲ್ಲಿಯೇ ಫಲಿತಾಂಶಗಳನ್ನು ನೀಡುವ ಹಲವು ಪಥಗಳು ಮುಕ್ತವಾಗಿಯೇ ಇವೆ. ಅಥವಾ, ಯಾವುದೇ ಕಾರಣಕ್ಕೂ ಒಂದು ನಿಗದಿಪಡಿಸಲ್ಪಟ್ಟ

'ನಿರ್ದಿಷ್ಟವಾದ ಕ್ರಿಯೆ'ಯಿಂದಾಗಿ, ಸ್ವಾರ್ಥದಲ್ಲಿ (ನಮ್ಮ ಸಲುವಾಗಿ ಮಾತ್ರ) ಕಾರ್ಯ ಮಾಡಿಕೊಳ್ಳುವದನ್ನು ಮೊದಲು ತ್ಯಜಿಸುವ ಮೂಲಕ, ಅದಕ್ಕಾಗಿ ಪ್ರಪ್ರಥಮವಾಗಿ 'ಅಹಂಕಾರ'ವನ್ನು ತ್ಯಜಿಸಬೇಕಾಗಿದೆ. ಅಂದರೆ 'ನಾನು' ಏನನ್ನೋ ಮಾಡುತ್ತಿದ್ದೇನೆ ಎನ್ನುವ 'ಅಹಂಭಾವ'ವನ್ನು ತ್ಯಜಿಸಬೇಕಾಗಿದೆ. ಮತ್ತೂ ಹೆಚ್ಚಿನ ಸಂಖ್ಯೆಯ 'ಪ್ರಾಣಾಯಾಮಗಳು', ಮತ್ತೂ ಅಧಿಕ "ಆಸನಗಳು", ಮತ್ತೆ ಮತ್ತೂ ದೀರ್ಘವಾದ 'ಅನುಷ್ಠಾನ', 'ಜಪ'ಗಳನ್ನು ಹತ್ತು ಹಲವು ಬಾರಿ ಪುನರಾವರ್ತನಗೊಳಿಸುತ್ತಿದ್ದರೂ. ಇವೆಲ್ಲವನ್ನು ಮಾಡಿದ್ದರೂ, ಅದರಿಂದ ಆಗ ಅಷ್ಟೇ ಪ್ರಮಾಣದ ಪ್ರಗತಿಯೂ ಗುರುತಿಸಲ್ಪಡುವದು.

ಆದರೆ ಇಲ್ಲಿ ಒಂದು ಪಥವನ್ನು ಆಯ್ಕೆ ಮಾಡಿಕೊಂಡಿದ್ದೇ ಆದಲ್ಲಿ, ಅದಕ್ಕೇ ಅಂಟಿಕೊಂಡಿರಬೇಕು. ಏಕೆಂದರೆ ಅವೆಲ್ಲವೂ ಮಾನವ ನಿರ್ಮಿತವಾದ ಸಹಜವಾದ ವಿನ್ಯಾಸಗಳಾಗಿವೆಯೇ ವಿನಾ ಆ ಅನಂತಾನಂತ ಶಕ್ತಿಯ ಕಾರ್ಯಗಳಂತೂ ಅಲ್ಲವೇ ಅಲ್ಲ. ಏಕೆಂದರೆ ಅದು ಅತ್ಯಂತ ನಿಧಾನ ಗತಿಯಲ್ಲಿ ಚಲಿಸುತ್ತದೆ; ಪ್ರಶಾಂತವಾಗಿ ಚಲಿಸುತ್ತದೆ; ಕೆಲವೊಮ್ಮೊಮ್ಮೆ ಅದರ ಗುರಿಯೆಡೆಗೆ ಅಗ್ರಾಹ್ಯವಾಗಿಯೇ ಚಲಿಸುತ್ತದೆ. ಇಲ್ಲಿಯೇ ಮುಂದುವರೆಯುತ್ತದೆ. ಕೆಲವೊಮ್ಮೆ ವಿಶ್ರಮಿಸಿದಂತೆ ಕಂಡುಬಂದರೂ, ಮುಂದಿನ ಚಣದಲ್ಲಿಯೇ ಸಾಮರ್ಥ್ಯ–ಪೂರ್ಣತೆಯಿಂದ ಮತ್ತೂ ವಿಜಯಸೂಚಕ ಭಾವದಲ್ಲಿಯೇ ಅಲ್ಲಿ ಕೈಕೊಂಡ ವಿಷಯವನ್ನು ಭವ್ಯಗೊಳಿಸುತ್ತದೆ, ವೈಭವಪೂರ್ಣಗೊಳಿಸುತ್ತದೆ. ಇದನ್ನು 'ರೂಪಾಂತರಣದ ಹಂತ'ದಲ್ಲಿ ಗಮನಿಸಲೇಬೇಕಾಗಿದೆ. ಆದರೆ ಈ ನಿಧಾನ ಗತಿಯನ್ನು ಬಯಸದ ಮಾನವನು ಇಲ್ಲಿ, ಶೀಘ್ರ ಫಲಿತಾಂಶಕ್ಕಾಗಿ, ಕೃತಕ ಬುದ್ಧಿವಂತಿಕೆಯಿಂದ ಕಟೆಯಲ್ಪಟ್ಟ ಕೃತಕ ಪಥಗಳಂತೆ, ಅವನು ರಚಿಸಿಕೊಂಡಿರುವ ಕಿರು ಕಾಲುವೆಗಳಿರುತ್ತವೆ. ಅಲ್ಲಿ ಸುಲಭವಾಗಿಯೇ ಪ್ರಯಾಣಿಸಬಹುದು, ಸುರಕ್ಷಿತವೂ ಆಗಿರಬಹುದು, ಖಚಿತತೆಯೂ ಇರಬಹುದು, ಆದರೆ ಅದು 'ಒಂದು ನಿಗದಿತ ಸ್ಥಳದಿಂದ ಮತ್ತೊಂದು ನಿಗದಿತವಾದ ಸ್ಥಳಕ್ಕೇ' ಮಾತ್ರ ಕರೆದೊಯ್ಯುತ್ತದೆ.

ಆದರೆ "ಈ **ರೂಪಾಂತರಣದ ಮತ್ತು ಪೂರ್ಣ ಯೋಗದ ಪಥ**"ವಾದರೊ ಅತ್ಯಂತ ವಿಶಾಲವಾದ ಹಾಗೂ ದಾರಿಯ ಗುರುತೂ ಇರದ ಮಹಾಸಾಗರ (ಅರ್ಣವ)ವಾಗಿದ್ದು, ಆಗ ನೀವು ಅಲ್ಲಿ ವಿಶ್ವದ ಯಾವುದೇ ಭಾಗಕ್ಕಾದರೂ ಚಲಿಸಬಹುದು. ಜೊತೆಗೆ ಅನಂತತೆಯ ಸ್ವಾತಂತ್ರ್ಯದಲ್ಲಿ ನೀವು ಅಲ್ಲಿ ಚಲಿಸಲು

ಸಮರ್ಥರಾಗಿರುತ್ತೀರಿ. ಈಗ ಇಲ್ಲಿ ಬೇಕಾಗಿರುವದು ಒಂದು ಹಡಗು ಮಾತ್ರ. ಜೊತೆಗೊಂದು ಚಾಲನಾಚಕ್ರ ಹಾಗೂ ಒಂದು ದಿಕ್ಸೂಚಿ. ಇವುಗಳ ಜೊತೆಗೆ ಪ್ರೇರಣಾಶಕ್ತಿ ಹಾಗೂ ಕೌಶಲ್ಯದಿಂದ ಕೂಡಿದ ಕಪ್ತಾನನೊಬ್ಬನ ಅವಶ್ಯಕತೆಯೂ ಇದೆ. ಇದಕ್ಕಾಗಿ 'ಬ್ರಹ್ಮವಿದ್ಯೆಯೇ ನಿಮ್ಮ ಹಡಗು; ವಿಶ್ವಾಸವೇ ನಿಮ್ಮ ಚಾಲನಾಚಕ್ರ; ಸ್ವಯಂ–ಸಮರ್ಪಣೆಯೇ ನಿಮ್ಮ ದಿಕ್ಸೂಚಿ; ಇನ್ನು ಪ್ರೇರಕ ಶಕ್ತಿಯಾಗಿ ಆ ದೇವಿ ಅದನ್ನು ಒದಗಿಸುತ್ತಾಳೆ, ನಿರ್ದೇಶಿಸುತ್ತಾಳೆ. ದೇವನ ಆಜ್ಞೆಯ ಮೇರೆಗೆ ಲೋಕಗಳನ್ನು ಲಯಬದ್ಧಗೊಳಿಸುತ್ತಾಳೆ. ಹೀಗಾಗಿ ದೇವರೇ ನಿಮ್ಮ ಕಪ್ತಾನ–ನಾಗಿದ್ದಾನೆ. ಆದರೆ ಅವನು ತನ್ನದೇ ಆದ ವಿಧಾನದ ಪಥದಲ್ಲಿ ಇರುವದರಿಂದ, ಮತ್ತು ಪ್ರತಿಯೊಂದಕ್ಕೂ ಅವನದೇ ಸಮಯವೂ ನಿಗದಿಯಾಗಿರುವದರಿಂದ, ಅವನು ಅದೇ ರೀತಿಯಲ್ಲಿಯೇ ಕಾರ್ಯಪ್ರವೃತ್ತನಾಗಿದ್ದಾನೆ. ಹೀಗಾಗಿ ಅವನ ದಾರಿಯನ್ನೇ ಕಾಯುತ್ತಿರಬೇಕಾಗುತ್ತದೆ; ಅವನು ಆಗಮಿಸಲಿರುವ ಸಮಯದ ಸಲುವಾಗಿ ಕಾತರದಿಂದ ಕಾಯುತ್ತ ಇರಬೇಕಾಗುತ್ತದೆ.

ಶ್ರೀ ಅರವಿಂದರು ಈ ವೈಶ್ವಿಕ ಆಯಾಮ ಮತ್ತು ಇದು ಆಧುನಿಕವಾಗಿ ವೈಜ್ಞಾನಿಕ ಸಂಶೋಧನೆಯೂ ಆಗಿದೆ ಎನ್ನುವದನ್ನು ಇಲ್ಲಿ ಉಲ್ಲೇಖಿಸುತ್ತಾರೆ. **'ದಿವ್ಯ ಜೀವನ'**ದಲ್ಲಿ **'ವಿಜ್ಞಾನ ಘನಸತ್ತೆ'**ಯನ್ನು ಮಾನವನು ಪ್ರಾಪ್ತ ಮಾಡಿಕೊಳ್ಳುವದನ್ನು ವಿವರಿಸುತ್ತ, ರೂಪಾಂತರಣದ ಎಲ್ಲ ಆಯಾಮಗಳನ್ನು ವಿಷದಗೊಳಿಸುತ್ತಾರೆ. 'ಈ ಎಲ್ಲ ಚೇತನಗಳಿಗೆ ಅನ್ವಯಗೊಳ್ಳುವ ಚಿಜ್ಜ್ಯೋತಿ–ಪ್ರಜ್ಞಾನಘನದ ವ್ಯಾಖ್ಯಾನಕ್ಕೆ ಇದು ಶುದ್ಧ ಸನ್ಮಾತ್ರದ ಋತವನ್ನು ಆಧರಿಸಿದೆಯೇ ವಿನಾ ಅಜ್ಞಾನವನ್ನಾಗಲೀ ಅಥವಾ ನಿರ್ಜ್ಞಾನವನ್ನಾಗಲಿ (ಅವಿದ್ಯೆ) ಆಧರಿಸಿರುವದಿಲ್ಲ. ಎಲ್ಲ ಜೀವನವೂ ಮತ್ತು ಬದುಕಿನ ಎಲ್ಲ ಜೀವಿಗಳೂ ಸಹಿತ ಮನೋಭೂಮಿಕೆಯಲ್ಲಿ ಇರುವ ಅಜ್ಞಾನದ ವ್ಯಾಪ್ತಿಯನ್ನು ಮೀರಿ, ಉದಿತಗೊಳ್ಳಲು ಸದಾ ಸಿದ್ಧರಾಗಿರುತ್ತಾರೆ, ಆದರೆ ಬಹುತೇಕವಾಗಿ ಇವರೆಲ್ಲ ಉನ್ಮನೀ ಮನೋಭಾವದ ಹಂತಕ್ಕೇರಲು ಸಿದ್ಧರಿರುವದಿಲ್ಲ. ಈ **ರೂಪಾಂತರಣದ ಆಯಾಮ**ವು ತನ್ನದೇ ಆದ ಸುಸಂಬದ್ಧವಾದ ಕ್ರಮಾಂಕದಲ್ಲಿರುವ ವ್ಯವಸ್ಥೆಯ ಸೋಪಾನದಂತೆ ಇರುತ್ತದೆ. ಇಲ್ಲವೇ ಇವೆಲ್ಲವುಗಳ ಸುರಕ್ಷಾ ಭರವಸೆಯಾಗಿರುವ – ಅದರದೇ ಆಧಾರವಾಗಿರುವ – ಪರಸ್ಪರ ಪ್ರಸವಿಸುವ ಹಂತಗಳ ಮಾನಕದೊಂದಿಗೆ, ಜೊತೆಗೆ ಅಂತರ್–ವ್ಯವಹರಣದ ಪ್ರಕ್ರಿಯೆಯ ಹಂತಗಳಾದ ಸ್ವಯಂ–ರೂಪಾಯಣದ ಗತಿಗಳು, ಪರಮಾತಿಪರಮ ತತ್ತ್ವದ ಎಡೆಗೆ ಸಾಗಲು, ಅಸ್ತಿತ್ವದಲ್ಲಿ ಇರುವ ದೈವ

ಭಾವದ ಸಾಕ್ಷಾತ್ಕಾರದೊಂದಿಗೆ ಅಭಿವ್ಯಕ್ತಗೊಳ್ಳುತ್ತವೆ. ಆದರೂ, ಈ ಹಂತದಲ್ಲಿ, ಈ ರೂಪಾಂತರಣದ ಪ್ರಯತ್ನವು, ಈ ಮುಕ್ತತೆಯನ್ನು (ಸ್ವತಂತ್ರವನ್ನು) ಹೊಂದಿದ ಮತ್ತು ಇದೀಗ ಸಾರ್ವಭೌಮವಾಗಿರುವ ಉನ್ಮನೀ ಮನೋಜ್ಯೋತಿ ಮತ್ತು ಪ್ರಕೃತಿಯ ಮೇಲೆ ಇರುವ ಬಲವು, ಈ ಸಮಗ್ರ ವಿಕಾಸದ ಹಂತದಲ್ಲಿ ಅದರದೇ ಆದ ಹಂತದ ಸಂದರ್ಭಗಳನ್ನು ಅನುಭವಿಸಬೇಕಾಗುತ್ತದೆ. ಏಕೆಂದರೆ ಒಂದು ದೃಷ್ಟಾಂತದಂತೆ, ಇಲ್ಲಿ ಒಂದು ನಿರ್ಣಾಯಕವಾದ ಗುರುತ್ವವೊಂದು ಈ ವಿಕಾಸದ ಕೆಳಸ್ತರದಲ್ಲಿರುವ ಜೀವನದ ಘಟನೆಗಳನ್ನು ಪ್ರಭಾವಿಸುತ್ತದೆ. ಇವುಗಳಲ್ಲಿ ಕೆಲವು ಪ್ರಕಾಶಮಾನ ಹಂತದಲ್ಲಿ, ಕೆಲವೊಂದು ಬಲದ ಹಂತದಲ್ಲಿನ ಘಟನೆಯಾಗಿ ಅವತರಣಮುಖಿಯಾಗಿ ಭೇದಿಸಿಕೊಂಡು (ವಿವೇಚನಾಯುಕ್ತವಾಗಿ, ಭೇದಕ ದೃಷ್ಟಿಯಿಂದ) ಪ್ರವೇಶಿಸುತ್ತವೆ. ಮತ್ತೆ ಪ್ರಕೃತಿಯಲ್ಲಿ ಗುಹ್ಯವಾಗಿರುವ ಋತದ ಶಕ್ತಿಯ ಬೃಹತ್ತರವಾದ ಕರ್ಮವೊಂದಕ್ಕೆ ನಾಂದಿಯಾಗುತ್ತದೆ. ಆಗ ಅಜ್ಞಾನದ ಜೀವನದ ಮೇಲೆ ಒಂದು ವಿಶೇಷಾಧಿಕಾರವುಳ್ಳ (ಪ್ರಭುತ್ವವುಳ್ಳ) ಸೌಷಮ್ಯದ ತತ್ತ್ವವೊಂದು ಹೇರಲ್ಪಡುತ್ತದೆ. ಇಲ್ಲಿ ವೈಷಮ್ಯ, ಅಂಧಾನುಕರಣೆಯ ಆನ್ವೇಷಣೆ, ವೈರುಧ್ಯದ ಹೋರಾಟಗಳು, ಅತಿಶಯೋಕ್ತಿಯ ವಿಪರೀತ ಭಾವದ ವಿಪರ್ಯಯಗಳು ಮತ್ತು ವಿಷಣ್ಣತೆ ಹಾಗೂ ಅದೃಶ್ಯದಲ್ಲಿಯೇ ಇರುವ ಬಲಗಳ ಕ್ರಿಯೆಗಳಲ್ಲಿನ ಅಸಮತೋಲನಗಳು, ಅದರಲ್ಲೂ, ಅವುಗಳು ಒಂದನ್ನೊಂದು ಸಮ್ಮಿಲನಗೊಳ್ಳುತ್ತಿರುವಲ್ಲಿ ಅಥವಾ ಸಂಘರ್ಷಿಸುತ್ತಿರುವಂತಹ ಎಲ್ಲ ಘಟನೆಗಳೂ, ಇಲ್ಲಿ ನೇರವಾಗಿ ಪ್ರಭಾವಿಸುತ್ತವೆ. ಇದರ ಮೂಲಕವೆ, ಜೊತೆಗೆ ಒಂದು ಆತ್ಮದ ಅರಿವು ಮತ್ತು ಅದರ ವಿಕಸನಕ್ಕೆ ನಿಗದಿತ ಸ್ಥಾನವನ್ನು, ಸುಸಂಬದ್ಧ ರೂಪದೊಂದಿಗೆ ಹಾಗೂ ಸೌಷಮ್ಯದ ಸ್ಪಂದನದೊಂದಿಗೆ ಪಡೆದುಕೊಳ್ಳುತ್ತದೆ. ಇದರಿಂದಾಗಿ, ಸದಾ ಪ್ರವೃದ್ಧಮಾನ–ವಾಗುತ್ತಿರುವ ಜೀವನ ಮತ್ತು ಚೇತನದ ಒಂದು ಪರಿಷ್ಕರಿತ ಆವಿಷ್ಕಾರದ ಸುಸಂಗತ ಆಕಾರದೊಂದಿಗೆ, ಜೀವನ ಶೈಲಿಯು ನಿರ್ಮಿತಗೊಳ್ಳುತ್ತದೆ. ಇದು ರೂಪಾಂತರಣದ ಪ್ರಗತಿಯಲ್ಲಿ ಅತ್ಯಂತ ಮುಖ್ಯವಾದ ಘಟಕವಾಗಿದೆ.

ಇಲ್ಲಿ ಅವತರಣಗೊಂಡು ಬರುವ ಕೃಪೆ ಮತ್ತು ಆರೋಹಗೊಳ್ಳುವ ಅಭೀಪ್ಸೆಯ ಸತತ ಪ್ರಯತ್ನಗಳ ಎಲ್ಲ ಪ್ರಕ್ರಿಯೆಯ ಮೂಲಕವೇ, ಊರ್ಧ್ವ–ದೆಡೆಯಿಂದ ಬರುವ ಉನ್ಮನೀ ಮನೋಭಾವದ ಅಂತರ್ಝರಿಯಲ್ಲಾಗಲೀ, ಸ್ವಭಾವದಲ್ಲಿ ಪರಿವರ್ತನಗೊಳ್ಳುವ ವೈಜ್ಞಾನಿಕ–ತತ್ತ್ವದ ಅವತರಣದಲ್ಲಾಗಲೀ, ಮತ್ತು ಪಾತಾಳದ ಕೆಳಸ್ತರದಲ್ಲಿ ಮೈದೋರುವ ಗುಹ್ಯಾತಿಗುಹ್ಯ ಉನ್ಮನೀ ಮನೋಭಾವದ

ಬಲವಾಗಲೀ ಈ ಎಲ್ಲ ವಿಷಯಗಳಲ್ಲೂ ಸಹಿತ ತಾದಾತ್ಮ್ಯವನ್ನು ಹೊಂದಿರುವದು. ಇವುಗಳ ಮಧ್ಯದಲ್ಲಿಯೇ ಈ ಅಂತರ್ಝರಿ ಮತ್ತು ಪರದೆಯೂ ಸಹಿತ ತೆರೆಯಲ್ಪಡುವದರ ಮೂಲಕ ಪ್ರಕೃತಿಯಲ್ಲಿ ಉಳಿದಿರಬಹುದಾದ ಅಜ್ಞಾನವನ್ನು ನಿವಾರಿಸುತ್ತದೆ. ಅಚೇತನತ್ವದ ನಿಯಮವು (ಶಾಸನವು) ಕಣ್ಮರೆಯಾಗುವದು. ಈ ಅಚೇತನವೂ ತನ್ನಲ್ಲಿಯೇ ಅಡಗಿರುವ ಆ ಗುಹ್ಯ(ಪರಮ ರಹಸ್ಯ)ವಾಗಿರುವ ಬೃಹತ್–ಚೇತನದ ಹೊರಹೊಮ್ಮುವಿಕೆಯಿಂದ, ಅಂತರಾತ್ಮದಲ್ಲಿರುವ ಚಿಜ್ಜ್ಯೋತಿಯಿಂದ, ಯಾವುದು ಶಾಶ್ವತ ಸತ್ಯವಾಗಿದೆಯೋ ಆ ನೆಲೆಯಿಂದ, ಆ ಮಹತ್–ಭಾವದ ಅಚೇತನದ ಆರ್ಣವದಿಂದ (ಅವಕಾಶದಲ್ಲಿರುವ ಸಮುದ್ರ) ಬದಲಾವಣೆ ಹೊಂದುವದು. ವೈಜ್ಞಾನಿಕ–ಚೈತನ್ಯ ಮತ್ತು ಸ್ವಭಾವವು ಇಲ್ಲಿ ದಿವ್ಯವಾಗಿ ರೂಪುಗೊಳ್ಳುತ್ತದೆ. ಇದೇ ಪ್ರಪ್ರಥಮ ದೃಷ್ಟಾರ್ಥವಾಗಿರುತ್ತದೆ.

ಆದರೆ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ, ಈ ಉನ್ಮನೀ ಮನೋಭಾವದ ತತ್ತ್ವದ, ಪ್ರಕೃತಿಯ, ಪೃಥ್ವಿಯ ಮೇಲೆ, ಕೇವಲ ಜೀವಿಗಳ ಸೃಷ್ಟಿ ಮತ್ತು ವಿಕಾಸದ ಏಕೈಕ ಫಲಿತಾಂಶ ಇದಾಗಿರುವದಿಲ್ಲ. ಇದು ತನ್ನ ಜೊತೆಗೇ, ಅದರೆಡೆಗೆ ಸಾಗುವ ಹೆಜ್ಜೆಗಳ ನಿಷ್ಪತ್ತಿಯನ್ನೂ ಸಹಿತ ಒಳಗೊಂಡಿರುತ್ತದೆ. ಅದಕ್ಕಾಗಿ ಇದು, ಅಧಿಮಾನಸದ ಐಹಿಕ ಜನ್ಮದ ಸ್ವಾಯತ್ತೀಕರಣದೊಳಗೆ, ಜೊತೆಗೆ ಅಂತರ್ಬೋಧೆಯೊಂದಿಗೆ ಮತ್ತು ಇತರ ದೈವೀ ನೆಲೆಯ ಪ್ರಕೃತಿಯ ಬಲದ ಕ್ರಮಾಗತ ಚಿಹ್ನಾಂಕಗಳಲ್ಲಿ ಮತ್ತು ವೈಜ್ಞಾನಿಕ–ಜೀವ (ಆತ್ಮ) ಹೊಂದಿದ ಕುಲವೊಂದನ್ನು (ಮಾನವ ವರ್ಗವೊಂದನ್ನು) ಸ್ಥಾಪಿಸುವ ಮೂಲಕ ಮತ್ತು ಒಂದು ಧರ್ಮಾಧ್ಯಾಪಕ ಪ್ರಭುತ್ವವನ್ನು ಸ್ಥಾಪಿಸುವ ಮೂಲಕ, ಅವತರಣಗೊಂಡು ಬರುವ ಕಾಂತಿಮಯ (ತೇಜೋಮಯ) ಮೆಟ್ಟಿಲುಗಳ ಅನುಕ್ರಮಣಿಕೆಯಲ್ಲಿ ಹಾಗೂ ವೈಜ್ಞಾನಿಕ ಪ್ರಕಾಶದ ಪರಂಪರಾ ಘಟಕದ ರೂಪಾಂತರದ ಮೂಲಕ ಮತ್ತು ಭೂ–ಬದುಕಿನ ಸ್ವಭಾವದ ಶಕ್ತಿಯ ಮೂಲಕವೇ ಪ್ರಕಟಗೊಳ್ಳುತ್ತದೆ. ಹಾಗೂ ಅಧಿಕೃತಗೊಳ್ಳುತ್ತದೆ ಎಂದು ಸೂತ್ರ ಸ್ವರೂಪದಲ್ಲಿ ವಿವರಗಳಿವೆ. ಈ ಸೂತ್ರದ ರಹಸ್ಯವನ್ನು ನಾವು ಅಧ್ಯಯನದ ಮೂಲಕವೇ ಕಂಡುಕೊಳ್ಳಬೇಕಾಗಿದೆ. ಮಾನವ ಕುಲಕ್ಕೆ ಅಂದರೆ 'ಸಾಮ್ರಾಜ್ಯಂ' ವ್ಯವಸ್ಥೆಗೆ 'ವಿಜ್ಞಾನ'ವಾದದ್ದು, ಅದು ಮೂಲದಲ್ಲಿ ವೈರಾಜ್ಯಂ ಹಂತದಲ್ಲಿ 'ವಿಜ್ಞಾನ ಘನಸತ್ತೆ' ಆಗಿರುತ್ತದೆ. ಅದಕ್ಕಾಗಿ ರೂಪಾಂತರಣದ ಸಂದರ್ಭದಲ್ಲಿ ನಾವು ಮೊದಲು ಈ ವೈರಾಜ್ಯ ಹಂತದ ಭಾಷಾ ವ್ಯವಸ್ಥೆಯನ್ನು ಅರಿತುಕೊಳ್ಳಬೇಕಾಗಿದೆ ಮತ್ತೆ ಅದನ್ನು ನಿಯತಿಬದ್ಧವಾಗಿಯೇ ಅನುಷ್ಠಾನಗೊಳಿಸಿಕೊಳ್ಳಬೇಕಾಗಿದೆ.

ಇದನ್ನು ಮಂತ್ರ ಸದೃಶ ಕಾವ್ಯವಾದ 'ಸಾವಿತ್ರಿ' (ದಳ 2 ರೇಣು 5 ಪುಟ 170/71) ದಲ್ಲಿ,

ಜೀವವನು ಬಂಧಗೊಳಿಸಿದ್ದ ಘಟದ ಮೃಣ್ಮಯದ ಗೋಡೆಯೊಡೆದು
ಲೌಕಿಕವ ತೊರೆದು ಸಾಗಲೆನೆ ಊರ್ಧ್ವ ದ್ವಾರವನು ತೆರೆದು ತೆರೆದು,
ಪಥದ ಉದ್ದಕೂ ನಮ್ರಭಾವದಲಿ ತಲೆಬಾಗಿ ಬಾಗಿ ನಿಂತು
ನಿಮ್ನಲೋಕದಾ ಬಾಗಿಲದ ಸರಣಿ ಹೊಸ್ತಿಲನು ದಾಟಿ ಇಂತು

ಪರಮೋಚ್ಚ ಭಾವಪರವಶದಿ ಸ್ಪಂದಗೊಳ್ಳುತಿಹ ದೇವದೂತ
ಸಾಗುತಲಿ ಮತ್ತೆ ತಮ್ಮೊಳಗೆ ತಾವೆ ಪಡೆಯುತಲಿ ದಿವ್ಯ–ಚೇತ
ಆ ದಿವ್ಯ–ಸ್ವಪ್ನದಾಂತರ್ಯ ಭವ್ಯದಾ ಗರ್ಭ–ಕಕ್ಷೆಯಲ್ಲಿ
ಆ ಗರ್ಭಗುಡಿಯಲದನೀಗ ಇರಿಸಿ ಸುಸ್ಥಿರದ–ರಕ್ಷೆಯಲ್ಲಿ

ಜೀವ–ಚೈತನ್ಯ–ದೇವತೆಯ ಬಿಂಬ ಪ್ರತಿಬಿಂಬ ಇಂಬುಗೊಳಿಸಿ
ಖಚಿತದಲಿ ರಚಿಸಿ ಸಮುಚಿತದ–ಕರ್ಮ–ರಚಯಿತರು ಅಲ್ಲಿ ಇರಿಸಿ.
ಆದರೀಗಿದೋ ನಾವರಿಯಬೇಕು ಆದಿಯಲಿ ಮುಖ್ಯವಾಗಿ
ಚಿತ್ತದುತ್ಕ್ರಮಣ ಸಾಧಿಸುವ ಪಥವ ಸೂಕ್ಷ್ಮಾತಿ ಸೂಕ್ಷ್ಮರಾಗಿ

ನಮ್ಮ ಚೇತನವು ತಾ ವಿಕಸಗೊಂಡುಮುಕ್ತಗೊಳುವ ತಾಣ
ಬ್ರಹ್ಮರಂಧ್ರದಿಂದಾರೋಹಗೊಂಡು ಬ್ರಹ್ಮತ್ವ ಪಡೆವ ಪ್ರಾಣ.

ಎಂದು ರೂಪಾಂತರಣದ ರಹಸ್ಯವನ್ನೂ ಮತ್ತು ಅತಿಮಾನಸದ ಆಯಾಮವನ್ನೂ ಸೂತ್ರೀಕರಿಸಿದ್ದಾರೆ. ಈ ಹಂತದಲ್ಲಿ ಅತಿಮಾನವನ ಪ್ರಾರಂಭಿಕ ಸ್ವರೂಪವೂ ರೂಹುಗೊಂಡಿರುತ್ತದೆ. ಇದನ್ನು ಪ್ರಾಚೀನ ಅಧ್ಯಯನದಲ್ಲಿ 'ಬ್ರಹ್ಮಾನಂದ'ದ ಹಂತದಲ್ಲಿ ಸ್ಪಂದಗೊಳ್ಳಲು ಅಪೇಕ್ಷಿಸಲಾಗುತ್ತಿತ್ತು. ಆದರೆ ಇಲ್ಲಿ ಶ್ರೀ ಅರವಿಂದರು, ಮಾನವನ ಸ್ವರೂಪದಲ್ಲಿಯೇ ವಿಕಾಸದ ಹಂತದಲ್ಲಿ ಆರೋಹಗೊಂಡು ಆ ಆನಂದವನ್ನು ಸರ್ವರಿಗೂ ಲಭ್ಯವಾಗುವಂತೆ ಪಥವೊಂದನ್ನು ತೋರುತ್ತಿದ್ದಾರೆ. ಅಲ್ಲಿರುವ ಆ ಅಭೀಪ್ಸೆಯನ್ನು ಹೊಂದಿರುವ ಆತ್ಮದ ತುಡಿತವನ್ನು ಸಂಕೇತಪೂರ್ಣಗೊಳಿಸಿ, 'ನಾನು ಪರಮದಾರ್ಣವದಲ್ಲಿಯೆ ಜನಿತಗೊಳ್ಳುವ ಅಲೆಗಳಲ್ಲಿ ತಲ್ಲೀನಗೊಳ್ಳಲು ಹಾತೊರೆಯುತ್ತೇನೆ; ಆ ಅಲೆಗಳಲ್ಲಿ ಪರಮ ದೇವನಾ ತೋಷದ ವೃತ್ತಗಳು ವಿಸ್ತಾರಗೊಳ್ಳುತ್ತ ಚಲಿಸುವ ಅಲೆಯಾಗಲು ಇಚ್ಛಿಸುತ್ತೇನೆ. ಅಲ್ಲಿರುವ ಆ ಸಲಿಲಕ್ಕೆ ಆಕಾರವಿರದಿದ್ದರೂ ಅದರಂತಗದಲ್ಲಿರುವ

ಭಾವದುದ್ದೀಪ್ತ ಉಲ್ಲಾಸದ ಕಾಂತಿಯಾಗಲಿಚ್ಛಿಸುವೆ, ಆ ನಿತ್ಯ ಶಾಶ್ವತದ ಸ್ವರ್ಗಧಾರೆಗಳಲ್ಲಿ ನಾನು ಒಂದು ಆವರ್ತ–ಸುಳಿಯಾಗುತ್ತೇನೆ. ಆ ಪರಮ ದೇವನ ಎದುರು, ಅವನ ಆ ಪರಮಾನಂದದ ಎದುರು, ಆ ಪರಮ ಭಾಗ್ಯಗಳ ಎದುರು ನಾನಿನ್ನೂ ಪುಟ್ಟ ಪಾತ್ರವಾಗಿದ್ದೇನೆ ಎನ್ನುವದು ನನಗರಿವಿದೆ. ಆದರೆ ಈ ಸೃಷ್ಟಿಯ ಊರ್ಧ್ವದೆದೆಯಿಂದ ಉದಿತಗೊಳ್ಳುವ ಹರ್ಷದ ಸೆಳೆಮಿಂಚಿನ ಜ್ವಾಲೆಯಾಗಿ, ಆ ಭಾವದ ಉತ್ಕರ್ಷದ ತಲವಾಗಿ ಇರಲಿಚ್ಛಿಸುವೆ. ಆ ಪರಮ ಪ್ರಭುವಿನ ವೈಭವದ ಶೋಭೆಯಲಿ ನಾನು ಉನ್ಮತ್ತನಾಗಲು ಇಚ್ಛಿಸುವೆ. ಅದರ ಅತಿಭವ್ಯ ಲಾವಣ್ಯಮಯದ ತೇಜದಿಂದ ನಾನೀಗ ಅಪರಾಜಿತನಾಗಿದ್ದೇನೆ. ಅದರ ಆ ದೀಪ್ತಿತೇಜದ ಚಂದ್ರಹಾಸವದು ನನ್ನ ಮನಸ್ಸನ್ನು ನೇರವಾಗಿ ಪ್ರವೇಶಿಸಿದೆ. ಈ ರೀತಿಯ ಅಪರೂಪದ ಸ್ಪಂದದಲ್ಲಿ ಮಂಗಳಮಯವಾಗಿ ಎನ್ನ ಹೃದಯವೂ ರೂಹುಗೊಳ್ಳುತ್ತದೆ. ಅದಕ್ಕಾಗಿ ನಾನಾಗಲೀ, ನನ್ನ ಜೀವನವಾಗಲೀ ಆ ಪರಮ ದೇವನ ಕೃಪೆಯಲ್ಲಿ ಹೊಳೆಯುತ್ತಿರುವ ತಾರೆಯ ಹುಡಿಯಂತೆ ಇರುವ ಉಲ್ಕೆ ನಾನಾಗಿದ್ದೇನೆ' ಎಂದು, ಮಾನವನ ಬದುಕಿನ ಸ್ವರೂಪವು ವೈಶ್ವಿಕ ಆಯಾಮದಲ್ಲಿ ಯಾವ ಯಾವ ಹಂತದಲ್ಲಿ ರೂಹು ಪಡೆದುಕೊಳ್ಳುತ್ತದೆ ಎಂದು ಅಭಿವ್ಯಕ್ತಿಸಿದ್ದಾರೆ.

**ರೂಪಾಂತರಣದ ಗಮ್ಯ**

ಇನ್ನು ಈ 'ರೂಪಾಂತರಣ'ದ ಮೂಲಕ ಅದರಲ್ಲೂ ಪೂರ್ಣ ಯೋಗದ ಅನುಷ್ಠಾನದ ಮಾರ್ಗದಲ್ಲಿ ಸಾಗಿ 'ಅತಿ ಮಾನವ ಹಂತ'ದಲ್ಲಿ ದರ್ಶನಗೊಳ್ಳುವದು ಏನನ್ನು ಎಂದು ಗಮನಿಸಿದರೆ, 'ಬಲು ಗೂಢ–ಗುಹ್ಯವಾಗಿ ಜೀವನದ ಮೂಲ ನೆಲೆಯೇ ಆಗಿರುವ ಆ ಆದಿಮೂಲವನ್ನು ಸಂಯೋಗಗೊಳ್ಳುವದಾಗಿದೆ. ಏಕೆಂದರೆ ಇದು ಪರಮಾತಿ ಪರಮ ಪರಿಶುದ್ಧವಾಗಿರುವ ಹಾಗು ಇಂದ್ರಿಯಾತೀತವಾಗಿರುವ ಭವ್ಯ–ಭೂಮಕ್ಷೇತ್ರದಲ್ಲಿರುತ್ತದೆ. ಆದರೆ ಇದು ಈ ಮೃಣ್ಮಯದ ಅಲ್ಪ ಬಾಹ್ಯ ಸತ್ತೆಗೆ ಖಚಿತವಾಗಿಯೂ ಕಲ್ಪ–ವ್ಯಾಪ್ತಿಯಲ್ಲಿದ್ದರೂ ರಕ್ಷೆಯಾಗಿಯೇ ಇದೆ. ಆದರೆ ಮೃಣ್ಮಯಕ್ಕೆ ಸಹಜವಾಗಿ ಇರುವ ತಡೆಗೋಡೆಯಿಂದ ದೂರವೇ ಇರುತ್ತದೆ. ಪೂರ್ವದರ್ಶನದ ಸೃಷ್ಟಿ–ದೃಷ್ಟಿಯಲಿ ಮಾತ್ರ ಆ ಕಲ್ಪ–ವ್ಯಾಪ್ತಿ ಸುಸ್ಪಷ್ಟಗೊಳ್ಳುತ್ತದೆ. ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ಇದು ಈ ಮಾಂಸ–ಮಜ್ಜೆಗಳ ಜೀವ–ಪ್ರಕೃತಿಯಲ್ಲಿ ಎಂದಿಗೂ ಸ್ಪಂದಗೊಳ್ಳುವದಿಲ್ಲ. ಏಕೆಂದರೆ ಅಲ್ಲಿರುವ ಸ್ಫಟಿಕ ಶುದ್ಧತೆಯ, ಪವನ–ಪಾವನದ ಮಾಯಕದ ರಂಗದಲ್ಲಿ ಅವನು ಈ ನಿತ್ಯ–

ಬಂಧವನ್ನು ಅರಿಯಲೆಂದು ಈಗ ಆಗಮಿಸುತ್ತಾನೆ, ತನ್ಮೂಲಕ ಅಲ್ಲಿ, ಆ ದೀಪ್ತಿ ತಾನೊಂದು ಅಮೂರ್ತದಾ ರೂಹುಗಳನು ಬೆಳಗುಗೊಳಿಸುತ್ತದೆ. ಇಲ್ಲಿ ಅಧಿಕ್ರಮಣ ಶ್ರೇಣಿಯಲ್ಲಿ ವಿಸ್ಮಯಾದ್ಭುತದ ಉತ್ಕೃಷ್ಟ ಹಂತಗಳು ನಿರ್ಮಾಣಗೊಂಡು, ಸೂಕ್ಷ್ಮಾತಿಸೂಕ್ಷ್ಮ ಸೂಕ್ಷ್ಮಾಂಡ–ಜಡದ ಕಾಲಕರ್ಮವೂ ದಿವ್ಯತೆಯ ಧಾಮವಾಗುತ್ತದೆ. ಹೀಗೆ ಇಲ್ಲಿ ಉದಿತವಾಗಿರುವ ಈ ಭವ್ಯ ಭೂಮ ಸಾಮ್ರಾಜ್ಯವೇ ವೈರಾಜ್ಯವಾಗುತ್ತದೇ, ಏಕೆಂದರೆ ಇದೇ ಇದರ ಧರ್ಮವಾಗಿದೆ. ಆಗ ಆ ಹಂತದಲ್ಲಿ ಅಂದರೆ **'ರೂಪಾಂತರಣದ ಪ್ರಕ್ರಿಯೆ'** ಸಂಪೂರ್ಣಗೊಂಡು **'ಅತಿಮಾನಸ ಪ್ರಜ್ಞೆ'**ಯ ಹಂತ ತಲುಪಿದಾಗ, ಅಲ್ಲಿ –

ಪ್ರಾಣದುಂಬಿರುವ ವರ್ಣಮಾಲೆಗಳ ಆಕಾಶವೊಂದಕೀಗ
ಇದಕೆ ಪ್ರತಿಯಾಗಿ ಉಲ್ಲೇಖಗೊಂಡು ತಾನುದಿತಗೊಂಡಿತೀಗ
ಉಜ್ವಲದ–ದೀಪ್ತಿ ವೈಭವದ–ಬೋಧಿ ಆಚ್ಛಾದ ಛಂದದಿಂದ
ಪುಟಿಪುಟಿದು ಬೆಳೆದು ತಾ ಪ್ರಕಟಗೊಂಡು ಜೊತೆಗಿದೋ ಬಂಧದಿಂದ

ಮಂತ್ರ–ಮಾಯಕದ ರಹಸ್ಯೋದ್ಘಾಟ ಶ್ರುತಿಬದ್ಧಗೊಂಡು ರೂಪ
ದೀರ್ಘಗೊಳ್ಳುತಿದೆ ಅದರ ಸಮ್ಮುಖವು ಪ್ರತಿಬೋಧದಲ್ಲಿ ದೀಪ
ಮನಾಕರ್ಷಕದ –ರೂಪಗಳ ಲೋಕ ತಾನೊಂದು ಪ್ರೇಮವಾಗಿ
ನಮಗದುವು ಈಗ ಅತಿಸನಿಹದೊಳಗೆ ತಾ ನಿತ್ಯ ವಾಸಿಯಾಗಿ,

ಇಲ್ಲಿದೋ ಇದುವು ಅನಾವರಣದಲಿ ಸುಸ್ಪಷ್ಟವಾಗಿ ನಿಲಲು
ಋಷಿಯ–ದೃಷ್ಟಿಯದು ನಿರಾಕಾರವನು ಅನುಭೂತಿಗೊಳಿಸಿಕೊಳಲು
ಆಕಾರ ಸರ್ವ–ಸರ್ವಸ್ವವೆಲ್ಲ ಸೌಂದರ್ಯ ಸ್ವಯಂ–ಪೂರ್ಣ
ಜೊತೆಗಿದೋ ಸರ್ವ ವಸ್ತು–ವಿಷಯಗಳು ಸತ್ಯದಲಿ ಮಿನುಗಿ ವರ್ಣ,

ಪಾರದೀಪಕದ ಆ ದೀಪ್ತಿಕಾಂತಿ ವಾಯುಮಂಡಳವು ಈಗ
ಯೋಗಮಾಯೆಯಲಿ ಬೆಳಗುಗೊಂಡಲ್ಲಿ ಸುಸ್ಪಷ್ಟವಾಯೀತಾಗ

**(ಸಾವಿತ್ರಿ; ದಳ 2 ರೇಣು 2 ಪುಟ 103)**

ಜಾಗ್ರತಗೊಂಡ ಸರ್ವಸ್ವವೂ ಶಕ್ತಿಮಯವಾಗಿರುತ್ತದೆ. ಹೀಗಾಗಿ ಶಕ್ತಿಯು ಜಾಗ್ರತಿಯನ್ನು ರೂಪಿಸುತ್ತದೆ. ಚಿತ್ ಶಕ್ತಿಯಾಗಿರುವ ಹಂತದಲ್ಲಿ ಇದು ಕಾರ್ಯಪ್ರವೃತ್ತಗೊಳ್ಳುತ್ತದೆ. ಶಕ್ತಿಯು ತನ್ನಲ್ಲಿ ತಾನೇ ತನ್ನನ್ನು ರೂಪಾಂತರಣದ

ಹಂತದಲ್ಲಿ ರೂಪಿಸಿಕೊಳ್ಳುತ್ತದೆ. ಇದನ್ನೇ ತಪಸ್ಸನ್ನಾಗಿಸಿ ಸರ್ವ ಕ್ರಿಯೆಗಳ ಆಧಾರವನ್ನಾಗಿಸಿಕೊಳ್ಳುತ್ತದೆ. ಅದಕ್ಕಾಗಿ, ಎಲ್ಲ ಶಕ್ತಿಯೂ ಚಿತ್ತಿನ ರೂಪವೇ ಆಗಿದ್ದು, ಆತ್ಮದಿಂದ, ಪ್ರಕಾಶದ ಮೂಲಕವೇ ಪ್ರಕಟಗೊಳ್ಳುತ್ತದೆ. ಇದು ಅದರ ಮೂಲ ಉದ್ದೇಶವೂ ಆಗಿದೆ. ಆದರೆ ಪ್ರಕಾಶದಲ್ಲಿಯೂ ಸಹಿತ ಹಲವಾರು ವಿಧಗಳಿವೆ. ಇದು ಚಿತ್ತಿನ ಹಲವು ವಿಧದ ರೂಪಾಂತರಣದ ಹಂತದಿಂದ ನಿರ್ಮಾಣಗೊಳ್ಳುತ್ತವೆ. ಶಾಶ್ವತದ ಪ್ರಕಾಶಮಾನವಾದ ಜ್ಯೋತಿಪುಂಜದಿಂದ ಹೊರಹೊಮ್ಮುವ ಏಳು ಕಿರಣಗಳು ಏಕೀಭವಿಸಿಕೊಂಡು, ಸೂರ್ಯನ ತೆರದಲ್ಲಿ ಸಾಕಾರ ಪಡೆದುಕೊಂಡು ಮಾನವನಿಗೆ ಕಾಣುತ್ತದೆ; (ಆದಿತ್ಯವತ್ ತಮಸಃ ಪರಸ್ತಾತ್). ಅವಿನಾಶಿಯಾದ ಹಂತದಲ್ಲಿ ಪ್ರಕಟಗೊಳ್ಳುತ್ತದೆ.

ಇದರ ಮೂಲಕವೇ ಏಳೂ ಏಳೂ ಕಿರಣಗಳು ಲೋಕದ ಸೃಷ್ಟಿಗೆ–ಅನುಷ್ಠಾನಕ್ಕೆ–ಅಭಿವ್ಯಕ್ತಿಗೆ–ರೂಪಾಂತರಕ್ಕೆ ಕಾರಣವಾಗುತ್ತವೆ. ಸತ್–ಚಿತ್–ಆನಂದ–ವಿಜ್ಞಾನ–ಮನಸ್ಸು–ಪ್ರಾಣ–ಅನ್ನ ಇವು ಸಪ್ತ ಆಯಾಮ ಹೊಂದಿದ, ಸಪ್ತ ರೂಪಗಳಲ್ಲಿ ಪ್ರಕಟಗೊಳ್ಳುವ ಚಿತ್ತಿನ ಸ್ವರೂಪಗಳೇ ಆಗಿವೆ. ಇದನ್ನೇ ಜ್ಯೋತಿರ್ಮಯ ಬ್ರಹ್ಮನ ಸಗುಣತತ್ತ್ವ ಎನ್ನುತ್ತಾರೆ. ಇನ್ನು – ಪ್ರಕಾಶ, ಅಗ್ನಿ, ವಿದ್ಯುತ್, ಜ್ಯೋತಿ, ತೇಜಸ್ಸು, ದೋಷ ಮತ್ತು ಛಾಯಾ ಇವು ಏಳು ಜ್ಯೋತಿರ್ಮಯ ಬ್ರಹ್ಮನ ನಿರ್ಗುಣ ತತ್ತ್ವದ ರೂಪಗಳಾಗಿವೆ (ಗುಣಗಳಾಗಿವೆ). ಇದನ್ನು ಸಾಕ್ಷಾತ್ಕರಿಸಿ–ಕೊಳ್ಳುವದೇ ರೂಪಾಂತರಣವಾಗಿದೆ; ಅತಿಮಾನವ ಹಂತವೂ ಆಗಿದೆ.

ಇಂತಿದೋ ಭವವು ಶಿವಮಯವೆ ಆಗಿ ತೆರೆತೆರೆದುಕೊಂಡು ನಿಂದು
ಮತ್ತಿದೋ ಸರ್ವ–ಸಾಮಾನ್ಯ ಭಾವ ಅನುಭಾವ ಹಂತಕಿಂದು
ಸುವಿಶಾಲ ವ್ಯಾಪ್ತ ಉನ್ನಯನಕೇರಿ ಸರ್ವಾಪ್ತ ಛಂದವಾಗಿ
ಸರ್ವಾತಿಸರ್ವ ಕರ್ಮ–ಲೀಲೆಗಳು ಕಾಂತಿಯಲಿ ತೊಳಗಿ ಮಿನುಗಿ
ಆ ಪರಮಭೂಮ ಪರಮಾತ್ಮ ಜ್ಯೋತಿ ಹೊಂಗಿರಣ ಬೆಳಗಿ ಬೆಳಗಿ
ಭವದ ಸರ್ವಸ್ವ ವಸ್ತು–ವಿಷಯದಲಿ ಮಂಗಳದ ಮಿಲನವಾಗಿ

**(ಶ್ರೀ ಅರವಿಂದರ 'ಸಾವಿತ್ರಿ'; ದಳ 11–ಶಾಶ್ವತದ ಬೆಳಗು–ಪುಟ 710)**

---

ಆಧಾರ: **(ಸಾವಿತ್ರಿ; ದಳ 2 ರೇಣು 3 ಪುಟ 130** / ಶ್ರೀ ಅರವಿಂದರ ಸಮಗ್ರ ಸಂಪುಟ 13;87–88 / [ಸಾವಿತ್ರಿ; ಪದ್ಯಾನುವಾದ ಮತ್ತು ಟಿಪ್ಪಣಿಗಳು; 2017] ಶ್ರೀ ಅರವಿಂದರ ಸಮಗ್ರ ಸಂಪುಟ 2;616)

## ಶ್ರೀ ಅರವಿಂದರ ಪ್ರಬಂಧಗಳು

# ‘ದಿವ್ಯತ್ವ ಮತ್ತು ಮಾನವ’

(1910–50 ರ ಅವಧಿಯಲ್ಲಿ ಅವರ ಹಸ್ತಪ್ರತಿಗಳಿಂದ)

**– ಅನು: ಪುಟ್ಟು ಕುಲಕರ್ಣಿ**

### ಕಾವ್ಯದ ಉಗಮಗಳು

ಕಾವ್ಯಾನುಭೂತಿಯ ಸಂಕೇತವನ್ನು ಪರಿಪೂರ್ಣ ನಾದಮಯವಾಗಿಸಿಕೊಂಡು ಜೊತೆಗೆ ಧೃತಗತಿಯಲ್ಲಿ ಪುಟಿತಗೊಳ್ಳುವಂತೆ ಅತ್ಯಂತ ಕೌಶಲ್ಯಪೂರ್ಣವಾಗಿ ಹಾಸು–ಹೊಕ್ಕಾಗಿಸಿರುವಂತೆಯೇ ರೂಹುಗೊಂಡಿರುವ – ಕಾವ್ಯಸ್ಫೂರ್ತಿಯೇ ಆಗಿರುವ – ಪೆಗಾಸಸ್(ರೆಕ್ಕೆಗಳುಳ್ಳ ಅಶ್ವ)ದ ವಿವರಗಳನ್ನು ಒಳಗೊಂಡಂತೆ ಗ್ರೀಕ್ ದೇಶದ ಒಂದು ದಿವ್ಯಕಥೆಯಿದೆ; ಇದು ಆ ‘ಹಿಪ್ಪೋಕ್ರೆನ್’ (ಸೂರ್ಯದೇವತೆ ಮತ್ತು ಅಪೋಲೊ ದೇವತೆಗಳ ಕಾರಂಜಿಗಳು) ಸಲಿಲ ಗೊಳ್ಳುತ್ತಿರುವ ಆ ಶಿಲೆಯ ಮೇಲೆ, ತೇಜಗತಿಯಲ್ಲಿ ಖುರಪುಟಗಳನ್ನು ಅಪ್ಪಳಿಸುತ್ತ ಆಗಮಿಸುತ್ತದೆ. ಇಲ್ಲಿ ಕಾವ್ಯ–ಸಲಿಲವು ಅಂತಃಶಕ್ತಿಯಾಗಿ, ಸಾಮರ್ಥ್ಯಪೂರ್ಣದಿಂದ ಮತ್ತು ರಭಸಾತಿ ರಭಸದ ಧಾರೆಯೊಳಗೆ ಸದಾ ಸಂಚಲಿಸುತ್ತದೆ; ಅಲ್ಲಲ್ಲಿ ಅಲ್ಪ ಸಮಯ ವಿರಮಿಸಿದಂತೆ ಕಂಡರೂ ಅಥವಾ ಅಪಲಾಪದಂತೆ ಭಾಸವಾದರೂ, ಆ ಸಲಿಲವು ಸಂಚಲನಗೊಳ್ಳಲು ಆಯ್ಕೆ ಮಾಡಿಕೊಂಡಿರುವ ತಲ ಮತ್ತು ವಿಶಾಲ ವ್ಯಾಪ್ತಿಯಲ್ಲಿ ಸಲಿಲಗೊಳ್ಳಲು ಆಯ್ಕೆ ಮಾಡಿಕೊಂಡ ಮನಸ್ಸಿನ ಅಪರಿಪಕ್ವತೆ–ಯಿಂದಾಗಿ ಜನಿತಗೊಂಡ ಅಡೆತಡೆ ಮಾತ್ರ ಆಗಿರುತ್ತದೆ.

ಭಾರತದಲ್ಲಿಯೂ ಸಹಿತ ಇದೇ ರೀತಿಯ ಚಿಂತನೆ ಇದೆ; ನಮಗೆ ‘ಸರಸ್ವತಿ’ಯು ಕಾವ್ಯದ ಅಧಿದೇವತೆ, ಅವಳ ಹೆಸರೂ ‘ಸದಾ ಸಂಚಲಗೊಳ್ಳುತ್ತಿರುವ ಸಲಿಲ’ ಎಂದು ಇದನ್ನೇ ಸಂಕೇತಿಸುತ್ತಿದೆ. ಆದರೆ ಸರಸ್ವತಿಯು ಕೇವಲ ‘ಮಧ್ಯವರ್ತಿ’ಯಾಗಿದ್ದಾಳೆ. ಇಲ್ಲಿ ‘ಗಂಗಾಮಾತೆ’ಯೇ ಅಂತಃಪ್ರೇರಣೆಯಾಗಿದ್ದಾಳೆ. ಇವಳು ಆ ಊರ್ಧ್ವಾತಿ ಊರ್ಧ್ವದಲ್ಲಿ ಹಿಮಾಲಯದ ಶಿಖರಾಗ್ರದಲ್ಲಿ ಸ್ಥಿತವಿರುವ ಮಹಾದೇವನ ಶಿರದಿಂದ ವೇಗಗತಿಯಲ್ಲಿ ಅವತರಣಗೊಂಡು ಆಗಮಿಸುವ ಧಾರೆಯಾಗಿದ್ದಾಳೆ. ಆದರೆ ಈ ಮಹಾದೇವನಿರುವದು ಮನುಕುಲದ ಬದುಕು ಹಾಗೂ ಜೀವನದ – ‘ಮನೆ ಮತ್ತು ನಗರ ಜೀವನ’ – ವ್ಯವಸ್ಥೆಯ ಸೀಮಿತದ ಮನೋಭಾವಕ್ಕಿಂತ ತೀರ ತೀರ ಔನ್ನತ್ಯದಲ್ಲಿದ್ದಾನೆ.

ಕಾವ್ಯವೆಂದರೇನೆ ಅಂತಃಪ್ರೇರಣೆ; ಹೀಗಾಗಿ ಸರ್ವ ಕಾವ್ಯವೂ ಅಂತಃಪ್ರೇರಣೆಯೇ ಆಗಿದೆ. ಮಾನವನ ಚಿಂತನಾ ವಲಯಕ್ಕೆ ಸ್ಪಂದಗೊಳ್ಳಲು, ಮಿಡಿಯಲು, ಆ ಊರ್ಧ್ವದ ಚಿಂತನಾಶೀಲ ಜೀವಾಂಶ ಸಂಘಟನೆಯ ಸಹಾಯದಿಂದ ಜೀವಸ್ಪಂದವನ್ನು ನಡೆಸುವ ಕ್ರಿಯೆಯಾಗಿದೆ; ಇದು ಮನಸ್ಸಿನಲ್ಲಿ ದಾಖಲಿಸಲ್ಪಡುತ್ತದೆ, ಆದರೂ ಇದು ಆ ಔನ್ನತ್ಯದ ಶುದ್ಧಜ್ಞಾನದ ತತ್ತ್ವಗಳಿಗೆ ನೇರವಾಗಿ ಸಂಪರ್ಕವನ್ನು ಪಡೆದುಕೊಂಡಿರುತ್ತದೆ, ಅಥವಾ ಇದು ಮನಸನ್ನೂ ಮೀರಿರುವ ಚಿಂತನಾಶೀಲ ದೃಷ್ಟಿಕೋನಕ್ಕೆ ಸಂಬಂಧ ಹೊಂದಿರುತ್ತದೆ. ಹೀಗಾಗಿ ಇದು ನೈಜ ಶ್ರುತಿಯಾಗಿದೆ. ಪ್ರವಾದಿತ್ವವಾಗಲೀ ಅಥವಾ ರಹಸ್ಯೋದ್ಘಾಟನೆಯ ಬಲವಾಗಲೀ ಇವು ಆ ದ್ರವ್ಯಾಂಶವನ್ನು ದೃಷ್ಟಿಸಲು ಶಕ್ತವಾಗಿರುತ್ತವೆ; ಈ ಅಂತಃಪ್ರೇರಣೆಯು ಸೂಕ್ತವಾದ ಅಭಿವ್ಯಕ್ತಿಯ ಬಗೆಗೆ ಸಂಪೂರ್ಣವಾಗಿ ಮನನಗೊಂಡಿರುತ್ತದೆ. ಇದು ಯಾವ ರೀತಿಯಿಂದಲೂ ಯಾಂತ್ರೀಕೃತವಾಗಿ ನಿರ್ಮಿತಗೊಂಡಿರುವದಿಲ್ಲ; ಅಲ್ಲದೇ ಕಾವ್ಯಬಂಧದಲ್ಲಿ ಸಂರಚಿತಗೊಂಡಿರುವ ಕಾವ್ಯವೂ ಅಲ್ಲ, ಇದು ಕೇವಲ ಸೃಷ್ಟಿಯೂ ಅಲ್ಲ, ಆದರೆ ಶಾಶ್ವತದ ಸ್ವರೂಪದಲ್ಲಿ ಅಸ್ತಿತ್ವದಲ್ಲಿರುವ ಯಾವುದೋ ಒಂದು ಹಂತದಿಂದ ಪ್ರಕಟಗೊಂಡ ಸ್ವರೂಪವಾಗಿದೆ. ಪ್ರಾಚೀನ ಚಿಂತಕರು ಈ ಸತ್ಯವನ್ನು ಅರಿತುಕೊಂಡಿದ್ದರು. ಇದನ್ನೇ ತಮ್ಮ ಕಾವ್ಯಾಭಿವ್ಯಕ್ತಿಗೆ ಮತ್ತು ಪ್ರವಾದಿ ವಚನಗಳಿಗೆ ಅನ್ವಯಿಸಿದರು. ಅದಕ್ಕಾಗಿಯೇ ಕವಿ ಅಥವಾ ಪ್ರವಾದಿ, ಸೃಷ್ಟಾರ ಮತ್ತು ದ್ರಷ್ಟಾರ, ಸೋಫೋಸ, ವೇಟ್ಸ ಎಲ್ಲರೂ ಇದನ್ನೇ ಅನ್ವಯಿಸಿಕೊಂಡರು.

ಆದರೆ ಅವು ಅಭಿವ್ಯಕ್ತಗೊಂಡು ಪ್ರಕಟವಾಗುವಾಗ ಅಲ್ಲಿ ವಿಭಿನ್ನತೆಗಳು ನಿರ್ಮಿತಿಗೊಂಡವು. ಕಾವ್ಯದ ಮಹತ್ತರವಾದ ಸಂಚಲನವು ಮನಸ್ಸು ಸಂಪೂರ್ಣ ಪ್ರಶಾಂತ ಸ್ಥಿತಿಯಲ್ಲಿ ಇದ್ದಾಗ ಮತ್ತು ಅಲ್ಲಿ ಚಿಂತನಾಶೀಲ ತತ್ತ್ವಗಳು ಊರ್ಧ್ವದಲ್ಲಿ ಹಾಗೂ ಬುದ್ಧಿಯ (ಮೆದುಳಿನ) ಆಚೆ ಆಚೆ ಆಚೆ, ಅದರಲ್ಲೂ ಚಿಂತನಾಶೀಲ ಚಿತ್ತವು ಸಹಸ್ರದಳ ಪದ್ಮದ ಆಚೆ, ಸೂಕ್ತವಾಗಿರುವ ತನ್ನದೇ ವೈರಾಜ್ಯದಲ್ಲಿ ಕಾರ್ಯಪ್ರವೃತ್ತವಾಗಿರುವಲ್ಲಿ ಮಾತ್ರ ಈ ಕಾವ್ಯದ ಸಂಚಲನವು ಆಗಮಿಸುತ್ತದೆ. ಇದರ ಫಲಿತವೇ ಪರಿಪಕ್ವ ಅಂಶವಾಗಿ ಮತ್ತು ಅಭಿವ್ಯಕ್ತಿಯಾಗಿ, ಶಾಶ್ವತದ ಸತ್ಯವನ್ನು ತೋರಿಸುತ್ತಿರುವ 'ವೇದಗಳಾಗಿವೆ'. ಈ ಉದಾತ್ತವಾದ ಕಲ್ಪಕತೆಯು ಪ್ರತಿಭೆಯನ್ನು ಔನ್ನತ್ಯಕ್ಕೇರಿಸುತ್ತದೆ; ಕೇವಲ ಪ್ರತಿಭೆಯು ಸಾಮಾನ್ಯ ಪ್ರಜ್ಞೆಯನ್ನು ಮತ್ತು ಅನುಭಾವವನ್ನು ಮಾತ್ರ ಉನ್ನತೀಕರಣಗೊಳಿಸುತ್ತದೆ. ಆದರೆ

ಆ ಬೃಹತ್ ಮತ್ತು ಮಹತ್ತಾಗಿರುವ ಚಿತ್ತಶಕ್ತಿಯು ಮಾತ್ರ ಈಗಲೂ ನಮ್ಮ ವಿಕಾಸದ ಹಂತದಲ್ಲಿ ಸಾಮಾನ್ಯ ಹಂತದಿಂದ ತದುತ್ತರದಲ್ಲಿಯೇ ತನ್ನನ್ನು ಸ್ಥಿತಗೊಳಿಸಿಕೊಂಡಿದೆ. ಸಾಧಾರಣವಾಗಿ, ನಾವು ಈ ಸ್ಫೂರ್ತಿ ಮತ್ತು ಅದರ ಪ್ರಕಟೀಕರಣದ ಕ್ರಿಯೆಯನ್ನು, ಅಲ್ಲಿ ಪ್ರತಿಫಲಿತವಾಗಿ ಅಥವಾ ಅನುಸರಣೆಯಲ್ಲಿ ದ್ವಿತೀಯವಾಗಿ ಉತ್ಪತ್ತಿಗೊಂಡಿರುವದನ್ನು, ಮಂದವಾಗಿ, ಅನಿಶ್ಚಿತತೆಯಲ್ಲಿ ಪ್ರಕ್ರಿಯೆಯಲ್ಲಿ ಸಾರಗೊಂಡಿರುವದನ್ನು ಕಾಣುತ್ತೇವೆ. ಆದರೆ ಈ ದ್ವಿತೀಯ ಹಂತದ ಮತ್ತು ನಿಮ್ನ ಕ್ರಿಯೆಯೂ ಸಹಿತ ಅಷ್ಟೇ ಮಹತ್ತಿನಿಂದ ಕೂಡಿದ್ದು ಇದು ಶೆಕ್ಸಪೀಯರ್, ಹೋಮರ ಮತ್ತು ವಾಲ್ಮೀಕಿಯವರಂತಹ ಮಹತ್ವದ ವ್ಯಕ್ತಿಗಳನ್ನು ನೀಡಿದೆ. ಇಲ್ಲಿ ತೃತೀಯ ಹಂತವೂ ಇದ್ದು, ಮತ್ತು ಇದಕ್ಕಿಂತ ಸ್ಫೂರ್ತಿಯ ಅಂಶವೂ ಇದೆ. ಇವುಗಳ ಸಲುವಾಗಿಯೇ ನಮ್ಮಲ್ಲಿ (ನಮ್ಮ ಶರೀರದ ವ್ಯವಸ್ಥೆಯಲ್ಲಿ) ಜ್ಞಾನದ ರೂಪಣೆಗೆ ಮನೋಮಯ ಸ್ವರೂಪದ ಮೂರು ಉಪಕರಣಗಳ ಸಂರಚನೆ ಇದೆ. ಇವುಗಳಲ್ಲಿ 'ಹೃದಯ' ಅಥವಾ ಸಂವೇದನಾತ್ಮಕವಾಗಿ ಪ್ರಕಾಶಿತಗೊಂಡ ಮನಸ್ಸು (Emotionally realizing mind), ಯುಕ್ತಿ(ತರ್ಕ)ಸಮ್ಮತ ಪ್ರಜ್ಞೆಯ ತನ್ನದೇ ಅಂಶಗಳ ಮೂಲಕ ಮತ್ತು ಆ ಹಂತದ ಅವಲೋಕನದಲ್ಲಿ, ಅಭಿನವದ (ರಮ್ಯತೆಯ) ಮತ್ತು ಸ್ಮೃತಿಯ ಮೂಲಕ, ಮತ್ತು ಅಂತರ್ಜ್ಞಾನದ–ಮೇಧಾ ಮೂಲಕ ಮತ್ತು ಅಂತಿಮವಾಗಿ ಹಾಗು ಔನ್ನತ್ಯದ ಹಂತದಲ್ಲಿ ಈ ವೈಚಾರಿಕ ತತ್ತ್ವವು ತನ್ನ ಅಂತಃಪ್ರೇರಣೆಗಳನ್ನು ಇಲ್ಲಿಯೂ ರೂಪಿಸುವದರಿಂದ ಮಾತ್ರ ಮಹತ್ತರವಾದ ಕಾವ್ಯ (ಮಹಾಕಾವ್ಯವು) ತನಗೆ ತಾನೇ ಸ್ವರೂಪಗೊಂಡು, ದ್ರಷ್ಟಾರ(ಕವಿಯ)ನ ಮೂಲಕ ತಾನೇ ಅಭಿವ್ಯಕ್ತಗೊಳ್ಳುತ್ತದೆ.

ಆದರೆ ಒಂದು ವೇಳೆ ಈ ಅಂತಃಪ್ರೇರಣೆಯ ಬೌದ್ಧಿಕ ಸ್ತರವು ಸ್ವಭಾವಜನ್ಯದ ಅನುಸಾರದಲ್ಲಿ ಕ್ರಿಯೆಗಿಳಿಯಲು ಅಸಮರ್ಥವಾಗಿದ್ದಲ್ಲಿ, ಆಗ 'ಕಾವ್ಯಕ್ಕೆ' ನೇರವಾಗಿ ಹೃದಯದಲ್ಲಿ ಅವತರಣಗೊಳ್ಳುವದು ಸೂಕ್ತವಾಗುತ್ತದೆ, ತದನಂತರ ಅಲ್ಲಿಂದ ಈ ಪ್ರಜ್ಞೆಯು ಅನುರಾಗ ಮತ್ತು ಸಂವೇದನಾಭಾವದಲ್ಲಿ ವರ್ಣಮಯಗೊಂಡು, ನೇರವಾಗಿ ಅವಲೋಕನಗೊಳ್ಳುತ್ತಿರುವ ಬೌದ್ಧಿಕ (ಪ್ರಜ್ಞಾ) ಹಂತದಿಂದ ಸ್ವರೂಪಗೊಳ್ಳುವಂತೆ ಇರುತ್ತದೆ. ತರ್ಕಯುಕ್ತಿ ಸಮ್ಮತವಾಗಿರುವ ಪ್ರಜ್ಞಾ ಹಂತದಿಂದ ಬರೆಯಲ್ಪಟ್ಟಿರುವ ಕಾವ್ಯವು, ಚತುರೋಕ್ತಿಗಳ ಅಹಮಿಕೆಯ ಆತ್ಮ ಶ್ಲಾಘನೆ, ತರ್ಕ ಪ್ರಾಧಾನ್ಯತೆ, ತರ್ಕ–ವಿತರ್ಕಗಳ ವಾದಗಳಲ್ಲಿ, ಶಬ್ದಾಡಂಬರದ ವಾಗ್ಮಿತೆಯ ತಿರುವುಗಳಲ್ಲಿ, ಅಲಂಕಾರಪೂರ್ಣ ಕಲ್ಪನಾ–ವಿಲಾಸಗಳಲ್ಲಿ,

ಪಾಂಡಿತ್ಯಪೂರ್ಣವಾಗಿ ಅನುಕರಣದಲ್ಲಿ ಸೂಕ್ತಗೊಂಡಿರುತ್ತದೆ. ಆದರೆ ಇದು ಆ ಹಂತದಿಂದ ತನ್ನನ್ನು ತಾನೇ ಊರ್ಧ್ವಗೊಳಿಸಿಕೊಂಡು ರೂಪಾಂತರಣಗೊಳಿಸಿ–ಕೊಳ್ಳುವದಿಲ್ಲ. ಇದನ್ನೇ ಒಮ್ಮೊಮ್ಮೆ ಶ್ರೇಷ್ಠ ಕಾವ್ಯ ಅಥವಾ ಶಾಸ್ತ್ರೀಯ ಕಾವ್ಯವೆಂದು ಪರಿಗಣಿತವಾಗುತ್ತಿದೆ. ಆವೇಶಭರಿತವಾಗಿದ್ದರೂ ಅತ್ಯುತ್ತಮವಾಗಿರುವ ಆದರೆ ಯಾವುದೇ ಸಂವೇದನೆಯ ಸ್ಪಂದವಿಲ್ಲದೇ ಮತ್ತು ಔನ್ನತ್ಯಗೊಳದ ಹಂತದಲ್ಲಿ ರಚಿತಗೊಂಡಿರುವ ಪೋಪ್ ಮತ್ತು ಡ್ರೈಡನ್ ಕಾವ್ಯಗಳಲ್ಲಿ ಕಾಣುತ್ತೇವೆ. ಅದು ತನ್ನದೇ ಆದ ಅಂತಃಸ್ಫೂರ್ತಿಯನ್ನು ಹೊಂದಿದೆ; ತನ್ನದೇ ಆದ ಸತ್ಯವನ್ನೂ ಜೊತೆಗೆ ಮೌಲ್ಯವನ್ನೂ ಹೊಂದಿದೆ; ಈ ಹಂತವನ್ನು, ಅದರದೇ ಪಥದಲ್ಲಿ ಖಚಿತವಾಗಿಯೂ ಶ್ಲಾಘನೀಯವಾಗಿಯೇ ಇದೆ. ಆದರೆ ಅದು ಯಾವಾಗ ಆರೋಹಣಾ ಹಂತದಲ್ಲಿ ಔನ್ನತ್ಯಗೊಳ್ಳುವದೋ ಮತ್ತು ಪ್ರಜ್ಞಾಹಂತದ ಅಭಿವ್ಯಕ್ತಿ–ಯಾಗುವದೋ ಅಥವಾ ಹೃದಯಾನುಭಾವವಾಗಿ ಅಭಿವ್ಯಕ್ತಗೊಳ್ಳುವದೋ ಆಗ ಮಾತ್ರ ಇದು 'ಮಹತ್–ಕಾವ್ಯ'ವಾಗುವದು.

ಇಲ್ಲಿ ಎಲ್ಲದಕ್ಕೂ ಅವಶ್ಯವಾಗಿರುವದೆಂದರೆ ಕೇವಲ ಬೆಳಕು (ಜ್ಞಾನದ ಪ್ರಾರಂಭದ ಹಂತ) ಮಾತ್ರ ಆಗಿರದೇ, ಸುಸ್ಪಷ್ಟತೆಗಿಂತ ದೈವೀಶಕ್ತಿ, ನಿಖರತೆಗಿಂತ ಉತ್ಸಾಹಪೂರ್ಣತೆ, ಅವಶ್ಯಕತೆ ಇದೆ. ಏಕೆಂದರೆ ಇವೆಲ್ಲವನ್ನೂ ಧಾರಣ ಮಾಡಿಕೊಳ್ಳುವಲ್ಲಿ ಹೃದಯವು ಸದಾ ಸಕ್ಷಮ ಸಾಮರ್ಥ್ಯ ಹೊಂದಿದ ಸಾಧನವಾಗಿದೆ. ಹೀಗಾಗಿ, ಈಗ ಕಾವ್ಯವು 'ಮಹತ್–ಕಾವ್ಯ'ವಾಗುವದು ಅಲ್ಲಿ ಈ ರೀತಿಯ ಉತ್ಸಾಹವಾದರೂ ಇರಬೇಕು ಇಲ್ಲವೇ ಪರಮಾನಂದವಾದರೂ ಇರಬೇಕು.

ಈ ರೀತಿಯಲ್ಲಿ ಹೃದದಯದಿಂದ ಉದಿತಗೊಂಡ ಕಾವ್ಯವು ಸಾಮಾನ್ಯವಾಗಿ ಪ್ರಕ್ಷುಬ್ಧವಿದ್ದಂತೆ ತೋರುತ್ತದೆ; ನಮ್ಮದೇ ಚಿಂತನಗಳು ಮತ್ತು ಕಲ್ಪನೆಗಳು ಇಲ್ಲಿ ಊರ್ಧ್ವದಿಂದ ಅವತರಣಗೊಳ್ಳುತ್ತಿರುವ ಪರಿಶುದ್ಧವಾದ ಧಾರೆಯ ಜೊತೆಗೆ ನಮ್ಮ ಮೂಲದಾಧಾರದಿಂದ ಮೇಲ್ಮುಖವಾಗಿ ಪ್ರಕ್ಷುಬ್ಧತೆಯಲ್ಲಿ ಸಂಚಲನಗೊಳ್ಳುವ ಧಾರೆಯು ಮಿಶ್ರಣಗೊಳ್ಳುತ್ತದೆ, ನಮ್ಮ ಉತ್ತೇಜಿತ ಭಾವನೆಗಳು ಸಹಿತ ಅತಿಶಯೋಕ್ತಿಯ ಅಭಿವ್ಯಕ್ತಿಯನ್ನೇ ಅಪೇಕ್ಷಿಸುತ್ತವೆ. ನಮ್ಮ ಸೌಂದರ್ಯ ಪ್ರಜ್ಞೆಯ ಅನುಭವದ ಸರಣಿಗಳು ಮತ್ತು ಭವಿತವ್ಯದ ಕುರಿತ ಕಲ್ಪನೆಗಳು ಸಹಿತ, ತಮಗೆ ಲಭ್ಯವಾಗುವದಕ್ಕಿಂತ ಹೆಚ್ಚಿನ ಪ್ರಮಾಣದ ತೃಪ್ತಿಯನ್ನೇ ಬಯಸುತ್ತವೆ. ಇಂತಹ ಸ್ವರೂಪದ ಕಾವ್ಯವು ಸ್ಫೂರ್ತಿಯನ್ನೇನೋ ರೂಪಿಸಬಹುದು. ಆದರೆ ಇದು

ಸಾರ್ವಕಾಲಿಕ ಸೂಕ್ತವಾಗುವ ಗುಣವನ್ನು ಪಡೆದುಕೊಂಡಿರುವದಿಲ್ಲ ಅಥವಾ ಅನಿವಾರ್ಯವೂ ಆಗಿರುವದಿಲ್ಲ. ಇಲ್ಲಿ ಕೆಲವೊಮ್ಮೆ ಎರಡು ರೀತಿಯ ಸ್ಫೂರ್ತಿಯೂ ಇರುವದು, ಒಂದು ಔನ್ನತ್ಯದ ಅಥವಾ ಅತ್ಯಾನಂದದ ಇಲ್ಲವೇ ನಿಮ್ನ ಹಂತದ ಅಥವಾ ಭಾವನಾತ್ಮಕ ಸ್ವರೂಪದಲ್ಲಿ, ಜೊತೆಗೆ ಈ ನಿಮ್ನ ಹಂತದಲ್ಲಿನ ಅಡೆತಡೆಗಳಿಂದ ಊರ್ಧ್ವದ ಅಂಶವನ್ನೂ ಸೆಳೆಯುವ ಹಂತಗಳಲ್ಲಿ ಇರುತ್ತದೆ. ಈ ಹಂತವು ಸಮೃದ್ಧತೆಯಿಂದ ತುಂಬಿರುವಂತೆ ರೂಪುಗೊಂಡಿರುವ ಅಥವಾ ರಮ್ಯಕಾವ್ಯದ ಉಗಮಕ್ಕೆ ಕಾರಣವಾಗಿದೆ. ಇಲ್ಲಿ ಅಭಿವ್ಯಕ್ತಿಯಲ್ಲಿ ಅಪರಿಮಿತವಾದ ಸಮೃದ್ಧತೆಯಿಂದ ಕೂಡಿರುವ ಉತ್ಕೃಷ್ಟ ಕಾವ್ಯದ ಉಗಮವಾಗಿದೆ. ಇಲ್ಲಿ ಬಾಹುಳ್ಯವೇ ಅಧಿಕವಾಗಿ, ಪುನರುಕ್ತಿಗಳೂ ಅಪಾರ ಪ್ರಮಾಣದಲ್ಲಿ ಅನಾವಶ್ಯಕವಾಗಿ ಅಭಿವ್ಯಕ್ತಗೊಂಡಿರುತ್ತವೆ.

ಆದರೆ ಶ್ರೇಷ್ಠ ಕಾವ್ಯವು ಮಾತ್ರ ನೇರವಾಗಿ “ಆ ಸೂಕ್ತ–ಉಗಮ ಕೇಂದ್ರದಿಂದಲೇ ಆಗಮಿಸುತ್ತದೆ, ಆ ಉಗಮ–ಕೇಂದ್ರವು ರಿಕ್ತವೂ ಆಗಿರಬಹುದು ಅಥವಾ ಸಮರ್ಥವೂ ಆಗಿರಬಹುದು, ಅಲಂಕಾರರಹಿತವಾಗಿ ಅಥವಾ ಉದಾತ್ತವೂ ಆಗಿರಬಹುದು, ಅಥವಾ ಅತ್ಯಂತ ಸಮೃದ್ಧತೆಯ ಸಂಪನ್ನತೆಯಿಂದ ಮತ್ತು ಭವ್ಯತೆಯಿಂದ ಕೂಡಿರಬಹುದು; ಅದು ತನ್ನಿಚ್ಛೆಯಂತೆಯೇ ರಮ್ಯತೆಯಿಂದ ಅಥವಾ ಶಾಸ್ತ್ರೀಯ ಗುಣದಿಂದ ಕೂಡಿರಬಹುದು; ಆದರೆ ಯಾವುದೇ ಸಂದರ್ಭದಲ್ಲೂ ಅದು ಸರಿಯಾದ ವಸ್ತು–ವಿಷಯದ ಕುರಿತು ತನ್ನ ಉದ್ದೇಶಕ್ಕಾಗಿ ಅನುಭೂತಿಯನ್ನೇ ಹೊಂದಿರುತ್ತದೆ. ಯಾವಾಗಲೂ ಉದಾತ್ತತೆಯಿಂದ ಅಥವಾ ಹರ್ಷಾತಿರೇಕದಿಂದಲೇ ಇರುವದು ಅನಿವಾರ್ಯವಾಗಿದೆ.

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ.ನಗರ 1ನೇ ಹಂತ, ಬೆಂಗಳೂರು

ದಿನಾಂಕ 10–02–2023 ಶುಕ್ರವಾರ ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆ ವತಿಯಿಂದ ಜ್ಯೋತಿ ಪ್ರಸರಣ ಕಾರ್ಯಕ್ರಮ ನೆರವೇರಿಸಲಾಯಿತು. ಸಂಸ್ಥೆಯ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್ ಜ್ಯೋತಿ ಬೆಳಗುವುದರ ಮೂಲಕ ಚಾಲನೆ ನೀಡಿದರು. ಮುಖ್ಯ ಅತಿಥಿಗಳಾಗಿ ಜಯನಗರ ವಿಧಾನಸಭಾ ಕ್ಷೇತ್ರದ ಶಾಸಕಿ ಶ್ರೀಮತಿ ಸೌಮ್ಯರೆಡ್ಡಿ ಆಗಮಿಸಿದರು. ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಶಾರದಾಂಬಾ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ತೋರಿದ ವಿದ್ಯಾರ್ಥಿಗಳಿಗೆ ಸ್ಮರಣ ಸಂಚಿಕೆಗಳನ್ನು ನೀಡಲಾಯಿತು. ಸಂಸ್ಥೆಯ ಶಿಕ್ಷಕ ವೃಂದ, ಸಂಸ್ಥೆಯ ಮಹಾಪ್ರಬಂಧಕರು, ಪೋಷಕರು ಉಪಸ್ಥಿತರಿದ್ದರು. ಶಿಕ್ಷಕ ವೃಂದದವರು ಜ್ಯೋತಿಯನ್ನು ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಹಸ್ತಾಂತರಿಸಿದರು. ಆನಂತರ, ಹತ್ತನೇ ತರಗತಿ ವಿದ್ಯಾರ್ಥಿಗಳು ಒಂಭತ್ತನೇ ತರಗತಿ ವಿದ್ಯಾರ್ಥಿಗಳಿಗೆ ಮರು ಹಸ್ತಾಂತರ ಮಾಡಿದರು. ಶ್ರೀಮಾತಾರವಿಂದರ ಪಾದ ಚರಣಗಳಿಗೆ ಪುಷ್ಪವನ್ನು ಸಮರ್ಪಿಸಲಾಯಿತು. ನಾಡಗೀತೆಯೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಯಿತು.

ದಿನಾಂಕ 21ನೇ ಫೆಬ್ರವರಿ 2023ರ ಮಂಗಳವಾರ ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್ ವತಿಯಿಂದ ಶ್ರೀಮಾತೆಯವರ ಜನ್ಮದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 7.30 ರಿಂದ 7.50 ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರ ವಿತರಿಸಲಾಯಿತು. ತತ್ಸಬಂಧ ಸಾಯಂಕಾಲ 5.00 ರಿಂದ 6.30 ಗಂಟೆಯವರಗೆ “Work of Works of the Twin Avatars” ಎಂಬ ವಿಷಯವಾಗಿ ಶ್ರೀ ಎಸ್.ಎಸ್. ಲಹರಿ (ಟ್ರಸ್ಟಿ, ಶ್ರೀ ಅರವಿಂದೋ ಸಂಕೀರ್ಣ) ಇವರು ಉಪನ್ಯಾಸ ನೀಡಿದರು. ಉಪನ್ಯಾಸ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು ಮತ್ತು ಶ್ರೀಮಾತಾರವಿಂದರ ಭಕ್ತರು ಭಾಗವಹಿಸಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಆಸಕ್ತರು ಭಾಗವಹಿಸಿದ್ದರು.

**"On Concentration"** ವಿಷಯ ಕುರಿತು ದಿನಾಂಕ 10ನೇ ಫೆಬ್ರವರಿ 2023 ರಿಂದ 20ನೇ ಮಾರ್ಚ್ 2023 ವರೆಗೂ ಶ್ರೀ ಅರವಿಂದ ಸಂಕೀರ್ಣದ ಸಾಂಸ್ಕೃತಿಕ ಸಭಾಭವನದಲ್ಲಿ ಫೋಟೋ ಚಿತ್ರಪ್ರದರ್ಶನ ಆಯೋಜಿಸಲಾಗಿದೆ.

## ಶ್ರೀ ಅರವಿಂದೋ ಸೊಸೈಟಿ ಶಾಖೆ, ಧಾರವಾಡ

ದಿನಾಂಕ 06–01–2023 ರಂದು **"A Call to the Youth of India - Sri Aurobindo & The Mother"** ಕೃತಿಯನ್ನು ಧಾರವಾಡದ ಸರ್ಕ್ಯೂಟ್ ಹೌಸ್‌ನಲ್ಲಿ ಕೇಂದ್ರ ಕಲ್ಲಿದ್ದಲು, ಗಣಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಗೌರವಾನ್ವಿತ ಶ್ರೀ ಪ್ರಹ್ಲಾದ ಜೋಶಿ ರವರಿಂದ ಲೋಕಾರ್ಪಣೆ–ಗೊಳಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಎ.ಬಿ. ದೇಸಾಯಿ, ಅಧ್ಯಕ್ಷರು, ಶ್ರೀ ಅರವಿಂದೋ ಸೊಸೈಟಿ ಶಾಖೆ, ಧಾರವಾಡ; ಶ್ರೀ ಜಗದೀಶ್ ಶೆಟ್ಟರ್, ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ; ಶ್ರೀ ಅಮೃತ್ ದೇಸಾಯಿ, ಶಾಸಕರು; ಶ್ರೀ ಅರವಿಂದ್ ಬೆಲ್ಲದ್, ಶಾಸಕರು; ಶ್ರೀ ಗುರುದತ್, ಧಾರವಾಡ ಜಿಲ್ಲಾಧಿಕಾರಿಗಳು; ಪೋಲಿಸ್ ಮುಖ್ಯ ಅಧಿಕ್ಷಕರು; ಧಾರವಾಡ ಮತ್ತು ಶ್ರೀ ಅರವಿಂದೋ ಸೊಸೈಟಿ ಧಾರವಾಡದ ಪದಾಧಿಕಾರಿಗಳು ಹಾಜರಿದ್ದರು.

## ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ಹೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926 (Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ತ್ಯ ಪುರುಷ |
| 34 | ಭವಾನಿ ಭಾರತಿ |
| 35 | ಶಿಕ್ಷಣ |
| 36 | ಯೋಗಾರಂಭ |

**STATEMENT ABOUT OWNERSHIP AND OTHER PARTICULARS ABOUT NEWSPAPER AKHIL BHARAT PATRIKA**

**FORM IV**

1. Place of Publication : Bangalore

2. Periodicity of its Publication : Monthly

3. Printer's Name : Dr. Ajit Sabnis
   Nationality : Indian
   Address : No. 39 & 38 (P) 30th Main, 9th Cross, Sri Aurobindo Marg, J P Nagar I Phase, Bangalore - 560 078.

4. Publisher's Name : Dr. Ajit Sabnis
   Nationality : Indian
   Address : No. 39 & 38 (P) 30th Main, 9th Cross, Sri Aurobindo Marg, J P Nagar I Phase, Bangalore - 560 078.


5. Editor's Name : Sri Puttu Parashuram Kulkarni
   Nationality : Indian
   Address : No. 39 & 38 (P) 30th Main, 9th Cross, Sri Aurobindo Marg, J P Nagar I Phase, Bangalore - 560 078.

6. Names and addresses of individuals who own the newspaper and partners or shareholders holding More than one per cent of the total capital.
   Name : Sri Aurobindo Society
   Nationality :
   Address : No. 11, Saint Martin Street, Puducherry - 605 001.

I, Dr. Ajit Sabnis, hereby declare that the particulars given above are true to the best of my knowledge and belief.

Sd/-

Date : 28-02-2023 Dr. Ajit Sabnis



ಫೋಟೋ: ಇಮೇಜಿಂಗ್ ಸಾವಿತ್ರಿ

ಪರಮ ಪರಿಶುದ್ಧ ಪವಿತ್ರಾತ್ಮ ತಾನೇಕಾಕಿ ಜ್ಯೋತಿ ಪಥದಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 6 ರೇಣು 2 ಪುಟ 448)**

**RNI No. 22511/1971**
No. of Pages **60 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

ದೀಪ್ತಿ ತಾನೊಂದು ಪ್ರದೀಪ್ತತೆಯಲ್ಲಿ ಆವರಣಗೊಂಡು ಅವಗೆ
ಸುವಿಶಾಲ ವ್ಯಾಪ್ತ ಪರಮಾತಿಪರಮ ನಿರ್ವಿಶೇಷವದು ಹೀಗೆ
ಅನಂತಾನಂತ-ದೃಷ್ಟಿ ತಾನೀಗ ಪಾವಿತ್ರ್ಯ-ವಜ್ರ-ಖಚಿತ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 15 ಪುಟ 297)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.